ಬೆಲೆ : ಎರಡು ಆಣೆ

ಕರ್ಮವೀರ

KARMAVEER
WEEKLY
HUBLI
MARCH 3
1947

ಸಂಪಾದಕರು : ಹ. ರಾ. ಪುರೋಹಿತ, ಎಂ. ಎ.
ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ
Editor H. R. Purohit, M. A.

ಹುಬ್ಬಳ್ಳಿ, ಸೋಮವಾರ ತಾರೀಖು ೩—೩—೧೯೪೭

ಸಾಮ್ರಾಜ್ಯವಾದಿ ಸರಂಜಾಮುಗಳನ್ನು ತ್ಯಜಿಸಬೇಕು

ಬದಲಾದ ಜಗತ್ತಿನಲ್ಲಿ ಬ್ರಿಟನ್ನಿನ ಹೊಸ ಭೂಮಿಕೆ
ಸಾಗರೋತ್ತರ ಸೈನ್ಯವನ್ನು ಕರೆಸದೆ ಉಳಿಗಾಲವಿಲ್ಲ

ಕಳೆದ ಮಹಾಯುದ್ಧದಿಂದೀಚೆಗೆ ಬ್ರಿಟನ್ನು ಮೂರನೆ ವರ್ಗದ ರಾಷ್ಟ್ರವಾಗಿಬಿಟ್ಟಿದೆ. ಅದು ತನ್ನ ಜೀವನದ ಮಟ್ಟವನ್ನು ಕಾಯ್ದುಕೊಂಡು ಬಾಳಬೇಕಾದರೆ ತನ್ನ ಎಲ್ಲ ಜನಶಕ್ತಿಯನ್ನೂ ಉತ್ಪಾದಕ ಕ್ರಿಯೆಯಲ್ಲಿ ತೊಡಗಿಸಬೇಕು ಕೆಲಸಕ್ಕೆ ಬಾರದ ಪ್ರತಿಷ್ಠೆಯಿಂದ ಕಣ್ಮರೆಯಾದ ಸಾಮ್ರಾಜ್ಯದ ಹೆಸರಲ್ಲಿ ದೂರ ದೇಶದಲ್ಲಿಟ್ಟ ಸೈನ್ಯಗಳನ್ನ ಹಿಂದೆ ಕರೆಸದಿದ್ದರೆ ಬ್ರಿಟನ್ನು ಉದ್ಯೋಗಗಳನ್ನು ಪುನರುಜ್ಜೀವಿಸಿಕೊಳ್ಳಲಾರದೆ ಹಾಳಾಗುವದು, ಎಂದು ಪ್ರಸಿದ್ಧ ಬ್ರಿಟಿಶ ಲೇಖಕರೂ ಸಾಮ್ಯವಾದಿಗಳೂ ಆದ ಫೆನ್ನರ ಬ್ರಾಕ್ವೆಯವರು ಇಲ್ಲಿ ಪ್ರತಿಪಾದಿಸಿದ್ದಾರೆ. ಸಾಮ್ರಾಜ್ಯವನ್ನು ಸೈನ್ಯಬಲದಿಂದ ಕಾಯ್ದುಕೊಳ್ಳುವದು ಇನ್ನು ಲಾಭದಾಯಕವಲ್ಲವೆಂದು ಮನಗಂಡೇ ಬ್ರಿಟಿಶ ಸರಕಾರ ಹಿಂದುಸ್ತಾನದ ವಿಷಯ ಮಹತ್ವದ ನಿರ್ಣಯವನ್ನು ಕೈಕೊಂಡಿರಬಹುದೇ? ಗೃಹರಂಗದಲ್ಲೊದಗಿದ ಬಿಕ್ಕಟ್ಟು, ಜನಶಕ್ತಿಯ ಕೊರತೆ ಇವುಗಳಿಂದ ಸಾವಿರಗಟ್ಲೆ ವಿದೇಶೀ ಕೂಲಿಕಾರರನ್ನು ನೇಮಿಸಿಕೊಳ್ಳುವ ಪರಿಸ್ಥಿತಿ ಬ್ರಿಟನ್ನಿಗೆ ಬಂದಿದೆ. ಈ ಅಪಾಯಕರ ಉಪಾಯಕ್ಕಿಂತ ಸಾಮ್ರಾಜ್ಯತ್ಯಾಗವೇ ಹೆಚ್ಚು ಸುಖದಾಯಕವಲ್ಲವೆ?

ಈಚೆಗೆ ಪ್ರಾರಂಭವಾದ ಬ್ರಿಟಿಶ ಕಲ್ಲಿದ್ದಲಿ ಬಿಕ್ಕಟ್ಟು ಸಮಾಪ್ತಿಹೊಂದುವ ಮೊದಲು ನಮ್ಮ ದೇಶದ ಉತ್ಪಾದಕ ಉದ್ಯೋಗಗಳಲ್ಲಿ ಮೂರರಲ್ಲೊಂದಂಶವನ್ನು ಮುಚ್ಚುವದಲ್ಲದೆ ೫೦ ಲಕ್ಷ ಕೂಲಿಕಾರರ ನಿರುದ್ಯೋಗದಲ್ಲಿ ಪರ್ಯವಸಾನ ಹೊಂದಬಹುದೆಂದು ತೋರುತ್ತದೆ. ಈ ಬಿಕ್ಕಟ್ಟು ಬ್ರಿಟಿಶ ಜನಾಭಿಪ್ರಾಯದ ಮೇಲೆ ಸಿಡಿಲಿನಂತೆ ಬಂದೆರಗಿದೆ. ಆದರೂ ಇದರಲ್ಲಿ ಅಡಕವಾಗಿರುವ ಗಹನತರವೂ ಚಿರಂತನವೂ ಆದ ಇನ್ನೊಂದು ಬಿಕ್ಕಟ್ಟಿನ ಸಂಕೇತವನ್ನು ಜನತೆಯಿನ್ನೂ ಗುರುತಿಸಿಕೊಂಡಂತೆ ಕಾಣುವದಿಲ್ಲ. ಹತ್ತೀ ದಿನಗಳ ಅಸಾಧಾರಣ ಚಳಿಯಿಂದ ನಮ್ಮ ಔದ್ಯೋಗಿಕ ಮತ್ತು ಗೃಹ್ಯ ಜೀವನದಲ್ಲೆದ್ದ ಕೋಲಾಹಲದಿಂದ ನಮ್ಮ ಆರ್ಥಿಕ ಸ್ಥಿತಿ ಎಂಥ ಇಕ್ಕಟ್ಟಿನಲ್ಲಿ ಅಸ್ಥಿರ ಆಧಾರದ ಮೇಲೆ ನಿಂತಿದೆಯೆಂಬದರ ಅರಿವಾಗಬಹುದು. ಅತ್ಯಂತ ಕ್ಷಣಿಕವಾಗಿದ್ದರೂ ಯಾವುದೇ ಅಸಾಮಾನ್ಯ ಒತ್ತಡವನ್ನು ತಡೆದುಕೊಳ್ಳುವಷ್ಟು ಸಂಗ್ರಹ ಕೂಡ ನಮ್ಮಲ್ಲಿಲ್ಲ. ನಮ್ಮ ಜೀವನ ಅಕ್ಷರಶಃ ಮಧ್ಯಾಹ್ನದ ಚಿಂತೆಯಲ್ಲೆ ನಡೆಯುತ್ತಿದೆ.

ಆರ್ಥಿಕ ಭವಿತವ್ಯದಲ್ಲಿ ನಿರಾಶೆ

ಕಚ್ಚಾ ಸಾಮುಗ್ರಿಗಳನ್ನು ತರಿಸಲು ಮತ್ತು ಆಹಾರ ವಸ್ತುಗಳ ಆಯಾತ ಮಾಡಲು ಅವಶ್ಯವಾಗಿ ನಾವು ನಿರ್ಯಾತ ಮಾಡಬೇಕಾದ ಬಹಳ ವಸ್ತುಗಳ ಉತ್ಪಾದನೆಗೆ ಈ ಬಿಕ್ಕಟ್ಟಿನಿಂದ ಧಕ್ಕೆ ಬಡಿದು ಅಂತರಿಕ ಉಪಭೋಗಕ್ಕಾಗಿ ಕಾದಿಟ್ಟ ವಸ್ತುಗಳ ಪ್ರಮಾಣದಲ್ಲಿ ಇನ್ನಷ್ಟು ಕಡಿತವಾಗಬಹುದಾದರೂ ನಾವೀ ತೊಡಕಿನಿಂದ ಪಾರಾಗಿ ಹೊರಬಂದಾಗ ನಮ್ಮ ಸ್ಥಿತಿಗತಿ ಸದ್ಯಕ್ಕೇನೂ ಅಷ್ಟು ಕೆಟ್ಟಂತೆ ಕಾಣಲಿಕ್ಕಿಲ್ಲ. ಆದರೆ ಬಡತನದ ಮೇಲೆ ನಾವು ಹೂಡಿರುವ ಹೋರಾಟದ ನಡುವೆ ನಿರ್ಯಾತ ವಸ್ತುಗಳ ಉತ್ಪಾದನೆಗೆ ಕತ್ತರಿ ಬಿದ್ದುದರಿಂದ ಒಳ್ಳೆ ಹೊಡತ ತಿಂದಂತೆಯೇ ಆಗುವದು. ಮುಂದೆ ಒಂದೆರಡು ವಾರಗಳ ವರೆಗೆ ಇದಕ್ಕಿಂತ ಕೆಡುಕೇನೂ ಸಂಭವಿಸದಿದ್ದರೂ ಮುಂದೆ ಬರುವ ತಿಂಗಳುಗಳಲ್ಲಿ ನಮ್ಮ ಆರ್ಥಿಕ ಭವಿಷ್ಯ ಕರಾಳವೇ ಆಗಿದೆ. ಅಮೇರಿಕೆ ನಮಗೆ ಕೊಟ್ಟ ಸಾಲದಲ್ಲಿ ಬಹುಭಾಗವನ್ನು ನಾವು ಈಗಾಗಲೆ ಬಳಸಿಕೊಂಡು ಬಿಟ್ಟಿದ್ದೇವೆ, ಸದ್ಯದ ಹವಾಮಾನದಿಂದ ಬಿದ್ದ ಪೆಟ್ಟಿನ ಹೊಡೆತವನ್ನು ಬದಿಗಿಟ್ಟರೂ ಅತ್ಯವಶ್ಯ ಆಯಾತಗಳ ಬೆಲೆ ತೆರಲು ನಿರ್ಯಾತ ಮಾಡಬೇಕಾದ ವಸ್ತುಗಳನ್ನು ...ಕಷ್ಟು ಪ್ರಮಾಣದಲ್ಲಿ ಉತ್ಪಾ...ದಿಸುವಷ್ಟು ಸಾಮರ್ಥ್ಯ ಬ್ರಿಟಿಶ ...ದ್ದಿಮೆಗಳಿಗೆ ಇನ್ನೂ ಬಂದಿಲ್ಲ. ಇವೆಲ್ಲ ಸಾಲ...ಕ್ಕೆ ಉದ್ದಿಮೆಗಳಿಗೆ ಬೇಕಾಗುವ ಕಚ್ಚಾ ಸಾಮ...ಗಳ ಕೊರತೆಯಿಂದ ಗಾಬರಿಯಾಗುವ ಪ್ರಸಂ...ವೊಂದು ರೂಪಗೊಳ್ಳುತಿದೆ. ಕಲ್ಲಿದ್ದಲಿಯದೇ ಮುಖ್ಯ ಪ್ರಶ್ನೆಯಾಗಿದ್ದರೂ ಈ ಸಮಸ್ಯೆ ಅದ...ಕ್ಕೆ ಸೀಮಿತವಾಗಿಲ್ಲವೆಂಬುದು ನಿಶ್ಚಯ ...ಸ್ಥಿತಿಗತಿಯ ಒಳಹೊರಗನ್ನು ಚೆನ್ನಾಗಿ ಅರಿತ...ವರು ಬ್ರಿಟನ್ನಿನ ಆರ್ಥಿಕ ಭವಿಷ್ಯದಲ್ಲಿ ಕತ್ತಲೆ...ಯನ್ನೆ ಕಾಣುತಿದ್ದಾರೆ.

ಸಂಯುಕ್ತ ಮಂತ್ರಿಮಂಡಲಕ್ಕೆ ಟೋರಿಗಳ ಹೆಣಗಾಟ

ಸದ್ಯದ ಕಲ್ಲಿದ್ದಲಿ ಬಿಕ್ಕಟ್ಟು ತಲೆಯೆತ್ತುವ ಮೊದಲೇ, ಅಸಾಧಾರಣ ಒತ್ತಡದ ಸಂಜ್ಞೆಗಳಾವುವೂ ಇಲ್ಲದಿದ್ದ ಕಾಲದಲ್ಲಿಯೇ, ರಾಜಕೀಯ ವರ್ಗಗಳಲ್ಲಿ ಮುಂಬರುವ ಆರ್ಥಿಕ ಬಿಕ್ಕಟ್ಟಿನ ಮತ್ತು ಅದರಿಂದುದ್ಭೂತವಾಗುವ ಪರಿಸ್ಥಿತಿಯಿಂದ ಯುದ್ಧ ಕಾಲದಲ್ಲಿದ್ದಂಥ ತ್ರಿಪಕ್ಷಗಳ ಸಂಯುಕ್ತ ಸರಕಾರ ಸ್ಥಾಪನೆ ಮಾಡಲೇಬೇಕಾಗುವ ಸಂದರ್ಭದ ಮಾತೇ ಮಾತು ನಡೆದಿತ್ತು. ಈ ನಿರೀಕ್ಷೆ ಮುಖ್ಯವಾಗಿ ಟೋರಿ ಪಕ್ಷದವರಲ್ಲಿ ಪ್ರಚುರವಾಗಿತ್ತು. ತಮ್ಮ ಸ್ವಂತ ಶಕ್ತಿಯಿಂದ ಪುನಃ ಅಧಿಕಾರಕ್ಕೆ ಬರುವ ಆಸೆ ತಮಗಿಲ್ಲವೆಂದು ಅವರು ಮನಗಂಡಿದ್ದರಿಂದ ಈ ವಿಚಾರ ಅವರಲ್ಲಿ ಆಶಾಸಂಚಾರ ಮಾಡಿಸಿದೆಯೆಂಬಲ್ಲೇನೂ ಸಂದೇಹವಿಲ್ಲ ಈ ವರೆಗೆ ಕೂಲಿಕಾರ ಪಕ್ಷ ಈ ವಿಚಾರವನ್ನು ತುಚ್ಛೀಕರಿಸಿ ಬಿಟ್ಟಿದೆ. ಬರಿ ಮತಗಳ ಪ್ರಶ್ನೆಯಾಗಿದ್ದರೆ, ಕಾಮನ್ಸ್ ಸಭೆಯಲ್ಲಿ ಕೂಲಿಕಾರ ಪಕ್ಷಕ್ಕಿರುವ ಶಕ್ತಿಯನ್ನು ನೋಡಿದರೆ ಸಂಯುಕ್ತ ಸರಕಾರದ ಪುನರ್ಘಟನೆ ಅನವಶ್ಯವೆಂದು ತೋರುತ್ತದೆ. ಆದರೂ ಟೋರಿಗಳ ಕೈಯಲ್ಲಿದ್ದ ಪ್ರಭಾವಶಾಲಿ ಪತ್ರಿಕೆಗಳ ಮೂಲಕ ಚಳವಳಿ ರಭಸದಿಂದ ನಡೆದರೆ ಸಂಯುಕ್ತ ಮಂತ್ರಿಮಂಡಲದ ರಚನೆಯಾಗಬೇಕೆಂಬ ಭಾವನೆ ಉಂಟಾಗುವ ಸಂಭವವಿಲ್ಲದಿಲ್ಲ. ಈಗೇನೂ ಕೂಲಿಕಾರ ಮುಂದಾಳುಗಳು ಇದಕ್ಕೊಪ್ಪುವರೆಂದು ತೋರುವದಿಲ್ಲ. ಅವರು ಒಂದೊಮ್ಮೆ ಹಾಗೆ ಮಾಡಿದರೂ ಕೂಲಿಕಾರ ಪಕ್ಷದ ಬಹಳ ದೊಡ್ಡ ಭಾಗ ವಿರುದ್ಧ ಪಕ್ಷಕ್ಕೆ ಸೇರುವದರಲ್ಲಿ ಸಂದೇಹವಿಲ್ಲ.

ಸಾಮ್ರಾಜ್ಯದ ಅಸ್ತಕಾಲ

ಇಂಗ್ಲಂಡಿನ ಆರ್ಥಿಕ ಬಿಕ್ಕಟ್ಟಿನಲ್ಲಿ ದೂರತರವೂ ಹೆಚ್ಚು ಮೂಲಭೂತವೂ ಆದ ಪ್ರಶ್ನೆ ಅಡಕವಾಗಿದೆ. ಈ ಆರ್ಥಿಕ ತೊಂದರೆಗಳು ಜಗತ್ತಿನಲ್ಲಿ ಬ್ರಿಟನ್ನಿನ ಸ್ಥಾನಮಾನ ಬದಲಾದುದರ ಪ್ರತಿಬಿಂಬವಾಗಿವೆ. ಈ ಶತಮಾನದ ಆರಂಭದಲ್ಲಿ ಐದು ಖಂಡಗಳಲ್ಲಿಯೂ ಬ್ರಿಟನ್ನಿನ ಆರ್ಥಿಕ ಮತ್ತು ರಾಜಕೀಯ ಪ್ರಭಾವ ಮೆರೆಯುತಿತ್ತು. ಜಗತ್ತಿನಲ್ಲೆಲ್ಲ ಅತಿ ದೊಡ್ಡ ನೌಕಾಬಲ, ವಿಶಾಲ ಸಾಮ್ರಾಜ್ಯ, ಮತ್ತು ಅತುಲ ಆಯುಧ ಶಕ್ತಿ, ಇವುಗಳಲ್ಲಿ ಈ ಪ್ರಭಾವದ ರೂಪು ಕಾಣಿಸುತಿತ್ತು. ಇದೆಲ್ಲ ಇಂದು ಹೋಗಿ ಬಿಟ್ಟಿದೆ, ಇನ್ನೂ ಹೋಗುತಿದೆ. ಜಗತ್ತಿನಲ್ಲಿ ಇಂದು ಬ್ರಿಟನ್ನು ಪ್ರಥಮ ಸ್ಥಾನದಿಂದ ತೃತೀಯ ಸ್ಥಾನಕ್ಕೆ ಸರಿಸಲ್ಪಟ್ಟಿದೆ. ಅಮೇರಿಕೆಯ ಸಂಯುಕ್ತ ಸಂಸ್ಥಾನ ಭೂಮಿಯ ಹಣಕಾಸಿನ ಒಡೆಯನಾಗಿದೆ; ಅದರ ನೌಕಾಬಲ ಬ್ರಿಟನ್ನಿನದರಕಿಂತ ಅಧಿಕವಾಗಿದೆ; ರಶಿಯಾದ ಸೈನ್ಯ ಶಕ್ತಿ ಇಂಗ್ಲಂಡಿಗಿಂತ ಮಿಗಿಲಾಗಿದೆ; ಮತ್ತು ಬ್ರಿಟಿಶ ಸಾಮ್ರಾಜ್ಯ ನಮ್ಮ ಕಣ್ಮುಂದೆಯೇ ಕರಗುತಿದೆ. ಈ ಬದಲಾವಣೆಗಳ ಪರಿಣಾಮವಿನ್ನೂ ಬ್ರಿಟನ್ನಿನಲ್ಲಿ ಮನಗಾಣಲ್ಪಟ್ಟಿಲ್ಲ.

ಜಾಣತನದ ಹಾದಿ

ನಿಜ ಹೇಳಬೇಕಾದರೆ, ನಾವಿನ್ನು ಈ ಉತ್ತರ ಸಮುದ್ರ ದ್ವೀಪದಲ್ಲಿ ಬಾಳುವೆ ಮಾಡುತ್ತ ಹೋಗಬಯಸುತಿದ್ದರೆ, ನಮ್ಮ ಎಲ್ಲ ವಿಚಾರಸರಣಿಗಳನ್ನು ತಿರುಮುರುವು ಮಾಡಲೇ ಬೇಕು. ಮಹಾಸಾಮ್ರಾಜ್ಯ ರಾಷ್ಟ್ರಕ್ಕೆ ಸರಿಹೋಗುವ ಅನೇಕ ಧೋರಣೆಗಳನ್ನು ನಾವಿನ್ನೂ ಸಾಗಿಸುತಿದ್ದೇವೆ; ಆದರೆ ಅವೆಲ್ಲ ನಮ್ಮ ಹೊಸ ವಿದ್ಯಮಾನದಲ್ಲಿ ನಮಗೆ ಪೂರೈಸುವ ಸಂಗತಿಗಳಲ್ಲ. ಬ್ರಿಟನ್ನು ಯೋಗ್ಯವಾದ ಜೀವನ ಮಟ್ಟವನ್ನು ಕಾಯ್ದುಕೊಂಡು ಬಾಳಬೇಕಾದರೆ, ಅನೇಕ ವರ್ಷಗಳ ಸಹಾಯದಿಂದ ಪರಮಾವಧಿ ಕ್ಷಮತೆಯನ್ನು ಮೈಗೂಡಿಸಿಕೊಂಡಿರುವ ನಮ್ಮ

ಸೂಚನೆ

ವಾಡಿಕೆಯಂತೆ ಹೋಳೀಹಬ್ಬದ ನಿಮಿತ್ತ ಮುಂದಿನ ಅಂದರೆ ೧೦—೩—೪೭ ನೇ ತಾರೀಕಿನ ಸಂಚಿಕೆ ಹೊರಡುವುದಿಲ್ಲ. ವಾಚಕರು ಇತ್ತ ಗಮನಿಸಬೇಕಾಗಿ ಸೂಚನೆ.

ವ್ಯವಸ್ಥಾಪಕ
ಕರ್ಮವೀರ

— ಫೆನ್ನರ ಬ್ರಾಕ್ವೆಯವರಿಂದ —

ಔದ್ಯೋಗಿಕ ಸಾಧನೆಗಳಿಗೂ ಚಾತುರ್ಯಕ್ಕೂ ಮಾತ್ರ ಶರಣು ಹೋಗಬೇಕು. ನಮ್ಮ ದೇಶದಲ್ಲಿ ಇಲ್ಲದ ಕಚ್ಚಾ ಸಾಮುಗ್ರಿಗಳಿಗೂ ಆಹಾರ ವಸ್ತುಗಳಿಗೂ ಬೆಲೆ ತೆರಲು ಬೇಕಾದ ಉತ್ಪಾದನೆಯನ್ನು ನಾವು ಇದೊಂದೇ ಉಪಾಯದಿಂದ ಹುಟ್ಟಿಸಬಲ್ಲೆವು. ಇದು ಕೈಗೂಡಬೇಕಾದರೆ ನಮ್ಮ ಜನಶಕ್ತಿಯನ್ನೆಲ್ಲ ಉತ್ಪಾದನ ಕ್ರಿಯೆಯಲ್ಲಿ ತೊಡಗಿಸಬೇಕು. ಕೆಲಸವಿಲ್ಲದ ಮಂದಿಯನ್ನಿಟ್ಟು ಹೊಟ್ಟೆ ಹೊರೆಯುವದು ನಮಗೆ ಇನ್ನು ಮೇಲೆ ಪೂರೈಸುವ ಮಾತಲ್ಲ.

ಬ್ರಿಟನ್ನಿನ ಸಾಮಾಜಿಕ ಸ್ವರೂಪದಲ್ಲಾಗುವ ಬದಲಾವಣೆಗಳಿಂದ, ಮುಖ್ಯವಾಗಿ ದುಡಿಯದೆ ಬಂದ ಉತ್ಪನ್ನದ ಮೇಲೆ ಹೊರಿಸುವ ಕರಭಾರದ ಪರಿಣಾಮವಾಗಿ ಶ್ರೀಮಂತಿಕೆಯ ಬಲದಿಂದ ಸೋಮಾರಿತನದಲ್ಲಿ ಬಾಳುವ ಜನರ ಸಂಖ್ಯೆ ಕಡಿಮೆಯಾಗುತ್ತ ಹೋಗುವದು; ಆದರೆ ಇದೊಂದೇ ಸಾಲದು ಜಗತ್ತಿನಲ್ಲೆಲ್ಲ ದೊಡ್ಡ ಸೈನ್ಯವನ್ನಿರಿಸುವದು ನಮಗಿನ್ನು ಪೂರೈಸುವ ಸಂಗತಿಯಲ್ಲವೆಂಬ ಸತ್ಯವನ್ನು ನಾವು ಎದುರಿಸಲೇಬೇಕು. ಇಂದು ಜರ್ಮನಿ ಆಸ್ಟ್ರಿಯಾ ಮತ್ತು ಗ್ರೀಸಿನಲ್ಲಿ ಇಜಿಪ್ತ, ನಿಕಟಪೂರ್ವ, ಮಧ್ಯಪೂರ್ವ ದೇಶಗಳಲ್ಲಿ, ಹಿಂದುಸ್ತಾನ ಆಗ್ನೇಯ ಏಶಿಯಾಗಳಲ್ಲಿ, ಪಶ್ಚಿಮ, ಪೂರ್ವ, ದಕ್ಷಿಣ ಆಫ್ರಿಕೆಗಳಲ್ಲಿ ಮತ್ತು ಪಶ್ಚಿಮ ಇಂಡೀಜ ದ್ವೀಪಗಳಲ್ಲಿ ನಮ್ಮ ಸೈನ್ಯಗಳಿವೆ. ಭೂಮಿಯಲ್ಲಿ ಅಲ್ಲಲ್ಲಿ ನಮ್ಮ ೧೫ ಲಕ್ಷ ದಷ್ಟಪುಷ್ಟ ಗಂಡಸರು ಚದುರಿ ಹೋಗಿದ್ದಾರೆ. ಬ್ರಿಟನ್ನು ಬದುಕಿ ಉಳಿಯಬೇಕಾದರೆ ಇವರೆಲ್ಲರ ಸೇವೆ ಬ್ರಿಟನ್ನಿನಲ್ಲಿಯೇ ಬೇಕಾಗಿದೆ.

ಈ ವಿಸ್ತಾರ ಸೈನಿಕ ಧೋರಣೆ ಕಳೆದು ಹೋದ ಕಾಲದ ಅವಶೇಷವಾಗಿದೆ. ಆದರೆ ನಮ್ಮ ಕೂಲಿಕಾರ ಸರಕಾರಕ್ಕೆ ಕೂಡ ಅದು ಗತಕಾಲದ ಕುರುಹೆಂಬ ಅರಿವು ಪೂರ್ತಿಯಾಗಿ ಮನವೊಕ್ಕಂತೆ ಕಾಣುವದಿಲ್ಲ. ಸಾರ್ವತ್ರಿಕ ಸೈನ್ಯಭರತಿ ಇನ್ನೂ ಉಳಿಯುವದೆಂದೂ ೧೮ ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ಬ್ರಿಟಿಶರನೂ ಸೈನ್ಯದಲ್ಲಿ ಹೆಸರು ಹಚ್ಚಿರಬೇಕೆಂದೂ ಸರಕಾರ ಸಾರಿದೆ. ಈ ರೀತಿ ಉತ್ಪಾದನೆ ನಿರ್ಮಾಣಗಳ ಕ್ಷೇತ್ರದಿಂದ ಬ್ರಿಟಿಶ ಜನಶಕ್ತಿಯನ್ನು ಸೆಳೆದೊಯ್ಯುವದು ತನ್ನ ತಲೆ ಮೇಲೆ ತಾನೇ ಕಲ್ಲು ಹಾಕಿಕೊಂಡಂತೆ. ತಾನಿನ್ನೂ ಸಾಮ್ರಾಜ್ಯ ಪ್ರಭುವೆಂಬ ಭ್ರಾಂತಿಯನ್ನು ಕಳೆದೊಗೆದಲ್ಲದೆ ಬ್ರಿಟನ್ನಿಗೆ ಉಳಿಗಾಲವಿಲ್ಲ.

ಇದರಿಂದ ಜಗತ್ತಿನಲ್ಲಿ ಬ್ರಿಟನ್ನಿನ ಪ್ರಭಾವಕ್ಕೆ ಅಳಿಯುವ ಕಾಲ ಬಂದಿದೆಯೆಂದು ಬಗೆಯುವ ಕಾರಣವಿಲ್ಲ. ಮಾತ್ರ ಆ ಪ್ರಭಾವ ಸೈನಿಕ ಶಕ್ತಿಯನ್ನಾಗಲಿ ಪ್ರಾದೇಶಿಕ ಪ್ರಭುತ್ವವನ್ನಾಗಲಿ ಅವಲಂಬಿಸಿರಲಾರದು ಜಗತ್ತಿನಲ್ಲಿ ಪ್ರಜಾಪ್ರಭುತ್ವ ಮತ್ತು ಅಂತರ್‌ರಾಷ್ಟ್ರೀಯ ಸಾಮ್ಯವಾದದ ಆಚರಣೆಯಲ್ಲಿಯೂ ಸಾಮ್ಯ ಸಹಕಾರಗಳ ತಳಹದಿಯ ಮೇಲೆ ಹೊಸ ಜಗತ್ತಿನ ನಿರ್ಮಾಣದಲ್ಲಿಯೂ ಅದು ಮುಂದಾಳ್ತನ ವಹಿಸಬಲ್ಲುದು. — "ಭಾರತ ಜ್ಯೋತಿ"



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಫೆಬ್ರುವರಿ ೨೪ ರಿಂದ ಮಾರ್ಚ ೨ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮನೆಯಲ್ಲಿಯ ವೃದ್ಧರಿಗೆ ಬಹಳ ಕ್ಲೇಶ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಿಂಚಿತ ಕೊಂದರೆ ಇದೆ. ಆಪ್ತರು ಮತ್ತು ಆಶ್ರಿತರಿಂದ ಮೇಲಿಂದ ಮೇಲೆ ಸಂತಾಪ ಬರುವಂತಹ ವರ್ತನೆ. ಉದ್ಯೋಗ ದಲ್ಲಿ ಪ್ರಗತಿ ಸಾಧಾರಣವೆ. ಪ್ರತಿಷ್ಠೆಯೂ ಅಷ್ಟಕ್ಕಷ್ಟೆ. ಆದರೆ ದ್ರವ್ಯಲಾಭ ಕುಂಡಾ ಕೆಲ ಪುಣ್ಯಪ್ರದ ಕೃತ್ಯಗಳನ್ನು ಮಾಡುವಲ್ಲಿ ವೆಚ್ಚ. ಬಂಧುವರ್ಗದವ ರಲ್ಲಿ ಬಹಳ ಉತ್ಕರ್ಷ—ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಬಹಳ ಅನುಕೂಲತೆ. ಮಿತ್ರರಿಂದ ಕುತ್ಸಿತ ವರ್ತನೆ ಸ್ತ್ರೀವರ್ಗದಲ್ಲಿ ಹೆಚ್ಚು ಆದರ. ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಹಿತಕರ. ಭರಣಿಗೆ ಬಹಳ ತೊಂದರೆ. ತಾ. ೨೫, ೨೬, ೨ ಅನುಕೂಲ.

ವೃಷಭ

ಪ್ರಕೃತಿ ಸಾಧಾರಣವೆ. ಸ್ತ್ರೀಸುಖದಲ್ಲಿಯೂ ವಿರಸ. ಮಕ್ಕಳು ಅಪ್ರಿಯ ಕೃತ್ಯ ಮಾಡುವರು ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಬಹಳ ಉತ್ತಮ ಆದರೆ ಜನರಲ್ಲಿ ನಿಮ್ಮ ದೊಡ್ಡಸ್ತಿಕೆ ಯನ್ನು ಮೆರೆಸುವದಕ್ಕಾಗಿ ಹೆಚ್ಚು ವೆಚ್ಚ ಮಾಡು ವದು. ಒಬ್ಬರೊಬ್ಬರ ವಿರುದ್ಧ ಈ ಬಗೆಯ ಹಂಚಿಕೆ ಯನ್ನು ಒಂದೇ ಕಾಲಕ್ಕೆ ಹಾಕುವ ಗೊಂದಲ. ಮಿತ್ರ ಸುಖ ಉತ್ತಮ. ದೂರಿನ ಮತ್ತು ಸುಖಕರ ಪ್ರವಾಸ. ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹಿತದು ರೋಹಿಣಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೪, ೨೮, ೧, ೨ ಅನುಕೂಲ.

ಮಿಥುನ

ನಿಮ್ಮ ಪ್ರಕೃತಿ ಉತ್ತಮ ಆದರೆ ಹೆಂಡತಿಯದು ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯವೆ. ಅಪ್ರಿಯ ಜನರ ಸಹವಾಸ. ಮಕ್ಕಳು ಮಿತ್ರರಲ್ಲಿ ಕೆಲ ಜನರ ಬಹಳ ಉತ್ಕರ್ಷ. ಉದ್ಯೋಗ ದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ, ಸ್ವತಂತ್ರ ಧಂಧೆಯವರಿ ಗಿಂತ ನೋಕರರಿಗೆ ಬಹಳ ಅನುಕೂಲ. ಆದರೆ ದ್ರವ್ಯ ಲಾಭ ಎಲ್ಲರಿಗೆ ಅಷ್ಟೆ ಕುಂಬ. ಬಗೆಬಗೆಯ ವಿಷಳರಾ ಮದ ಕಪಾಟಿ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ಭೆಟ್ಟಿ ಮತ್ತು ಪ್ರವಾ ಸಕ್ಕಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಆರ ದ್ರೆಗೆ ತೊಂದರೆಯಿಂದ ಯಶಸ್ಸು. ತಾ. ೨೫, ೨೬, ೨ ಅನುಕೂಲ.

ಕರ್ಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವೆ ಮಕ್ಕಳು ಮತ್ತು ಹೆಂಡತಿಗೂಡ ಮೇಲಿಂದ ಮೇಲೆ ವಿರೋಧ. ಸ್ಥಾವರದಲ್ಲಿ ಹಾನಿ ಉದ್ಯೋಗದಲ್ಲಿ ಪ್ರಗತಿ ಅನುಕೂಲವೆನಿಸಿದರೂ ಪ್ರತಿಷ್ಠೆ ಮತ್ತು ದ್ರವ್ಯ ಲಾಭ ಬಹಳ ಕಡಮೆ. ವ್ಯಾಪದ್ವಿರುದ್ಧವಾಗಿ ವೆಚ್ಚ ಮಾತ್ರ ವಿಪರೀತ. ನಿಮ್ಮ ವಸ್ತುಸ್ಥಿತಿಯ ಬಗ್ಗೆ ಪರ್ಯಾಸ ಮಾಡುವ ಜನರು ಹೆಚ್ಚುವ ಸಂಭವ ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಭೆಟ್ಟಿ ಮತ್ತು ಪತ್ರವ್ಯವಹಾ ರಕ್ಕಿಂತ ಪ್ರವಾಸ ಅನುಕೂಲ. ಪುಷ್ಯಕ್ಕೆ ತೊಂದರೆ ಕಡಿದು. ತಾ. ೨೪, ೨೫, ೨೬ ಅನುಕೂಲ.

ಸಿಂಹ

ಪ್ರಕೃತಿ ಅನುಕೂಲ ಆದರೆ ಸ್ತ್ರೀ ಸುಖದಲ್ಲಿ ಮನಸ್ಸು ಕಷ್ಟದ್ದೇ. ಎಲ್ಲಿ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅಷ್ಟಕಷ್ಟೆ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಧಾರಣ ಅನುಕೂಲವಿದ್ದರೂ ಸಾಲ ತೆಗೆದು ವೆಚ್ಚ ಸಹಿಸಬೇಕಾದ ದೊಡ್ಡ ದೊಡ್ಡ ಸಾಹಸ ಗಳನ್ನು ಮಾಡಬೇಕಾದ ಪೇಚ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು ಶತ್ರುಗಳು ಬಗೆಬಗೆಯಿಂದ ಛಲಿಸುವರು ಮತ್ತು ತೊಂದರೆ ಕೊಡು ವರು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಸ್ವಲ್ಪ ಅನುಕೂಲ. ಪೂರ್ವಾಕ್ಕೆ ಹೆಚ್ಚು ತೊಂದರೆ ತಾ. ೨೫, ೨೬, ೨ ಅನುಕೂಲ.

ಕನ್ಯಾ

ಪ್ರಕೃತಿ ಸಾಧಾರಣವೆ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭವೂ ಪ್ರತಿಷ್ಠೆಗಿಂತ ಹೆಚ್ಚು ಅನುಕೂಲ. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಶತ್ರುಗಳ ನಾಶ ಮನಸಿನಂತೆ. ಆದರೆ ನೋರಿ ಯುವ ಯಶಸ್ಸು ಮಾತ್ರ ಸ್ವಲ್ಪಕ. ಪತ್ರವ್ಯವಹಾರ ಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಹಸ್ತಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೪, ೨೮, ೧, ೨ ಅನುಕೂಲ.

ತುಲಾ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಉಳಿದ ಪ್ರಾಪಂಚಿಕ ವಿಷಯಗಳೂ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭವೂ ಉತ್ತಮ. ಆದರೆ ಪ್ರತಿಷ್ಠೆಗೆ ಮಾತ್ರ ಬಹಳ ಕುಂದು ಮತ್ತು ಶತ್ರುಯದಾತರಿಂದ ಇಲ್ಲವೆ ವರಿಷ್ಠರಿಂದ ಮೇಲಿಂದ ಮೇಲೆ ತೊಂದರೆ. ಮಿತ್ರ ಸುಖ ಉತ್ತಮ. ಭಾವೀ ಭಾಗ್ಯಸೂಚಕದ ಕೆಲ ಘಟನೆಗಳೂ ಆಗುವ ಯೋಗ. ವಾದದಲ್ಲಿ ಅನುಕೂಲತೆ ಆದರೆ ಶತ್ರುವಿನ ಜೋರು ಹೆಚ್ಚು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿ ಗಿಂತ ಹೆಚ್ಚು ಅನುಕೂಲ. ತಾ. ೨೫—೨೬—೨ ಅನುಕೂಲ.

ವೃಶ್ಚಿಕ

ಪ್ರಕೃತಿ ಸಾಧಾರಣವೆ. ಏನೇನೋ ಮಾಡಬೇಕೆಂಬ ಹಂಬಲದಲ್ಲಿ ಮನಸ್ಸು ತೊಡಗುವದು. ಉದ್ಯೋಗ ದಲ್ಲಿ ಪ್ರಗತಿ ಪ್ರತಿಷ್ಠೆಯೂ ಉತ್ತಮವೆ. ಆದರೆ ಅ ಮಾನದಿಂತ ಲಾಭ ಕಡಮೆಯು. ಭಾವೀ ಹಿತದ ಕೆಲ ಕೆಲಸಗಳಲ್ಲಿ ಮಿತ್ರರಿಂದ ವಿರುದ್ಧ ಹಸ್ತಕ್ಷೇಪ ಮಾಡು ವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷ ಗಳ ಸಮಾನ ಸ್ಥಿತಿ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ. ಅನುರಾಧೆಗೆ ತೊಂದರೆ ಕಡಮೆ. ತಾ. ೨೪, ೨೬, ೨೮ ಅನುಕೂಲ.

ಧನು

ಪ್ರಕೃತಿ ಸಾಧಾರಣವೆ. ಆದರೆ ಮಕ್ಕಳು ಮತ್ತು ಹೆಂಡತಿ ಸುಖ ಬಹಳ ಹೆಚ್ಚು. ವೆಚ್ಚ ಹೆಚ್ಚು ಮಾಡಿ ಸ್ಥಾವರದಲ್ಲಿ ಸ್ವಲ್ಪ ಹೆಚ್ಚು ಮಾಡಿಕೊಳ್ಳುವದು. ಇಲ್ಲವೆ ಯೋಗ್ಯ ಸ್ಥಿತಿಯಲ್ಲಿ ಅವನ್ನು ಇಟ್ಟುಕೊಳ್ಳುವ ಸಂಭವ ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಅಸಮಾಧಾನವುಂಟು ಮಾಡುವಂತ ಹದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಮಿತ್ರಸುಖ ಉತ್ತಮ. ಪ್ರವಾಸ ಮತ್ತು ಪತ್ರವ್ಯವಹಾರ ವೂ ಭೆಟ್ಟಿಗಿಂತ ಅನುಕೂಲ. ಪೂರ್ವಾಷಾಢಕ್ಕೆ ತೊಂದರೆ ಯಿಂದಲೆ ಯಶಸ್ಸು ತಾ. ೨೫, ೨೬, ೨, ಅನುಕೂಲ.

ಮಕರ

ಪ್ರಕೃತಿ ಅನುಕೂಲ ಆದರೆ ಬಹುತರ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಇದ್ದದೆ. ಮಕ್ಕಳು ಮನ ಸಿಗೆ ತೊಂದರೆ ಕೊಡುವಂಥ ಕೆಲ ಕೃತ್ಯಗಳನ್ನು ಮಾಡು ವರು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅನು ಕೂಲತೆ ಆದರೆ ಪ್ರತಿಷ್ಠೆ ಸಾಮಾನ್ಯ. ಮಿತ್ರ ಸುಖ ಒಳಿತಾದುದು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿ ಕೂಲ ಸ್ಥಿತಿ ಆದರೆ ಅದರಲ್ಲಿ ಭಾವೀ ಅನುಕೂಲತೆಗೆ ದ್ಯೋತಕರುವಂಥ ಕೆಲ ಸಂಗತಿಗಳು ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಶ್ರವಣಾಕ್ಕೆ ತೊಂದರೆ ಹೆಚ್ಚು. ತಾ. ೨೪, ೨೬, ೨೫, ಅನುಕೂಲ.

ಕುಂಭ

ಪ್ರಕೃತಿ ಅನುಕೂಲ ಮಕ್ಕಳ ಮತ್ತು ಪ್ರಾಪಂಚಿಕ ಸುಖ ಹಿತಕರ ಆದರೆ ಆಪ್ತರು ಮತ್ತು ಆಶ್ರಿತರು ಕೆಟ್ಟ ದುಷ್ಟ ಕೆಲಸ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಜೋರಿನಲ್ಲಿ ಆದರೆ ಪ್ರತಿಯೊಂದು ಕೆಲಸದಲ್ಲಿ ಅಂದಾಜಿಗಿಂತ ಇಮ್ಮಡಿ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಅನು ಕೂಲತೆ. ಪ್ರವಾಸಾದಿ ಕೆಲಸ ಹಿತಕರ. ಶತತಾರಿಕೆಗೆ ತೊಂದರೆಯಿಂದಲೆ ಯಶಸ್ಸು ತಾ. ೨೪, ೨೫, ೨೬, ೨ ಅನುಕೂಲ.

ಮೀನ

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿಗೆ ಸ್ವಲ್ಪ ಮಾನಸಿಕ ಕ್ಲೇಶವಾಗುವದರಿಂದ ಪ್ರಾಪಂಚಿಕ ಸುಖ ಸಾಧಾರಣ. ಉದ್ಯೋಗದಲ್ಲಿ ಪ್ರಗತಿ ಕಡಮೆ ಆದರೆ ಪ್ರತಿಷ್ಠೆ ಮತ್ತು ಲಾಭವೂ ಅನುಕೂಲದಾಯಕ. ಸಾವಕಾರರ ತೊಂದರೆಯೂ ಅಷ್ಟಕ್ಕಷ್ಟೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ ಉತ್ತರಾಭಾದ್ರಪದಕ್ಕೆ ತೊಂದರೆ ಕಡಮೆ. ತಾ. ೨೪, ೨೫, ೨೬, ಅನುಕೂಲ.

ಪ್ರಾಚೀನ ಭಾರತದಲ್ಲಿ ಪ್ರಜಾಮತ ಗ್ರಹಣ

(೧ ನೇ ಪುಟದಿಂದ)

ಉಳಿದವರಾರೂ ಅಲ್ಲಗಳೆದಂತೆ ತೋರುವು ದಿಲ್ಲ. ಮುಂದೆಯೇ ತೋರುವ 'ಪರಾಶರ' ಎಂಬಾತನ ಮಾತನ್ನು ಪಠಾಂಬರಿಸಿರಿ —

"ಪರತನ್ತ್ರಜ್ಞಾನಂ, ಸ್ವತನ್ತ್ರರಕ್ಷಣಂ" "ಇತಿ ಪರಾಶರಃ" (ಪುಟ ೨೬) "ಪಿಶುನಾಕ್ಷಿ ನಾಡಿದುದು ಮಂತ್ರಜ್ಞಾನ ವಿಷಯಕವೇನೋ ಹೌದು; ಆದರೆ ಮಂತ್ರರಕ್ಷಣವಲ್ಲ."

೪

"ಸರ್ವಾಧಾರ ಕಾಲಃ" ಎಂಬುದು ಬುದ್ಧಿ ವೃದ್ಧರ ಮಾತು. ಈಗಿನ ಕಾಲಕ್ಕನು ವಾಗಿ ಹಿಂದಿನ ನೀತಿ ವಚನಗಳನ್ನು ಪರಿಶೀಲಿಸಿ ಕೊಂಡು ಲೋಕವನ್ನು ಧಾರ್ಮಿಕ ಮಾರ್ಗದಲ್ಲಿ ನಡೆಯಿಸುವುದು ನಾಯಕರಾದವರ ಕರ್ತವ್ಯ. ಪ್ರಕೃತ, ನಮ್ಮ ಘಟನಾಸಮಿತಿಯಿಂದ ನಿಯುಕ್ತ ರಾದ ಕೆಲಮಂದಿ ನಾಯಕರೂ ನರೇಂದ್ರ ಮಂಡ ಲದಿಂದ ನಿಯುಕ್ತರಾದ ಕೆಲಮಂದಿ ಮಹನೀ ಯರೂ ದಿಲ್ಲಿಯಲ್ಲಿ ಬೆರೆದಿದ್ದಾರೆ. ಇವರೊಳಗೆ ನಮ್ಮ ದೇಶೀಯರಲ್ಲದ, ಪರದೇಶದ ಹಿತವೇ ಒಳಗುರಿಯಾಗಿರುವ ಒಂದೇ ಒಂದು ವ್ಯಕ್ತಿ ಯಾದರೂ ಇಲ್ಲ. ಅದರಿಂದ ಅಸಾಧ್ಯವಾದ ಮತ ಭೇದವಾವುದೂ ಇವರ ಸಂಧಿಕಾರ್ಯದ ಮಧ್ಯ ದಲ್ಲಿ ಬೇತಾಳನಾಗಿ ತಲೆದೋರಿತು ಎಂಬ ಸಂಶ ಯಕ್ಕೆ ಎಡೆಯಿಲ್ಲ. ನರೇಂದ್ರ ವರ್ಗದೊಳಗೆ ಹಲವರು ಹಿಂದೂ ಧರ್ಮಾನುಯಾಯಿಗಳು; ಕೆಲವರು ಮುಸ್ಲಿಮ್ ಧರ್ಮಾನುಸಾರಿಗಳು. ಯಾರಾದರೇನು? ಎಲ್ಲರೂ ನಮ್ಮ ಈ ಭಾರತ ಭೂಮಿಯಲ್ಲೇ ಜನಿಸಿದವರು, ಬೆಳೆದವರು, ನಾಯಕರಾಗಿರುವವರು, ಅದರಿಂದ ಎಲ್ಲರೂ ದೇಶಹಿತ ದೃಷ್ಟಿಯಿಂದ ಏಕಮುಖಿಗಳಾಗುವ ರೆಂದು ಪ್ರಾರ್ಥಿಸಬೇಕಾಗಿದೆ. ಹೀಗೆ ಪಿತಾಮಹರಿ ಗಳೆನ್ನಿಸಿ ಪ್ರಜಾರಂಜಕರೆನಿಸುವ ರಾಜರೇ ಶಿಷ್ಟ ವಾದ ರಾಜರು.

ಶಾಸ್ತ್ರಕರ್ತ ರಾಜಾ ಇತಿಹಾಸ ತತ್ವಗಳ ಅನ್ವೇಷಿ "(ಚಾ. ಸೂತ್ರ ೩೩೦)" ಹಿಂದೆ ದೃಷ್ಟಾಂತಿಸಿದ (ಚಾಣಕ್ಯ ಸೂತ್ರದಲ್ಲಿ ತೋರುವ) ನ್ಯಾಯಯುಕ್ತ (ವಿನಯಯುಕ್ತ) ನಾದ ರಾಜನು ಇಹದಲ್ಲಿ ಸುಖವನ್ನೂ, ಪರದಲ್ಲಿ ಸ್ವರ್ಗ ಸುಖ ವನ್ನೂ ಹೊಂದುತ್ತಾನೆ." ಇಂಥ ಆಳಿಕೆಯೇ ಯಾರಿಗೂ— ವಿಶೇಷವಾಗಿ ಪ್ರಜಾಮಂಡಲಕ್ಕೆ ಹಿಂಸೆಯನ್ನೊದಗಿಸದ ಧರ್ಮದ ಆಳಿಕೆ.

"ಅಹಿಂಸಾ ಲಕ್ಷಣೋ ಧರ್ಮಃ ("ಚಾ. ಸೂತ್ರ— ೫೬೧) 'ಧರ್ಮವೆಂದರೆ ಅಹಿಂಸಾ ಸ್ವರೂಪವಾದುದು.' ದುರ್ಮಾರ್ಗವನ್ನು, ದುಷ್ಟರನ್ನು, ಅಧಾರ್ಮಿಕರಾದ ವಿರೋಧಿ ವರ್ಗ ವನ್ನು ಶಿಕ್ಷಿಸುವುದೆಂದರೆ ಹಿಂಸೆ ಎಂದು ಭಾವಿಸ ಬಾರದು. 'ಶಿಕ್ಷೆ' ಎಂಬುದಕ್ಕೆ ನಿಜವಾದ ಅರ್ಥವು 'ಬೋಧೆ' ಎಂದಲ್ಲದೆ 'ಹಿಂಸೆ' ಎಂದಲ್ಲ. ಸರ್ವ ಮತೀಯರಾದ ಪ್ರಜಾವರ್ಗಕ್ಕೂ ನರೇಂದ್ರ ವರ್ಗಕ್ಕೂ ಈ ಹೇಳಿಕೆ ಮಾನ್ಯವಾಗಬಹು ದೆಂದು ಭಾವಿಸಿದರೆ ತಪ್ಪಾಗುವುದೆ? ಅಗದು. ನಮ್ಮ ನರೇಂದ್ರಮಂಡಲದೊಳಗೆ ಒಬ್ಬನಾದರೂ 'ಅವಿನೀತ' ಮಾರ್ಗದಲ್ಲಿ ಅಡಿಯಿಡಲೊಲ್ಲನು, ಎಂದು ನಂಬುವ.

(ಲೇಖಮಾಲೆ ಮುಂದುವರಿವುದು)

ಹೊಸ ಪುಸ್ತಕಗಳು! ತ್ವರೆ ಮಾಡಿರಿ!

ಕರ್ನಾಟಕದ ಕಚ್ಚರಿಯಾದ

ಆಗಸ್ಟ್ ವೀರರು

ಬೆಲೆ: ೮—೮—೦ ಅಂಚೆ ವೆಚ್ಚ ಸೇರಿ: ೦—೧೨—೦

ಹುತಾತ್ಮರಾದ ಮಹಾದೇವಪ್ಪ, ಶಂಕರಪ್ಪ, ಸೆಟ್ಟಿಪ್ಪನವರು ಎಸಗಿದ ಮಹತ್ವದ ಕಾರ್ಯಗಳನ್ನೂ, ರಕ್ತಸಾಕ್ಷಿ ಈಸೂರಿನ ಇತಿಹಾಸ ವಿಮರ್ಶನ್ನು ಮಲಕಿತರನ್ನಾಗಿ ಮಾಡುವವು

ಕ್ರಾಂತಿಯ ನೂರು ವರ್ಷ

ಬೆಲೆ: ೦—೧೨—೦ ಅಂಚೆ ವೆಚ್ಚ ಸೇರಿ: ೧—೦—೦

೧೮೫೭ರಲ್ಲಿಯ ಬಂಡಾಯ ಮೊದಲ್ಗೊಂಡು ಇಂದಿನ ವರೆಗಿನ ಹಿಂದುಸ್ಥಾನದ ಸ್ವಾತಂತ್ರ್ಯ ಕ್ಕಾಗಿ ನಡೆದ ಮಹಾಕ್ರಾಂತಿ ಚಳವಳಿಯ—ಸಂಕ್ಷೇಪದಲ್ಲಿ—ಸಂಪೂರ್ಣ ಇತಿಹಾಸ

ನಮ್ಮ ಸಂಪೂರ್ಣ ಕ್ಯಾಟಲಾಗಿಗೆ ಒಂದಾಣೆ ಅಂಚೆ ಚೀಟಿ ಕಳಿಸಿರಿ

ಸಮಾಜ ಪುಸ್ತಕಾಲಯ, ಧಾರವಾಡ

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

ಮದನಕಾಮಾನಂದ ಗುಟಿ

[ವೀರ್ಯಸ್ತಂಭನ ವಟಿ ಕಿಮ್ಮತ್ತು ರೂ. ೫-೦-೦]

ಕ್ಷೀಣರಿಗೂ ವಾರ್ಧಿಕ್ಯ ಹೊಂದಿದವರಿಗೂ ವಿಷಯಾನಂದದ ಪ್ರೇಮೀ ಹಾಗೂ ರಸಿಕ ಜನರಿಗೆ ಅತ್ಯವಶ್ಯಕ ಔಷಧ

ಶೀಘ್ರಸ್ಖಲನವನ್ನು ನಿರ್ಮೂಲನಮಾಡಿ ಸ್ತಂಭನಶಕ್ತಿ ಹಾಗೂ ಕಾಮಶಕ್ತಿ ಯನ್ನು ಹೆಚ್ಚಿಸಿ ಸಂಭೋಗದಲ್ಲಿ ಯೌವನದ ಪರಮಾವಧಿಯನ್ನುಂಟು ಮಾಡುವದಕ್ಕಾಗಿ ಇದು ಸಾವಿರಾರು ಜನರಿಂದ ಪರೀಕ್ಷಿಸಲ್ಪಟ್ಟ ಅಪಾಯರಹಿತವಾದ ಔಷಧವಾಗಿದೆ.

ಸಂಭೋಗಕ್ಕಿಂತಲೂ ಮುಂಚಿತವಾಗ ಒಂದು ಗುಳಿಗೆಯನ್ನು ಸೇವಿಸುವದರಿಂದ ಒಂದೇ ತಾಸಿನಲ್ಲಿ ಶೀಘ್ರ ವೀರ್ಯಸ್ಖಲನವನ್ನು ತಡೆಗಟ್ಟಿ, ಸಂಭೋಗದಲ್ಲಿ ಹರ್ಷ, ಆನಂದ ಮತ್ತು ಪ್ರಚಂಡ ಉತ್ಸಾಹ ಉತ್ಪನ್ನ ಮಾಡಿ ಕಾಮಶಕ್ತಿಯ ಪ್ರಬಲವಾಸನೆ ಮತ್ತು ಸ್ತಂಭನಶಕ್ತಿ ಹೆಚ್ಚಾಗುವದರಿಂದ ಸಂಭೋಗದಲ್ಲಿ ಸ್ತ್ರೀಯನ್ನು ಪರಾಜಯಿಸುವ ಶಕ್ತಿ, ಬಲ ಮತ್ತು ತೇಜ ಉಂಟಾಗುತ್ತದೆ.

ಪತ್ತೆ:- ವೈದ್ಯರಾಜ ಎ. ಬಿ. ಶಿದನಾಳ

ಮನೆ ನಂಬರ ೧೩೮೯ (ಕೆ. ವಿ.) ಬಸವನಗಲ್ಲಿ, ಬೆಳಗಾವಿ

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿಸಿ ಪ್ರಕಟವಾಯಿತು.

ಮಾರ್ಗಶೀರ್ಷ ಮಾಸದ ಕತೆಗಳು

(ಕಲಾಮಂಟಪದ ಬೆಳಗಾವಿ)

ಈ ಮಾಸದಲ್ಲಿ ಒಟ್ಟು ಅರವತ್ತು ನಾಲ್ಕು ಕತೆಗಳು ಬಂದಿವೆ. ಅವು—

ಅನುವಾದ	೮
ಶ್ರೇಮಾಶಾಯ	೧೧
ಧ್ಯೇಯವಾದಿ	೧೯
ಉಳಿದವು	೧೯
ಉತ್ತಮ	೭
	೬೪

ಎಂಟು ಅನುವಾದಿತ ಕತೆಗಳಲ್ಲಿ ಮೂರು ಹಿಂದಿಯವು. ಎರಡು ತೆಲುಗಿನವು. ಉಳಿದವುಗಳಲ್ಲಿ ಒಂದು ಮರಾಠಿಯದು, ಒಂದು ಬಂಗಾಳಿಯದು, ಒಂದು ಆಧಾರದ್ದು (?). ಹಳ್ಳಿ ..ಂದ ದಿಕ್ಕಿಗೆ, ಉದ್ಯೋಗ ಮತ್ತು ಈ ... ಕತೆಗಳಲ್ಲಿ ನವನಾಗರಿಕತೆಯ ವಿಕಾರ ... ನಗ್ನ ಚಿತ್ರವನ್ನು ಕತೆಗಾರರು ಸುಂದರ ... ಸಾರಸವಾಗಿ ಚಿತ್ರಿಸಿರುವರು. ಮೂರೂ ಕತೆಗಳು ಹವಿಸಾನಾಡ ಸತ್ಯಸಂಗತಿಗಳನ್ನು ... ಕೆಲಸಕ್ಕೆ ಬರುವಂತೆ ... ಕೇವಲವಾಗಿ ಹಸ್ತಿ ಕೈಯತ್ತ ಹಿಂತಿದೆ. ಬುದ್ಧಿಯನ್ನು, ಹೃದಯವನ್ನು ಮತ್ತು ಮನಸ್ಸನ್ನು ತಟ್ಟಿ ಮುಟ್ಟುವವು. ವಿಕ್ಷೇಪಗಳಲ್ಲಿ ಇಂಥವೇ ಒಂದೊಂದು ಮಾನವಜೀವನದ ಸೂಕ್ಷ್ಮತಾ ದೇವದವನ್ನು ನೋಡಬೇಕು. ಅದರ ಎನ್. ಗಣೇಶ ಅವರೂಡಕರದು ಕಲ್ಲು ನದೀ ತೀರದಲ್ಲಿ ಎಂಬ ಅನುವಾದ ಕತೆಯನ್ನು ಈ ಮೂರಲು ಅಂಕರಗಳ ಮತ್ತು ನವಯುಗದಲ್ಲಿ (ಜೂನ) ಮುದ್ರಿಸಿಕೊಂಡು ಮತ್ತೆ ಸುಬೋಧದಲ್ಲಿ ಪ್ರಸಿದ್ಧಿ ಹೊಂದಿರುವರು.

ಪ್ರೇಮ—ಶಾಮಯ ಕತೆಗಳಲ್ಲಿಯು ಸೇವ ಹವಿಲಾಚಾರ ಲ್ಲಿ ಸ್ವತಂತ್ರದಲ್ಲಿ ಬರೆದ ಹೀಗೂ ಜೀವನವು, ಗೌತಮ ಸಿದ್ಧನಗೌಡರು ಕರ್ನಾಟಕ ಜಾಧುರಿನಲ್ಲಿ ಬರೆದ ಸಹೋದ್ಯದ ಬೆಲೆಯು, ಎಮ್ಮೆದು ಯುಯಾರ್‍ಗಳಲ್ಲಿ ಬರೆದ ಆ ಹುಡುಗಿಯು, ಮತ್ತು ಸುಬ್ರಹ್ಮಣ್ಯಂರು ಧುರೀಣದಲ್ಲಿ ಬರೆದ ಅಭಿನಂದನೆಯು ಓದಲರ್ಹವಾದ ಕತೆಗಳು. ಅ ವೇ ವಿಶ್ವಾಮಿತ್ರ ಧುರೀಣದಲ್ಲಿಯು ರಾಮುವಿನ ರೋಮಾನ್ಸು, ಎನ್. ಕೆ. ಕುಲಕರ್ಣಿ ಶಿವಾರಾಧ್ಯರ ಮಯೂರದಲ್ಲಿಯವಿಧಿಬರಹ ಒಂದೇ ರೀತಿಯವಾಗಿವೆ. ಎರಡೂ ಕತೆಗಳಲ್ಲಿಯ ನಾಯಕರು ಒಬ್ಬ ಅಪರಿಚಿತ ಹೆಂಗಸಿನಲ್ಲಿ ಅನುರಾಗಗೊಳ್ಳುವರು. ಅವು ಪ್ರೇಮ ಯಾಚನೆಯ ಮಟ್ಟಿಗೂ ಬಂದು ನಿಲ್ಲುವದು. ಒಂದಿನ ಅವರು ಇನ್ನೊಬ್ಬರ ಹೆಂಡತಿರೆಂದು ತಿಳಿದು ಬರುವದು ಇದೆ ಎರಡರ ಸಾಮ್ಯವನ್ನು ತೋರು, ಬರೆವ ರೀತಿ ಮಾತ್ರ ಬೇರೆ ಬೇರೆ.

ಧ್ಯೇಯವಾದಿ ಕತೆಗಳಲ್ಲಿಯು—ಪಾಂಡುರಂಗರ ಉಂಕಾಣಾರ (ಕಂಠಯ) ಒಳ್ಳೆಯದೆನ್ನಬಹುದು. ಕತೆಯು— ರಾಯರು ವೇಶ್ಯಾಲಂಪಟರು. ಹುಡುಗಿಯು ಮುದಿದಿಗೆ ರಾಯರನ್ನು ವೇಶ್ಯಾ ಸದಾ ... ಸಣ್ಣಾಗಿ ಮಾತಲು ತಿಳಿಯದು. ನಡೆ ಮನೆಯ ಸರಸಮ್ಮನಿಗೆ ತನ್ನ ಬಾಳ್ವೆಗೆ ಯನ್ನು ತೋಡಿಕೊಳ್ಳುವಳು. ಅವಳು ಒಂದು ಯುಕ್ತಿಯನ್ನು ಹೇಳುವಳು. ಅದರಂತೆ ರಾಯರು ಹೋಟೆಯಿಂತ ರಾತ್ರಿಯ ಸಮಯದಲ್ಲಿ ಹಿರಿದ ನಾರಾಯಣನನ್ನು ಅ ಸಾಧ್ವಿಯು ಪಾಸಿಗೆಗೆ ಕರೆಯುವಳು. ರಾಯರಿಗೆ ಕೇಳ ಬರುವದು. ಅಂದಿನಿಂದ ರಾಯರು ಪತ್ನಿಯನ್ನು ನಂಬುವರು. ನಿತ್ಯ ಜೀವನದಲ್ಲಿ ಹೀಗಾಗಬಹುದೇ? ಎಂದು ನಾವು ಕೇಳ ಬಯಿಸೆ. ಈ ಕತೆಯ ಧ್ಯೇಯ ನಿಯಮವನ್ನು ಕೃತ್ರಿಮದ ಚೌಕಟ್ಟಿನಲ್ಲಿ ಹಾಕಿ ಗಲಿಬಿಡ ಕೇಳೆ ಹಾಕಿದಂತಾಗಿದೆ. ಅದಕ್ಕೆ ಕತೆಯ ಕಬ್ಬಡಂತೆ ಅರ್ಥ ಮಾಡಬಾರದು. ಒಂದಿಷ್ಟು ಪ್ರಕೃತಿ ಧರ್ಮದಂತೆ ನೋಡಿದರೆ ಹೆಚ್ಚು ಸ್ವಾಭಾವಿಕವಾಗುವದು. ರಾಯರು ತಮ್ಮ ದೈಹಿಕ ಲೀಲಾಕ್ಷೇತ್ರವನ್ನು ವೇಶ್ಯಾಗೃಹದಲ್ಲಿ ತಪ್ಪಾಗಿಟ್ಟುಕೊಂಡರೆ ಸ್ವಗೃಹಲಕ್ಷ್ಮಿಯೊಡನೆ ಸಾಧ್ವಿಯದು ಹಿರಿದ ವನಗೃಹಲಕ್ಷ್ಮಿಯೊಡನಿರುವ ಸಾಧ್ವಿಯದು ಸಿರಿದನ ನನ್ನು, ಒಗೆಯುವವನನ್ನು, ಕೂಲಿಯನ್ನು, ತೋಟಗಾರನನ್ನು ಸಂಚಿ ನಡೆದರೆ ವೇಶ್ಯಾಲಂಪಟ ಗಳೇ ಹೋಗೆ? ಎಂದು ಕೇಳಲು ಹಾಕುವದು. ಈ ಕತೆಯ ಕಥಾ ರಚನೆಯಿಂದಾಗಲಿ, ಶೈಲಿಯಿಂದಾಗಲಿ, ವ್ಯವಹಾರಜ್ಞಾನದಿಂದಾಗಲಿ ಕಟ್ಟಿಂದ ಪಂಕ್ತಿ ಅಡೋರ ಚಾಳಿಯ ಗಂಡಸರು ಮನೆಯಲ್ಲಿ ನಿಲ್ಲಬೇಕು. ಇದೇ ಕತೆಯ ಧ್ಯೇಯ ಅಲ್ಲದೆ ವಿ. ಕೃಷ್ಣರಾವ್ ಶಿಷ್ಟಾಚಾರ, ಎನ್. ಸೂರಪ್ಪರ ನಮ್ಮ ಸಂಘ, ಕೆ. ಶ್ರೀನಿವಾಸರಾವರ ನೋಹದ ಮಗು ಒಬ್ಬೆ ಓದುವಂತಹ ಕತೆಗಳು.

ಸುಕಿ ವಿ. ರತ್ನರ ಅನುರಾಧ (ಕೃಷ್ಣಾಮೃತ) ಕತೆಯು ಹೊಸಬಗೆಯದು ಕತೆಯು ಒಂದಿಷ್ಟು ಹರಟೆಯ ಓಟದಂತೆ ಕಂಡರೂ ಹೇಳುವ ಪಾತ್ರ ಮಳ್ಳಿ ಪಾಪಿಷ್ಠಳಿದೆ. ಅದರ ಯಾವುದಕ್ಕೆ ಹಳಿಯಲಿ, ಅದೇ ಪತ್ರಗಳನ್ನು ಕತೆಯೊಂದು ಕರೆಯಲು ಧೈರ್ಯ ಸಾಲದು.

ಮಾರ್ಗಶೀರ್ಷ ಪಟ್ಟಿ

ಕತೆಗಾರರಲ್ಲಿಯ ಎಚ್. ವಿ. ಭಟ್ಟರ ಮನಸಿನ ಮದುವೆ, ಆರ್. ಎಸ್. ರಾಮರಾವರ ವಿಚಿತ್ರ ಪಾದಗಳು ವಾಹಿಯಲ್ಲಿಯ, ಕೊ. ಚೆನ್ನಬಸಪ್ಪರ ಸುಣ್ಣದ ನೀರು, ಅಂತರಂಗದಲ್ಲಿಯ ಕೇ. ಶೇಷಶೆಂಕಂರ ಅದ್ಭುತಸಾಹಸ, ವಾಹಿನಿಯಲ್ಲಿಯ ಎಂ. ವಿ. ಸೀತಾರಾಮಯ್ಯರ ಗಂಧ್ರಿಯ ಗೂಡು ಪ್ರಜಾಮತದಲ್ಲಿಯ ಬಿ.ಲಾ.ಬಾಯಿ ಕಾಮತರ ಹರಿಶಿರಿ ಉತ್ತಮವಾದ ಕತೆಗಳು.

ಶ್ರೀಕಂಠರ ಅದ್ಭುತಸಾಹಸವು ಒಂದು ಸುಂದರವಾದ ವಿಡಂಬನಾತ್ಮಕ ಕತೆಯು. ಅದು— ಲೇಖಕನನ್ನು ಸಂಪಾದಕರು ಅವಮಾನಪಡಿಸಿದರು. ಅವರ ಹಣ ಕೊಡಲಿಲ್ಲ. ಅವರ ಲೇಖನದಿಂದ ಕತೆಗಾರನು ಆತ್ಮಹತ್ಯೆ ಮಾಡಿಕೊಂಡನು. ಯಮಲೋಕಕ್ಕೆ ಹೋದನು. ಯಮನು ಶಿಕ್ಷಿಸಿದನು. ಯಮನ ನಿಶ್ಚಯಾಯ. ಶಿಕ್ಷೆಗೆ ಕರಿಯು ನಗಹತ್ತಿದನು. ಯಮನು ಹೆದರಿದನು ಮತ್ತೆ ಭೂಲೋಕಕ್ಕೆ ಅಟ್ಟಿದನು. ಯಮಲೋಕದಿಂದ ಬಿಡುಗಡೆಯಾದರೂ ಭೂಲೋಕದ ಸಾಲಗಾರರ ಕಾಟ ತಪ್ಪಲಿಲ್ಲ. ಬೆನ್ನು ಹತ್ತಿದರು. ಒಂದು ಉಪಾಯ ಹೊಳೆಯಿತು. ಸಂಪಾದಕರನ್ನು ಬೆದರಿಸಿದ. ಕತೆಗಾರರಿಗೆ ಸಲ್ಲುವ ಹಣದ ಆಶ್ವಾಸನ. ಇದು ಕತೆಯ ಸಾಹಸ. ಕತೆಗಾರರು ಭೂಲೋಕ ಯಮಲೋಕವನ್ನು ಕಟ್ಟಮಾತ್ರದಲ್ಲಿ ತಿರಿ-ಇಳಿದು ಬರುವರು. ಅ ಮಾತು ಬೇರೆ. ಅದೊಂದು ಅವರ ವಾಸ್ತವಕಲ್ಪನಾ ವಿಲಾಸದ ವಿಡಂಬನಾತ್ಮಕ ಸುಂದರ ಚಿತ್ರ. ಕತೆಗಾರರಿಷ್ಟರಿಗೆ ಆಗುವವರಿಗೆ ಒಂದು ಹೊಸ ಅನುಭವ. ಕತೆಯನ್ನು ಓದಿದರೆ ಇನ್ನೂ ಹೆಚ್ಚು ತಿಳಿಯಲು ಸಾಧ್ಯ.

ಅವರ ಜೀವನದಲ್ಲಿಯ ಕೆ. ಗೋಪಾಲ ಕೃಷ್ಣರಾಯರ ಡಾ. ಸುಶೀಲಾ ಸಂಕೇತ್ ಕತೆಯು ಉತ್ಕೃಷ್ಟವಾದುದು. ಕತೆಯು- ಶ್ರೀನಿವಾಸಾಚಾರ್ಯನು ಕಾಲೇಜಿನ ನೀಲ್ ತರಗತಿಯ ವಿದ್ಯಾರ್ಥಿ. ಎಸ್. ಎ. ಪಾಸು ಮಾಡಿಕೊಂಡು ಮನೆಗೆ ಬಂದನು. ಒಂದಿನ ಕ್ಷೇತ್ರಕ್ಕೆ ಶುದ್ಧಿಗಾಗಿ ಒಬ್ಬ ವಿಧವೆಯ ಮನೆಯನು ಬಂದ. ಶರಿಗದ್ದರು ಮನೆಯ ಹೊರಗೆ ರಾತ್ರಿ ಮಲಗಿದರು. ಶ್ರೀನಿವಾಸನು ಆಕೆಯನ್ನು ಕಂಡನು. ಪಾಲುಬೆಳದಿಂಗಳಲ್ಲಿ ಚಂದ್ರಮನಂತಹ ಆಕೆಯ ಮುಖಕ್ಕೆ ಹೃದಯವನ್ನು ಮಾರುಗೊಂಡ. ತಿಂದುಣ್ಣಾ ಭರಿತ ಜೀವನದಲ್ಲಿ ವಿಕಾರದ ಕಿಡಿಯು ಹೊತ್ತಿಕೊಂಡು ತಾರತಮ್ಯ ಜ್ಞಾನವನ್ನು ಒರಸಿ ಹಾಕಿತು. ಶರೀರವು ದೇಹಿಂದು ನಡಿಯುತ್ತಿದ್ದರೂ ಗಂಟಲು ಒಣಗಿ, ಒಣಗಿ ಬರಹತ್ತಿತು. ಪೆಟ್ಟರೆಯಂಟ.ಗಳನ್ನು ಗಂಜಲಿಗೆ ಸೂರಿಕೊಂಡ. ಉಳಿದವುಗಳನ್ನು ಆಕೆಯ ಕಡೆಗೆ ಸೂರಹತ್ತಿದ. ಕಡೆಗೆ ಆಕೆಎದ್ದಳು. ಕೈಕಾಲು ತೊಳೆಯ ಹೋದಳು. ಹೋಗಿ ಎದುರ.ನಿಂತ ವಿಧವೆ ಗಾಬರಿಯಾದಳು. ಅವರೆ ಶ್ರೀನಿವಾಸನು ಕೈಹಿಡಿದು ಕೋಣೆಗೆ ಕರೆತಂದ. ಆಕೆ ಸಹ ಕಲ್ಲು ಗೊಂಬೆಯಂತೆ ಹಿಂಬಾಲಿಸಿದಳು. ಇನ್ನೇನ? ನರಕದ ಬಾಗಿಲು ತೆರೆದರೂ ಸರಿ! ಮುಚ್ಚಿದರೂ ಸರಿ! ಅವರೆ ಶ್ರೀನಿವಾಸನ ವಿಷಯ ಕಾಲಕ್ಕೆ ತರಾತು ಮಗೆಂತಾದಳ್ಳು ಪು. ಧಾರಿರೆಂದು ವಿಧವೆಯ ಕಾಲವೆರೆ ದಿನ್ನ. ಅವಳ ಅವನ್ನೇ ಶ್ರೀಕರಿಸಿದಳು. ಅನಾಥ ರಕ್ಷಕಳಾಗಿ ನೇಜಂಸಕನ್ನದಳು. ಮರುದಿನ ಶ್ರೀನಿವಾಸನಿರಲ್ಲಿ. ಒತ್ತಿಹೋಗಿ ಹೀವಾಲಯದ ನನ್ನ ಸೇರಿದನು. ಇಂದಿಗೆ ಅವನು ನಿತ್ಯಾನಂದ. ಸುಶೀಲೆಯು ಮಾತ್ರ ಕೋಣೆಯಲ್ಲಿ ಉಳಿದ ಕೇಸಲಬಂದು ಶ್ರೀನಿವಾಸನ ಚಿತ್ರವನ್ನು ಎತ್ತಿ ಇಂದಿಗೂ ಪೂಜಿಸುವಳು.

ಕತೆಯು ಪೆಟ್ಟಿಹೆಚ್ಚಿನಿಂದ ನರಕದ ಮೆಟ್ಟಿಲುಗಳನ್ನು ಏರಿಸಲ್ಲವನು. ಶ್ರೀನಿವಾಸನಾಗಲಿ, ಸುಶೀಲೆಯಾಗಲಿ ಪೂರ್ವ ಪರಿಚಿತರಲ್ಲ. ಮಧ್ಯದಲ್ಲಿಯ ಒಂದು ಅಗೋಚರ ಶಕ್ತಿಯಿಂದ ಬಲಲಿಸರು. ನಡೆದರು. ನರಕದ ಕೊನೆಗೂ ಬಂದರು. ಇನ್ನೇನು ಪಾತಾಳದಷ್ಟು ಆಳವಾದ ಕಾರವದಲ್ಲಿ ಮುಳುಗಬೇಕು. ಪಾಠಕರಿಗೆ ಇದೇ ಭಾವನೆಯಾಗುವದು. ಭಾಷೆ, ಭಾವ ಶಾಳಬದ್ಧವಾಗಿ ಸಾಗುವವು. ಅವರೆ ವಿವೇಕ ಜ್ಞಾನ ಮಿಂಚಿಕೊಂಡು ಶ್ರೀನಿವಾಸನನ್ನು ಎಳೆದು ನಿಲ್ಲಿಸಿ ಓಡಿಸಿ ಬಿಡುವದು. ಅವನು ಪಾವನನಾದ. ಅದಕ್ಕೆ ಅವನು ಇಂದಿಗೆ ನಿತ್ಯಾನಂದ. ಅದರೆ ಸುಶೀಲೆ? ಆಕೆಗೆ ನಾರಕಿ ಎನ್ನಬೇಕೆ? ಅಗದು. ಅವಳೂ ಪವಿತ್ರಳು. ನಿತ್ಯಾನಂದನಷ್ಟೇ ಪವಿತ್ರಳು. ಆದರ್ಶ ಜೀವನದ ಅಳತೆಗೋಲು ಸನ್ಯಾಸವೊಂದೇ ಇದ್ದರೆ ಅವಳೂ ಸನ್ಯಾಸಿನಿಯಾಗಬೇಕು. ಸನ್ಯಾಸವು ಆದರ್ಶ ಜೀವನಕ್ಕೆ ಒಂದು ವಿಧಿಕ್ರಮ. ಜೀವನದ ಜೊಂಜಾಟದಿಂದ ತಲೆ ಮರೆಸಿಕೊಂಡು ಗುಡ್ಡ, ಪರ್ವತಗಳನ್ನ ಆಶ್ರಯಿಸುವದಕ್ಕಿಂತ ರೋಗಿ, ಬಡವ, ದುಃಸಗಾರರ ನಡುವೆ ನಿಂತು ನಿಷ್ಫಲಾಪೇಕ್ಷೆಗಳಾಗಿ ದುಡಿಯುವವರು ಯಾವ ಬಗೆಯ ಕೀಳರೆ? ಸುಶೀಲೆಯ ಜೀವನವು ಇಂಥದೇ ಒಂದು ಆದರ್ಶ ಘಟ್ಟ. ಅವಳು ಶ್ರೀನಿವಾಸನನ್ನು ಮೆಚ್ಚಿದಳು. ಕೊಡಲು ಹವಣಿಸಿದಳು. ಪುರುಷನೊಬ್ಬರೇನೆಂಬುವನನ್ನು ಅರಿಯುವ ಪೂರ್ವದಲ್ಲಿ ವಿಧಿಯು ಆಕೆಯ ತಲೆಯ ಮೇಲೆ ವೈಧವ್ಯದ ಕೆಂಪು ಧ ವವನ್ನು ಎತ್ತಿ ಹಿಡಿಯಿತು. ಅದರೆ ಪ್ರಕೃತಿಯ ವಿಧಿಯನ್ನು ಮೋಸಗೊಳಿಸಿ ಆಕೆಗೆ ತಾರುಣ್ಯವನ್ನು, ಸೌಂದರ್ಯವನ್ನು ತಂದೊಡ್ಡಿತು. ವಿಧಿಯ ಮಾಟಕ್ಕಿಂತ ಪ್ರಕೃತಿಯ ಒತ್ತಡ ಹೆಚ್ಚಾದರೆ ಆಕೆ ಏನು ಮಾಡಬೇಕು? ಶ್ರೀನಿವಾಸನ ಜೊತೆಗೆ ಹೋದುದು ಒಳ್ಳೆಯದೇ ಕೆಟ್ಟದೇ ಎಂಬುದನ್ನು ವಿಧಿಯೂ, ಪ್ರಕೃತಿಗೂ ನಿರ್ಣಯಿಸಿಕೊಳ್ಳಲಿ. ಅದು ಮಾನವನ ಕರ್ತವ್ಯವಲ್ಲ. ಆಕೆ ಅವನನ್ನು ಪ್ರೀತಿಸಿದಳು. ಹೋದಳು. ಆ ಪ್ರೀತಿಯನ್ನು ಈ ವರೆಗೂ ಕಾಯ್ದು ತಂದಿರುವಳು. ಆಕೆಯ ಪ್ರೀತಿಯು ಕಾದಂಬರಿ ಇಲ್ಲವೆ ನಾಟಕ ಪ್ರೀತಿಯಲ್ಲವೆಂದು ಆಕೆಯ ಜೀವನವೇ ಸಾಕ್ಷಿ ಸುಶೀಲೆ ನಿತ್ಯಳೆಂತಳು.

ಆದರೆ ಕತೆಯಲ್ಲಿ ಒಂದೇ ಓಟವಿಲ್ಲ ನಡುವೆ ಆಕೆಯ ಗೆಳೆಯರು ಕೇಳಿದಂತೆ, ಆಕೆ ಹೇಳಿದಂತೆ ನಡೆದು ನಡುನಡುವೆ ನೀರಸವೆನಿಸುವದು. ಆದರೂ ಉತ್ತಮವಾದುದು. ಮಾರ್ಗಶೀರ್ಷ ಮಾಸದ ಪಟ್ಟಿ ಇದಕ್ಕೇ ಸರಿ.

ಪುಸ್ತಕ ಮತ್ತು ವಿಮರ್ಶೆ

(೨ ನೇ ಪುಟದಿಂದ)

ಸರ್ವಸ್ವತಂತ್ರ. ಅವರ ಪ್ರಕಟನೆಗಳಲ್ಲಿಯ ಒಂದು ಪುಟ್ಟ ಪುಸ್ತಕವಿದು. ಗಾತ್ರ ಪುಟ್ಟವಾಗಿದ್ದರೂ ವಿಷಯ ಬಹಳ ಗಂಭೀರ ಮತ್ತು ಮಹತ್ವದ ವಿಷಯ ಬಹಳ ಗಂಭೀರ ಮತ್ತು ಮನನದಂತೆ ಅತ್ಯುಪಯುಕ್ತವಾದುದಿದೆ. ಪ್ರಾಚೀನ ಮಹಾತ್ಮರು ಮನನದವರಿಗುಪಯುಕ್ತವಾದ ವಿಷಯಗಳನ್ನು ಬರೆಯುದುಂಟು. ವೇದದಲ್ಲಿಯೂ ಇಂಥ ಉಪದೇಶವುಂಟು. ಅವನ್ನೆಲ್ಲ ಕಥಾರೂಪವಾಗಿ ಪ್ರಕಟಿಸಿದರೆ ವಿವಿಧ ಸಮಸ್ಯೆಗಳ ಜಂಜಾಟದಲ್ಲಿ ಸಿಕ್ಕು ನರಳುತ್ತಿರುವ ಇಂದಿನ ಜನರಿಗೆ ವಿಶೇಷತಃ ತರುಣರಿಗೆ ಒಳ್ಳೆ ಬೋಧಪ್ರದವಾಗುವದೆಂದು ಹೇಳಬೇಕಿಲ್ಲ. ಶ್ರೀ ಜೋಶಿಯವರು ಈ ಉಪಕ್ರಮವನ್ನು ನಡೆಸಿದ್ದು ಅಭಿನಂದನೀಯವಾಗಿದೆ. ಕನ್ನಡಿಗರು ಅವರನ್ನು ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

Politics of Charkha

by J B. Kripalani Vora & Co. Publishers Ltd. 3 Round Building Bombay.

ಕ್ರೌನ ಅಷ್ಟಪತ್ರದ ೧೦೮ ಪುಟಗಳು ಬೆಲೆ ೧-೪-೦

ಆಚಾರ್ಯ ಕೃಪಲಾನಿಯವರು ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮವನ್ನು ಆಳವಾಗಿ ಅಭ್ಯಸಿಸಿದವರು ಅರಗಿಸಿಕೊಂಡವರು. ಕಾಂಗ್ರೆಸಿನ ಸೂತ್ರಗಳೂ ಸದ್ಯಕ್ಕೆ ಅವರ ಕೈಯಲ್ಲಿ ಇವೆ. ಇಂಥ ಅಧಿಕಾರಸಂಪನ್ನರು ಬರೆದ ಈ ಪುಸ್ತಕವು ಅಧಿಕೃತ ಮತ್ತು ಉಪಯುಕ್ತವಾಗಿದೆಂದು ಬೇರೆ ಹೇಳಬೇಕಿಲ್ಲ. ಇದರಲ್ಲಿ ಚರಖಾದ ರಾಜಕಾರಣ, ವ್ಯವಹಾರ್ಯ ಸಾಮ್ಯವಾದ, ಸಾಮ್ಯವಾದ ಮತ್ತು ಪ್ರಜಾಪ್ರಭುತ್ವ ನೈತಿಕ ತತ್ವಗಳು, ಗ್ರಾಮೋದ್ಯೋಗ ಮತ್ತು ಜನತಾಸಂಬಂಧ ಈ ಪ್ರಕರಣಗಳಿವೆ. ವೋರಾ ಕಂಪನಿಯವರು ಉಪಯುಕ್ತ ಇಂಥ ಪುಸ್ತಕವನ್ನು ಪ್ರಸಿದ್ಧಿಸಿದ್ದು ಅಭಿನಂದನೀಯವಾಗಿದೆ. ಕನ್ನಡದಲ್ಲಿಯೂ ಇಂಥ ಪುಸ್ತಕ ಪ್ರಕಟವಾಗುವದವಶ್ಯವೆಂದು ಬೇರೆ ಹೇಳಬೇಕಿಲ್ಲ.

ವರದಿ

ಕಿತ್ತೂರ ಚನ್ನಮ್ಮ ರಾಣಿ ಇತಿಹಾಸ ಮಂಡಲ ಬೈಲಹೊಂಗಲ. ಇದರ ವರದಿ ಮತ್ತು ಘಟನೆ.

ಕರ್ನಾಟಕದ ಕೀರ್ತಿನೇತ್ರ ಚನ್ನಮ್ಮ ರಾಣಿಯ ಸಾಹಸ ಕಾರ್ಯಗಳ ಇತಿಹಾಸ ಸಂಶೋಧನೆ ಮಾಡಿ ಪ್ರಕಟಿಸಬೇಕೆಂದು ಉದ್ದೇಶವನ್ನಿಟ್ಟುಕೊಂಡು ಈ ಮಂಡಲ ಸ್ಥಾಪಿತವಾಗಿದೆ. ಎಲ್ಲರೂ ಮಂಡಳದ ಕಾರ್ಯದಲ್ಲಿ ನೆರವನ್ನೀಯಬೇಕು.

ಮೇಹಧ್ವಂಸಿನಿ



ವ್ಯಾಧಿಗಳ ಮೇಲೆ ತೀಕ್ಷ್ಣ ಪ್ರಯೋಗಕಾರಿ ನೋವನ್ನು ಕೊಡುವ ಶಸ್ತ್ರ ಚಿಕಿತ್ಸೆ ಅನಾವಶ್ಯಕ ಶರೀರವನ್ನು ಕೃಶಿಸಿ, ಮಾನವನ ಜೀವಶ್ರಮಗೈಯುತ್ತಿರುವ ಬಳಿವು. ಕೀವು, ಪರಂಗಿಹುಣ್ಣು ಮೇಹಗಡ್ಡೆ, ಸ್ನೇಹವಾಯು, ಮೇಹಜ್ವರ. ಮೂತ್ರ ನಾಳದ ಉರಿ ಇದರ ಸೇವನೆಯಿಂದ ನಾಶವಾಗಿ ರಕ್ತ ಶುದ್ಧಿಯಾಗಿ ನರಗಳ ದೌರ್ಬಲ್ಯ ನಾಶವಾಗುವದು. ಬೆಲೆ- ದೊಡ್ಡ ಬಾಟ್ಲಿ ೪-೮-೦, ಮೀಡಿಯಂ ೨-೬-೦.

ಎಲ್ಲಾ ಕಡೆಗಳಲ್ಲೂ ದೊರಕುತ್ತದೆ.

ಡಿಸ್ಟ್ರಿಬ್ಯೂಟರರು:

ಆರ್. ಕೆ. ಕಬ್ಬೂರ ಆ್ಯಂಡ ಸನ್ಸ

ಹುಬ್ಬಳ್ಳಿ.

ಸ್ಟಾಕಿಸ್ಟರು:— ೧) ಧಾರವಾಡ ಫಾರ್ಮಸಿ, ಧಾರವಾಡ, ೨) ದುರ್ಗಾ ವಿಲಾಸ ಸ್ಟೋರ್ಸ, ಗದಗ, ೩) ಮೆಸರ್ಸ ಜತ್ತಿ ಆ್ಯಂಡ ಸನ್ಸ, ವಿಜಾಪುರ, ೪) ಲಕ್ಷ್ಮೀ ಸ್ಟೋರ್ಸ, ಬಾಗಲಕೋಟ, ೫) ಪಿ. ಪಿ. ವೀರಭದ್ರಪ್ಪ, ಹೊಸಪೇಟೆ, ೬) ಶಿರ್ಶಿ ಡ್ರಗ್ ಸ್ಟೋರ್ಸ ಶಿರಸಿ, ೭) ಶಿವಪ್ಪ ನಾಯಕ, ಕುಮಟಾ, ೮) ವಂಕಟೇಶ್ವರ ಫಾರ್ಮಸಿ, ರಾಣೆಬೆನ್ನೂರ ೯) ಮೆಸರ್ಸ ಮುಜುಮದಾರ & ಕಸಬೇಕರ ಬ್ರಾಸ್, ಕಾರವಾರ. (೧೦) ಹಾರ್ವಿ ಮತ್ತು ಜನರಲ್ ಮರ್ಚಂಟ್ಸ ಬಳ್ಳಾರಿ (೧೧) ದಿ ಯುನಿವರ್ಸಲ ಜನ್ಸಿಯ ಶಹಾಪುರ ಬೆಳಗಾವಿ

ಮೈಸೂರಿನಲ್ಲಿ ಸಾಮೂಹಿಕ ಹೋರಾಟ

ಮೈಸೂರು ಕಾಂಗ್ರೆಸ್ಸಿನ ಸತ್ಯಾಗ್ರಹ ನಿರ್ಣಯ

ಮೈಸೂರು ರಾಜಕಾರಣ ಪುನಃ ಬಿಕ್ಕಟ್ಟಿನ ಕಡೆಗೆ ಧಾವಿಸತೊಡಗಿದೆ. "ಪ್ರಭು ಸಂದೇಶ" ವೆಂದು ಹೇಳಿಸಿಕೊಳ್ಳುವ ಮಹಾರಾಜರ ಪ್ರಕಟನೆಯಿಂದ ಉಂಟಾಗಿದ್ದ ಅತೋಷದಯ ಮಂಜಿನಂತೆ ಕರಗುತ್ತಿದೆಯೆನ್ನಬೇಕು. ಆ ಸಂದೇಶ ಹೊರಟು ಒಂದು ತಿಂಗಳ ನಂತರ ಈಗ ಮೈಸೂರು ಕಾಂಗ್ರೆಸ್ ಕಾರ್ಯಸಮಿತಿ ಜೊತೆಗಾರ ಸರಕಾರಕ್ಕಾಗಿ ಸತ್ಯಾಗ್ರಹ ಹೋರಾಟವನ್ನು ಹೂಡಬೇಕೆಂಬ ನಿರ್ಧಾರವನ್ನು ತಾ ೧೭ ಕ್ಕೆ ಪ್ರಕಟಿಸಿರುವದರಿಂದ ಶಕ್ತಿ ಪರೀಕ್ಷೆ ಎಷ್ಟು ಹತ್ತಿರದಲ್ಲಿದೆಯೆಂಬ ಮಾತು ವೇದ್ಯವಾದೀತು. ಯುಕ್ತ ರಾಷ್ಟ್ರ ಕಾರ್ಯ ಕಲಾಪದಲ್ಲಿ ಭಾಗವಹಿಸಲು ದಿವಾನ ಸರ್ ಆರ್ಕಾಟ ರಾಮಸ್ವಾಮಿ ಮುದಲಿಯಾರರು ಹೋಗುವದಕ್ಕೂ ಈ ಹೇಳಿಕೆ ಪ್ರಸಿದ್ಧವಾಗುವದಕ್ಕೂ ತಾಳೆಬಿದ್ದುದು ಯೋಗಾಯೋಗವೊ ಉದ್ದೇಶಪೂರ್ವಕವೋ ಹೇಳಲಾಸಲ್ಲ.


ಕಾರಣಗಳು

ಮೈಸೂರು ಕಾಂಗ್ರೆಸ್ಸು ಉರಿದೇಳಲು ಕಾರಣಗಳಿವೆ. ನವೆಂಬರ ೩ ಕ್ಕೆ ಸಂಸ್ಥಾನ ಸರ್ವಾಧಿವೇಶನದಲ್ಲಿ ಮೈಸೂರು ಕಾಂಗ್ರೆಸ್ಸು ಸಮಿತಿಗೆ ಜೊತೆಗಾರ ಸರಕಾರವನ್ನು ಪಡೆಯಲು ಅವಶ್ಯವಾದುದನ್ನು ಮಾಡಲು ಆದೇಶವಿತ್ತಿತು. ಹೊಸ ಅಧ್ಯಕ್ಷರು ಜನರ ಶಾಂತಿಯನ್ನೂ ಸಂಯಮ ಸಾಧ್ಯತೆಯನ್ನೂ ಸಂಚಾರವಾದಿ ಅವಶ್ಯಕ ಹುರುಪು ಜನರಲ್ಲಿರುವದನ್ನು ಅರಿತುಕೊಂಡರು. ಆತ ಮಹಾರಾಜರಿಗೆ ಪ್ರಜೆಗಳ ಆಕಾಂಕ್ಷೆಗಳನ್ನು ನಿವೇದಿಸುವ ಮನವಿಯೊಂದು ಅರ್ಪಿಸಲ್ಪಟ್ಟಿತು. ಅದಕ್ಕುತ್ತರವೋ ಎಂಬಂತೆ ಜನವರಿ ೪ ರ ಮಹಾರಾಜರ ಘೋಷಣೆ ಹೊರಬಿತ್ತು. ಚನ್ನಪಟ್ಟಣದ "ಜಾತೀಯ" ಗಲಭೆಯ ಹೆಸರು ಹೇಳಿ ಸಂಸ್ಥಾನದಲ್ಲೆಲ್ಲ ನಿರ್ಬಂಧ ಶಾಸ್ತ್ರವನ್ನು ಸರಕಾರ ಹೇರಿದುದರಿಂದ ಶಾಂತಕಾಲವಾಗಿದ್ದರೂ ಮೈಸೂರು ಕಾಂಗ್ರೆಸ್ಸಿನ ಪ್ರಥಮ ಪ್ರತಿಕ್ರಿಯೆ ಘೋಷಣೆಗೆ ಅನುಕೂಲವೇ ಆಗಿತ್ತು. ಆದರೆ ಅದರ ಧಿಃಕಾರವಾಗಲು ಬಹಳ ಕಾಲ ಹಿಡಿಯಲಿಲ್ಲ. ಜೊತೆಗಾರ ಸರಕಾರವನ್ನು ಸ್ಥಾಪಿಸುವದೇ ಮುಂಬರುವ ಸುಧಾರಣೆಗಳ ಉದ್ದೇಶವಿದ್ದವಾದರೆ ಆ ಸುಧಾರಣೆಗಳನ್ನು ರೂಪಿಸುವಲ್ಲಿ ಸಹಕಾರ ನೀಡುವದಾಗಿ ಕಾಂಗ್ರೆಸ್ಸು ಹೇಳಿಕೆ ಹೊರಡಿಸಿ ಕೇಳಿತು (ಜನವರಿ ೨೪) ಅದಕ್ಕೆ ಸರಕಾರದ ಉತ್ತರವೇ ಇಂದಿಗೂ ಬಂದಿಲ್ಲ. ಮಂಡಳಿ ದಿವಾನ ರಾಮಸ್ವಾಮಿಯವರ ನಿರೀಕ್ಷೆಯೂ ಸಾಲಲಿಲ್ಲ. ಮಹಾರಾಜರ ಘೋಷಣೆ ಹೊರಟು ಒಂದೂವರೆ ತಿಂಗಳಾದರೂ ಅದನ್ನು ಬೇಗನೆ ಕಾರ್ಯರೂಪಕ್ಕೆ ತರುವ ಲಕ್ಷಣ ಕಾಣಲಿಲ್ಲ. ಪ್ರಮುಖ ರಾಜಕೀಯ ಪಕ್ಷಗಳ ಮುಂದಾಳುಗಳನ್ನು ಕರೆಸಿ ತಮ್ಮ ಕಳಕಳಿಯನ್ನು ತೋರಿಸುವ ಬದಲು ಅವರು ಸಾಮ್ರಾಜ್ಯವಾದದ ಶಾಲೆಯಲ್ಲಿ ಕಲಿತ ತಮ್ಮ ಛಲವನ್ನು ಮೆರೆಸಿ ಒಂದು ಪ್ರಶ್ನಾವಳಿಯನ್ನು ಹೊರಡಿಸಿ ಅದಕ್ಕೆ ವಿವಿಧ ರಾಜಕೀಯ ಪಕ್ಷ ಸಂಘಗಳು ಇಂಥ ತಾರೀಕಿನೊಳಗೆ ಉತ್ತರ ಕಳಿಸಬೇಕೆಂದೂ ಆ ಮೇಲೆ "ಯಾರಿಗೂ" ಅನ್ಯಾಯವಾಗದಂಥ ರಾಜ್ಯಘಟನೆಯನ್ನು ನಿರ್ಮಿಸುವದಾಗಿಯೂ ಶ್ರೀ ಮುದ್ರಾಂಛನದಿಂದ ಸಾರಿ, ಅಮೇರಿಕೆಗೆ ಯುಕ್ತ ರಾಷ್ಟ್ರ ಸಭೆಗೆ ಹೋಗಿ ಬಿಟ್ಟರು. "ಯಾರಿಗೂ ಅನ್ಯಾಯವಾಗದಂಥ" ಎಂದರೇನೆಂದು ಹಿಂದೆ ಬ್ರಿಟಿಷರ ಹಿಂದೆಯೆ ಕಲಿತುಕೊಂಡಿದ್ದಾರೆ. ಸ್ಪಷ್ಟವಾಗಿ ಅದರ ಅರ್ಥ "ಏನೂ ಇಲ್ಲ" ಎಂದಾಗುತ್ತದೆ. ಇನ್ನು ದಿವಾನ ಮಹಾಶಯರು ಸರ್ಕಾರ—ಘಟನಾ ಸಮಿತಿಗಳ ಸಂಧಾನದಲ್ಲಿ ಅರಿ ತೋರಿಸಿದ ಹಾತ್ರದ ಸುದ್ದಿಗಳೂ ಪ್ರಜೆಗಳನ್ನು ಹುರಿದುಂಬಿಸುವಂತಿರಲಿಲ್ಲ. ಹೀಗೆ ರಾಮಸ್ವಾಮಿಯವರ ಕೌಶಲ್ಯದ ಅರಿವುಳ್ಳವರು ಕೂಡ ಪಡುತಿದ್ದ ಆ ಕೌಶಲ ಸ್ವಾಮಿದಾಸ್ಯಕ್ಕಿಂತ ಆಚೆಗೆ ಹೋಗಲಾರರೆಂಬ ಭಯ ಸಹಜವಾಗಿ ಖಚಿತವಾಯಿತು.

ಮೈಸೂರು ಕಾಂಗ್ರೆಸ್ ಕಾರ್ಯಸಮಿತಿ ಈ ಪರಿಸ್ಥಿತಿಯಲ್ಲಿ ಮಾರ್ಚ ೧ ಕ್ಕೆ ಕೋಲಾರ ಜಿಲ್ಲೆಯಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಸಭೆ ಸೇರಿಸಲು ನಿರ್ಣಯಿಸಿದೆ. ಅದಕ್ಕಿಂತ ಮೊದಲೇ ಸತ್ಯಾಗ್ರಹ ಹೂಡುವ ದಿನವನ್ನು ನಿರ್ಧರಿಸಿ ಕಾರ್ಯಸಮಿತಿ ಸಭೆಯ ಮುಂದೆ ತರುವದು.

ಶ್ರೀ ದಿವಾಕರರ ಬೆಂಬಲ

ಮೈಸೂರು ಕಾಂಗ್ರೆಸ್ಸಿನ ಈ ಹೋರಾಟವೆಂದರೆ ಕರ್ನಾಟಕದ ಹೋರಾಟವೇ ಎಂದು ಘಟನಾ ಸಮಿತಿ ಸದಸ್ಯರಾದ ಶ್ರೀ ರಂಗರಾವ ದಿವಾಕರರು ಬೆಳಗಾವಿಯಲ್ಲಿ ಅಭಿಪ್ರಾಯ ಪಟ್ಟರು. ಮೈಸೂರು ಕರ್ನಾಟಕದ ಹೃದಯವಿದ್ದಂತೆ ಅದರ ಹೋರಾಟಕ್ಕೆ ಕರ್ನಾಟಕದ ಸಕ್ರಿಯ ಸಹಾನುಭೂತಿ ಬೇಕೆಂದು ಅವರು ಹೇಳಿದ್ದಲ್ಲದೆ ಪ್ರಜೆಗಳ ಹಕ್ಕುಬಾಧ್ಯತೆಗಳ ಅತ್ಯಂತ ಮಹತ್ವದ ಪ್ರಶ್ನೆ ಅಡಕವಾಗಿರುವ ರಾಜಕೀಯ ಸುಧಾರಣೆಗಳ ಕೆಲಸಕ್ಕಿಂತ ಯುಕ್ತ ರಾಷ್ಟ್ರ ಸಂಘದ ಒಂದು ವಿಶಿಷ್ಟ ಸಮಿತಿಯ ಕಾರ್ಯವನ್ನು ಹಿರಿದೆಂದು ಭಾವಿಸಿದ ದಿವಾನರ ವರ್ತನೆಗಾಗಿ ವಿಷಾದ ಪಟ್ಟರು.



ಮುಂಬಯಿ ತಾ. ೧೯

ಮುಂಬಯಿ ಶೇರ ಪೇಟೆ

ಮುಂಬಯಿ ಶೇರ ಪೇಟೆಯಲ್ಲಿ ಕಳೆದವಾರ ವರದಿಯ ನಂತರ ಟಾಟಾ ಪಾಲುಗಳಿಗೆ ಸ್ವಲ್ಪ ಬೇಡಿಕೆ ದೊರೆತರೂ ಮುಂದೆ ಯಥಾಪ್ರಕಾರ ಬೆಲೆಗಳು ಹಿಂದೆ ಸರಿದವು. ಟಾಟಾ ಸ್ಟೀಲ ಡಿಫರ್ಡ ೨೬೧೫-೦-೦ ರ ವರೆಗೇರಿ ೨೫೩೫-೦-೦ ತಿರುಗಿ ಮನಃ ೨೫೩೭-೮-೦ ಗೇರಿತು. ಟಾಟಾ ಸ್ಟೀಲ ಪಾಲುಗಾರರಿಗೆ ಬೋನಸ್ಸೆಂದು ಪಾಲುಗಳನ್ನೇ ಹಂಚುವರೆಂಬ ಸುದ್ದಿ ಬಂದರೂ ಅದರ ಫಲ ಬಹುಕಾಲ ತಾಳಲಿಲ್ಲ. ಡಾಯಿಂಗ್ ಪಾಲು ೨೬೪೫-೦-೦ ರಿಂದ ೨೫೪೦-೦-೦ ಕ್ಕೆ ಬಂದು ೨೫೬೦-೦-೦ ಕ್ಕೇರಿದವು. ಫಿನಲೆ ೩೬೯-೨-೦ ರಿಂದ ೩೫೦-೦-೦ ಕ್ಕಿಳಿದು ೩೫೬-೦-೦ ಕ್ಕೂ ಕೋಹಿನೂರು ೮೫೪-೦-೦ ರಿಂದ ೮೩೭-೦-೦ ಕ್ಕೂ ಸ್ವದೇಶಿ ೭೯೦-೦-೦ ರಿಂದ ೭೪೫-೦-೦ ಕ್ಕಿಳಿದು ೭೪೮-೦-೦ ಕ್ಕೂ ಗೋಕಾಕ ೩೪೫-೦-೦ ರಿಂದ ೩೩೮-೦- ಕ್ಕಿಳಿದು ೩೪೧-೦-೦ ಕ್ಕೂ ಸ್ಥಿತ್ಯಂತರ ಹೊಂದಿದವು. ಸಿಂಧ್ಯಾ ಸ್ಟೀಮ ೩೬-೧೦-೦ ರಿಂದ ೩೪-೧೨ ಕ್ಕಿಳಿದು ೩೫-೧೧-೦ ಕ್ಕೆ ಅಸೋಸಿಯೇಟೆಡ ಸಿಮೆಂಟ್ಸ್ ೨೦೩-೧೨-೦ ರಿಂದ ೧೯೬-೦-೦ ಕ್ಕಿಳಿದು ೧೯೮-೦-೦ ಸುಧಾರಿಸಿದವು. ಬ್ಯಾಂಕುಗಳಲ್ಲಿ ಸೆಂಟ್ರಲ್ ೧೩೨-೦-೦ ರಿಂದ ೧೨೯-೮-೦ ಕ್ಕಿಳಿದು ೧೩೦-೦-೦ ಕ್ಕೂ ಇಂಪೀರಿಯಲ್ ಎಸ್.ಸಿ. ೨೪೮೦-೦-೦ ರಿಂದ ೨೪೪೦-೦-೦ ಕ್ಕಿಳಿದು ೨೪೫೫-೦-೦ ರಿಝರ್ವ ೧೩೪-೦-೦ ರಿಂದ ೧೩೩-೪-೦ ಕ್ಕೂ ಬದಲಾಗಿವೆ.

ಸರಕಾರಿ ಸಾಲ ಪತ್ರಗಳಲ್ಲಿ ೩ ಪ್ರ.೧೦೦-೦-೦ ಯಿಂದ ೧೦೦-೧೦-೦ ಗೇರಿದೆ. ೧೯೪೭-೫೦ ಸಾಲ ೧೦೧-೧೨-೦ ಯ ಸುತ್ತ ಇದೆ.

ಚಿನ್ನ ಬೆಳ್ಳಿ

ರೂಪಾಯಿ ನಾಣ್ಯದಲ್ಲಿರುವ ಬೆಳ್ಳಿಯ ಅಂಶವನ್ನು ಸಂಪೂರ್ಣ ಇಲ್ಲದಂತೆ ಮಾಡಿ ನಿಕಲ ರೂಪಾಯಿಗಳನ್ನು ಹೊರಡಿಸಲು ಸರಕಾರ ನಿರ್ಣಯಿಸಿದ್ದಕ್ಕೆ ಬೆಳ್ಳಿ ಪೇಟೆಯಲ್ಲಿ ಬೇರೆ ಬೇರೆ ಅರ್ಥ ತೆಗೆಯಲಾಯಿತು. ಕೆಲವರು ಇದರಿಂದ ಬೆಲೆಯೇರುವದೆಂದರೆ ಉಳಿದವರು ಇಳಿಯುವದೆಂದರು. ಒಟ್ಟಿನ ಮೇಲೆ, ಬೆಳ್ಳಿಯ ಬೆಲೆ ಹಿಂದೇಟು ತಿಂದಿದೆ. ೧೫೮—೫—೦ ರಕ್ಷಿದ್ದ ತಯಾರಿ ಬೆಳ್ಳಿ ೧೫೩-೮-೦ ಕ್ಕೆ ಬಂದಿದೆ. ಆದರೆ ಆ ಮಾನದಿಂದ ವಾಯಿದಾ ಬೆಳ್ಳಿಯು ಲ್ಲಾದ ಇಳಿತ ಕಡಿಮೆ. ಅದು ೧೫೯-೫-೦ ರಿಂದ ೧೫೬-೧೨-೦ ಕ್ಕಿಳಿಯಿತು. ಚಿನ್ನದ ಬೆಲೆ ತುಸು ತಗ್ಗಿದೆ. ೧೦೭-೪-೦ ರಿಂದ ೧೦೫-೮-೦ ಕ್ಕೆ ಅದು ಬಂದಿದೆ.

ಅರಳೆ

ಅರಳೆ ಪೇಟೆ ಸಾಮಾನ್ಯವಾಗಿ ಕಳೆದ ವಾರಕ್ಕಿಂತ ತುಸು ಹೆಚ್ಚು ಕಳೆಗೊಂಡಿತ್ತು. ಮಾರ್ಚ ವಾಯಿದೆ ೪೩೬-೨೦-೦ ರ ವರೆಗೇರಿ ೪೩೫-೮-೦ ನಿಂತಿತು. ಮೇ ೪೪೬-೧೦-೦ ಜುಲೈ ೪೫೮-೦-೦ ಸಪ್ಟೆಂಬರ ೪೬೫-೧೦-೦

ಎಣ್ಣೆ ಕಾಳು

ಅಗಸಿ	೨೬-೧೦-೦
ಅಗಸಿ ಎಣ್ಣೆ	೧೨-೧೪-೦

ಶಿವಮೊಗ್ಗ

ಫೆ. ೧೧.

ಅಡಿಕೆ ದೇಶಾವರ	ನಂ೧	ಮಣ ೧ಕ್ಕೆ	೪೮-೫೨-೦
,,	,,	೨	೪೫-೪೮
,,	,,	೩	೪೦-೪೫
ಬೆಟ್ಟೆ ವಂತಿ			೩೨-೩೪
ಬೆಟ್ಟೆ			೨೯-೩೩
ರಾಶಿ ಅಲವು			೪೫ ೬೮
ಸುಲಿ			೪೩-೪೭
ತೋಳಸಾಲು			೪೨-೪೬

ಅಡಿಕೆಗೆ ಹೆಚ್ಚು ಬೇಡಿಕೆಯಿದೆ ವಿಶೇಷತಃ ಬೆಟ್ಟೆಗಳಿಗೆ ಬೇಡಿಕೆ ಹೆಚ್ಚು.

ಸಾಂಗಲಿ ಪೇಟೆ

ತಾ. ೨೦

ಅರಿಷಣ ಹೇರು	೮೦--೧೦೮
ಮೆಣಸಿನಕಾಯಿ ಹೇರು ,,	೧೨೫-೨೦೦
ಶೇಂಗಾ ಖಂಡಿ	೧೦೦--೧೦೬
ಮಿರ್ಜ ತಂಬಾಕು ಹೇರು	೧೨೫-೨೨೫
ತಂಬಾಕ ಪಂಢರಪುರಿ ,,	೧೫೦-೨೭೫
ತಂಬಾಕು ಅಕೋಳ(ಹೇರು)	೨೦೦-೩೭೫


ಹುಬ್ಬಳ್ಳಿ ಪೇಟೆ

ಜಯವಂತ ಹತ್ತಿ	ನಂ. ೧	೨೭೫-೨೮೦
,,	ನಂ. ೨	೨೬೫-೨೭೦
,,	ನಂ. ೩	೨೬೦ ೨೫೫
ಅಪ್ಲಂಡ ಹತ್ತಿ		೨೫೦-೨೬೦
ಜಿನ		೧೯೬
ಸಾಜಿನ		೧೭೦-೧೮೦
ಡಬಲರೋಲ		೧೭೫-೧೮೫

(೪ ನೇ ಪುಟದಿಂದ ಬಂದುದು)

ವಿಧಿ ತೀರ ಕಡಿಮೆ. [illegible] ೫೦ ಕೋಟಿ [illegible] ಅಂಕೆಯನ್ನು [illegible] ಕೋಟಿ ರೂಪಾಯಿ [illegible]. ೧೯೪೭-೪೮ ರ ಅಂದಾಜದಲ್ಲಿ ಸುಧಾರಣೆಯ ವಿಧಿ, [illegible] ಮತ್ತು [illegible] ಗಳು [illegible] ೧೯.೫೬ ಕೋಟಿ, ೧೧೧.೯೨ ಕೋಟಿ ಮತ್ತು ೨೬ ೪೫ ರೂಪಾಯಿಯಲ್ಲಿ ನಿಲ್ಲಬಹುದು.

ರೇಲ್ವೆಯರ ದರಿಂದ ರಿಂದ ನಿತ್ಯೋಪಯೋಗಿ ಸಾಮುಗ್ರಿಗಳ ಬೆಲೆಯ ಮೇಲೆ ವಿಶೇಷ ಪರಿಣಾಮವಾಗುವದಿಲ್ಲೆಂದೂ ಒಂದು ಹೇರು ಕಾಳಿನ ಮೇಲೆ ಒಂದು ಪೈಗಿಂತಲೂ ಕಡಿಮೆ ಹೆಚ್ಚಳವಾಗುವದೆಂದೂ ಅವರು ಪ್ರತಿಪಾದಿಸಿ ಸಾರ್ವಜನಿಕರ ಮತ್ತು ಕಾಮಿಲರ ಸಹಕಾರವಿದ್ದರೆ ಈಗಿರುವ ದೊಡ್ಡ ತೊಡಕುಗಳನ್ನು ದಾಟಿ ಬೇಗನೆ ರೇಲ್ವೆಗಳ ವಿಕಾಸ ಮುನರ್ ದೂರ್ಣಗಳನ್ನು ಪ್ರಾರಂಭಿಸಬಹುದೆಂದು ಆಶೆ ಪಟ್ಟರು.



ಕರ್ನಾಟಕ ಶಾಖೆ—
ಕೊಪ್ಪೀಕರ ರೋಡ ಹುಬ್ಬಳ್ಳಿ

ದಿ ನೂತನ ಆಯುರ್ವೇದ ಕಾರ್ಯಾಲಯ ಲಿ. ವಿಜಾಪುರ

ಪೂಯಮೋಹಾರಿ

ಪರಮಾ (ಗನೋರಿಯಾ) ರೋಗದ ಮೇಲೆ ಅತ್ಯಂತ ಪ್ರಭಾವಶಾಲಿಯಾದ ಔಷಧ

ಉರಿಮೂತ್ರ, ಹಟ್ಟಿಸಿ-ನೋವಾಗಿ-ಮೂತ್ರವಾಗೋಣ, ಮೂತ್ರದಲ್ಲಿ ಕೀವು ಹೋಗುವದು, ಧಾತುಕ್ಷೀಣತೆ, ಸಂಧಿವಾತ, ಮೊದಲಾದ ಪರಮಾದ ಎಲ್ಲ ಅವಸ್ಥೆಗಳಲ್ಲಿಯೂ ಅತ್ಯಂತ ಉಪಯುಕ್ತವಾಗಿದೆ.

ಅನುಪಾನ ಪತ್ರಿಕೆ ಔಷಧದ ಸಂಗಡ. ಶೀಸೆಯ ಬೆಲೆ ಮೂರು ರೂಪಾಯಿ ನಿಮ್ಮೂರಿನ ಸ್ಟಾಕಿಸ್ಟರಿಂದ ಪಡೆಯಬಹುದು. ಇಲ್ಲವೆ ರೂ. ೩—೧೨—೦ ಕಳಿಸಿ ಇಂದೇ ತರಿಸಿಕೊಳ್ಳಿರಿ.

ಹುಬ್ಬಳ್ಳಿ ಶಾಖೆ: ಕೊಪ್ಪೀಕರ ರೋಡ, ಹುಬ್ಬಳ್ಳಿ.
ಮೈಸೂರ ಸ್ಟೇಟ ಸೋಲ ಏಜಂಟ್ಸ—ಸತ್ಯನಾರಾಯಣ ಬ್ರದರ್ಸ, ೨೦ ನಾಗಸಂದ್ರ ರಸ್ತೆ, ಬೆಂಗಳೂರ

ಕರ್ನಾಟಕದಲ್ಲಿ ಎಂಜಿನಿಯರಿಂಗ ಕಾಲೇಜ

ಸ್ಥಾಪಿಸಲು ಸರಕಾರದ ಆತುರತೆ

ಮುಂಬಯಿ ಶಾಸನ ಸಭೆಯ ಕಾರ್ಯಕಲಾಪ

ಭಾರತದ ಭಾವೀ ರಾಜ್ಯಘಟನೆಯು ರಚಿತವಾಗುವ ಕಾಲದಲ್ಲಿ ಅಲ್ಪಸಂಖ್ಯಾಕರ ಹಿತಸಂಬಂಧಗಳನ್ನು ರಕ್ಷಿಸಲು ಘಟನಾ ಸಮಿತಿಯು ಸದಸ್ಯರಿಗೆ ಸೂಚನೆಗಳನ್ನು ಕೊಡಬೇಕು ಎಂಬ ಶ್ರೀ ಎಸ್. ಎಲ್. ಕರಂದೀಕರರು ಮುಂಬೈ ಶಾಸನ ಸಭೆಯಲ್ಲಿ ತಂದ ಗೊತ್ತುವಳಿ ಮೇಲೆ ೧೮ ನೇ ತಾರೀಕು ೭ ಜನ ಮಾತಾಡಿದರು. ಅಲ್ಪಸಂಖ್ಯಾಕ ಸಲಹಾ ಸಮಿತಿಯಿರುವಾಗ ಈ ಗೊತ್ತುವಳಿ ಅನವಶ್ಯಕವೆಂದು ಬಾಬೂಭಾಯಿ ಪಟೇಲರು ಹೇಳಿದರು. ಅಲ್ಪಸಂಖ್ಯಾಕರ ಹಿತ ಚಿಂತನೆಯ ಬಗ್ಗೆ ಬಹುಸಂಖ್ಯಾಕರ ಮನೋವೃತ್ತಿಯನ್ನು ಸೂಚಿಸುವ ಪರಿಸ್ಥಿತಿಯಲ್ಲೆಂದು ಎಸ್. ಎಚ್. ಶ್ರೇಟರರು ಹೇಳಿದರು. ವಿರೋಧಿ ಪಕ್ಷದ ಧುರೀಣರಾದ ಎ. ಎ. ಖಾನರು ಘಟನಾ ಸಮಿತಿಯು ಕ್ರಮಬದ್ಧವಾದುದಲ್ಲ ಅದುದರಿಂದ ಅದು ರಾಜ್ಯ ಘಟನೆಯನ್ನು ರಚಿಸಿದರೂ ತಾವು ತಮಗಾಗಿ ಪ್ರತ್ಯೇಕ ಪ್ರದೇಶವನ್ನು ಕೇಳಿಕೊಳ್ಳತಕ್ಕವರು ಎಂದು ಹೇಳಿದರು. ಮುಖ್ಯಮಂತ್ರಿ ಖೇರರು ಮಾತಾಡುತ್ತ ಘಟನಾ ಸಮಿತಿ ರಚಿಸುವ ರಾಜ್ಯಘಟನೆ ನಿಸ್ಸಂದೇಹವಾಗಿ ಸ್ವತಂತ್ರ ರಾಜ್ಯ ಘಟನೆಯಾಗುವದು. ಎಲ್ಲ ಪಕ್ಷ ಪ್ರತಿನಿಧಿಗಳು ಅದರಲ್ಲಿದ್ದಾರೆ. ಒಂದು ಪಕ್ಷ ಅದನ್ನು ಬಹಿಷ್ಕರಿಸಿದ್ದರೂ ಘಟನಾ ಸಮಿತಿ ತನ್ನ ಕೆಲಸವನ್ನು ಮುಂದೆ ಸಾಗಿಸುವದು. ಅಲ್ಪಸಂಖ್ಯಾಕರ ಹಿತರಕ್ಷಣೆಯ ತತ್ವವನ್ನು ಕಾಂಗ್ರೆಸ್ಸು ಒಪ್ಪಿಕೊಂಡಿರುವದರಿಂದ ಕರಂದೀಕರರು ತಮ್ಮ ಗೊತ್ತುವಳಿಯನ್ನು ಹಿಂತೆಗೆದುಕೊಳ್ಳಬೇಕೆಂದು ಹೇಳಿದರು. ಕರಂದೀಕರರ ಗೊತ್ತುವಳಿಯನ್ನು ಹಿಂತೆಗೆದುಕೊಂಡರು.

ಮಂತ್ರಿಗಳ ಪ್ರವಾಸ ವೆಚ್ಚ

ಕರಂದೀಕರರಿಗೆ ಉತ್ತರ ಕೊಡುತ್ತ ಅರ್ಥಸಚಿವರು ಮಂತ್ರಿಗಳ ಪ್ರವಾಸ ವೆಚ್ಚದ ಸಂಬಂಧದಲ್ಲಿ ಹೀಗೆ ಹೇಳಿದರು. ಗೃಹಮಂತ್ರಿ ಮುರಾರಜಿಯವರು ೧೯೪೭ ಎಪ್ರಿಲ ಮೇ ಮತ್ತು ಜೂನ ತಿಂಗಳಿನಲ್ಲಿ ಒಟ್ಟು ೬೦೦೭ ಮೈಲು ಸಂಚರಿಸಿದ್ದು ಒಟ್ಟು ೪೫೫ ರೂಪಾಯಿಗಳನ್ನು ಮಾತ್ರ ವೆಚ್ಚ ಮಾಡಿರುವರು. ಇನ್ನುಳಿದ ಎಲ್ಲ ಮಂತ್ರಿಗಳೂ ಕೂಡಿ ಇದೇ ಅವಧಿಯಲ್ಲಿ ೬೬೭೩—೬೦ ಮತ್ತು ಉಪಮಂತ್ರಿಗಳು ೧೩೩೩—೬—೦ ವೆಚ್ಚ ಮಾಡಿರುವರೆಂದು ಹೇಳಿದರು.

ವಿದೇಶದ ಬಂಡವಲಿನಿಂದ ನಡೆಯುವ ಜವಳಿ ಅಥವಾ ಕಬ್ಬಿಣ ಕಾರಖಾನೆಗಳು ಈ ಪ್ರಾಂತದಲ್ಲಿ ಇಲ್ಲವೆಂದು ತಿಳಿಸಲಾಯಿತು.

ಇಬ್ಬ ಮಾರಾಟದ ಪರಮಿಟ್ಟುಗಳನ್ನು ಗಿರಣಿಯೊಡೆಯರೇ ತಮ್ಮ ಬಂಧುಬಳಗದವರ ಅಥವಾ ಸೇವಕರ ಹೆಸರಿನಲ್ಲಿ ದೊರಕಿಸುತ್ತಾರೆಂಬ ಆರೋಪವನ್ನು ಪೂರೈಕೆ ಮಂತ್ರಿಯವರು ಅಲ್ಲಗಳೆದು ಇಂಥ ಲೈಸೆನ್ಸುಗಳನ್ನು ಹೆಚ್ಚಾಗಿ ಸಹಕಾರ ಸಂಘಗಳಿಗೇ ಕೊಡಲಾಗಿದೆಂದೂ ಹೇಳಲಾಯಿತು.

ಸೆಕ್ಶನ್ ರಾಯಟರರು

ಜಿಲ್ಲಾ ಹಾಗು ಸಿವಿಲ್ ಜಜ್ಜ ಕೋರ್ಟುಗಳಲ್ಲಿಯ ಸೆಕ್ಶನ ರಾಯಟರರನ್ನು ಕಾರಕೂನರನ್ನಾಗಿ ಮಾಡಿ ಅವರಿಗೆ ಕಾರಕೂನರಂತೆಯೇ ಸಂಬಳ, ಬಡತಿ ಪಿಂಚಣಿ ರಜೆ ತುಟ್ಟಿಭತ್ತೆ ಮೊದಲಾದವುಗಳನ್ನು ಗೊತ್ತು ಮಾಡಬೇಕಾಗಿ ಖೇಡಾ ಜಿಲ್ಲೆಯ ಬಾಬೂಭಾಯಿ ಪಟೇಲರು ಸೂಚಿಸಿದ ಗೊತ್ತುವಳಿಯ ಮೇಲೆ ೧೭ ನೇ ತಾರೀಕಿನ ದಿನ ಚರ್ಚೆ ನಡೆಯಿತು. ಮುಸ್ಲಿಂ ಲೀಗಿನೊಳಗೊಂಡು ಎಲ್ಲ ಸದಸ್ಯರೂ ಅದನ್ನು ಸಮರ್ಥಿಸಿ ಮಾತಾಡಿದರು. ಗೃಹಮಂತ್ರಿಗಳಾದ ಮುರಾರಜಿಯವರು ಮಾತಾಡುತ್ತ ಈ ಪ್ರಶ್ನೆಯ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ನಿಶ್ಚಿತ ಯೋಜನೆಯನ್ನು ಸಿದ್ಧಪಡಿಸಿ ಒಪ್ಪಿಸಿದಲ್ಲಿ ಸರಕಾರ ಆ ಬಗ್ಗೆ ವಿಚಾರ ಮಾಡುವುದಾಗಿ ಹೇಳಿ ಮಸೂದೆಯನ್ನು ಹಿಂತೆಗೆದುಕೊಳ್ಳಲು ಬಿನ್ನವಿಸಿದರು. ಅದರಂತೆ ಮಸೂದೆ ಹಿಂತೆಗೆದುಕೊಳ್ಳಲ್ಪಟ್ಟಿತು.

ಮುಂಬಯಿ ಸರಕಾರವು ಕರ್ನಾಟಕದಲ್ಲಿ ಎಂಜನಿಯರಿಂಗ ಕಾಲೇಜ ಸ್ಥಾಪಿಸಲು ಆತುರವಾಗಿದೆಂಬ ಹೇಳಿಕೆಯನ್ನು ಮುಖ್ಯ ಮಂತ್ರಿಗಳು ೧೬ ನೇ ತಾರೀಕು ಶಾಸನ ಸಭೆಯಲ್ಲಿ ಕೊಟ್ಟರು. ಪುಣೆಯ ಒಕ್ಕಲತನ ಕಾಲೇಜಿನಲ್ಲಿ ಕರ್ನಾಟಕ ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ ದೊಡಮೇಟಿಯವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತ ಪ್ರವೇಶದ ಅನುಕೂಲತೆ ಸಾಕಷ್ಟು ಇಲ್ಲದ್ದರಿಂದ ಅರ್ಜಿ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೂ ಪ್ರವೇಶ ದೊರೆಯಲಿಲ್ಲೆಂದು ಹೇಳಿದರು.

ಪ್ರಕಾಶಂರ ವಿರುದ್ಧ ಅವಿಶ್ವಾಸ ಗೊತ್ತುವಳಿ

ಫೆಬ್ರುಅರಿ ೨೮ ಕ್ಕೆ ವಿಚಾರ

ಮದ್ರಾಸ ಶಾಸನ ಸಭೆಯಲ್ಲಿಯ ಕಾಂಗ್ರೆಸ್ ಪಕ್ಷದ ೮೦ ಸದಸ್ಯರು ಪಕ್ಷದ ಧುರೀಣರಾದ ಪ್ರಕಾಶಂರ ವಿರುದ್ಧ ಅವಿಶ್ವಾಸ ಗೊತ್ತುವಳಿ ಕಳಿಸಿರುತ್ತಾರಷ್ಟೆ. ಈ ಸಂಬಂಧದಲ್ಲಿ ಪ್ರಕಾಶಂರು ಮತ್ತು ಅವರ ಮೇಲೆ ಅವಿಶ್ವಾಸವ್ಯಕ್ತಪಡಿಸುವ ಪಂಗಡ ಪ್ರಮುಖರು ದಿಲ್ಲಿಗೆ ಹೋಗಿ ಕಾಂಗ್ರೆಸ ವರಿಷ್ಠರೊಡನೆ ಚರ್ಚೆ ಮಾಡಿ ಬಂದರು. ಪ್ರಕಾಶಂರ ಮಂತ್ರಿಮಂಡಳದ ಭವಿತವ್ಯದ ನಿಶ್ಚಿತ ಸ್ವರೂಪವಿನ್ನೂ ಗೊತ್ತಾಗಿಲ್ಲ. ಈ ಗೊತ್ತುವಳಿಯ ಚರ್ಚೆ ಮಾಡುವುದಕ್ಕಾಗಿ ೨೮ ನೇ ತಾರೀಕಿಗೆ ಪಕ್ಷದ ಸಭೆ ಕರೆಯಲಾಗಿದೆ.

ಶಾಸನ ಸಭಾ ಮಂಡಳದ ಕಾಂಗ್ರೆಸ ಪಕ್ಷದಲ್ಲಿ ಬೇರೆ ಬೇರೆ ಪಂಗಡಗಳಿರುವವೇನೆಂಬುದನ್ನು ವಿಚಾರಮಾಡಲು ಪಕ್ಷದ ಧುರೀಣರಾದ ಶ್ರೀ ಪ್ರಕಾಶಂರು ಒಂದು ಸಮಿತಿಯನ್ನು ನಿಯಮಿಸಿರುವರು. ಈ ಸಮಿತಿಗೆ ಪ್ರಕಾಶಂರೆ ಅಧ್ಯಕ್ಷರಿದ್ದು ಆಂಧ್ರ, ತಮಿಳನಾಡು ಮತ್ತು ಕೇರಳ ಕಾಂಗ್ರೆಸ ಸಮಿತಿಗಳ ಅಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ ಸಮಿತಿಯ ಕಾರ್ಯದರ್ಶಿಗಳು ಸದಸ್ಯರಾಗಿರುವರು. ಮುಖ್ಯ ಉಪಮಂತ್ರಿ ಟಿ. ವಿಶ್ವನಾಥನ್‌ರು ಕಾರ್ಯದರ್ಶಿಗಳು. ಫೆಬ್ರುಅರಿ ೨೭ ಕ್ಕೆ ಸಮಿತಿಯು ಕಾರ್ಯ ಪ್ರಾರಂಭಿಸುವದು ಪಕ್ಷದ ಧುರೀಣರ ವಿರುದ್ಧ ಪಂಗಡಗಳನ್ನು ರಚಿಸಿಕೊಂಡು ಕಾರ್ಯ ನಡೆಸುವದು ೩೦ನೇ ನಿಯಮದನ್ವಯ ನಿರ್ಬಂಧಿಸಲ್ಪಟ್ಟಿದೆ. ಇಂಥವರನ್ನು ಪಕ್ಷದಿಂದ ತಳ್ಳಬೇಕೆಂಬ ನಿಯಮವಿದೆ. ಮೊನ್ನೆ ಮೊನ್ನೆ ನಡೆದ ಘಟನೆಗಳನ್ನು ಲಕ್ಷಿಸಿ ೧೦ನೇ ನಿಯಮ ಪ್ರಕಾರ ಪಕ್ಷದಲ್ಲಿ ಪಂಗಡಗಳ ರಚನೆಯಾಗಿದೆಯೊ ಎಂಬದನ್ನು ವಿಚಾರಿಸುವದು ಪಕ್ಷದ ಧುರೀಣನಾದ ನನ್ನ ಕರ್ತವ್ಯವೆಂದು ಶ್ರೀ ಪ್ರಕಾಶಂರು ಹೇಳಿದ್ದಾರೆ.

ರಿಝರ್ವ ಬ್ಯಾಂಕಿನ ರಾಷ್ಟ್ರೀಕರಣ

ನಿಕ್ಕಲಿನ ರೂಪಾಯಿ ಹೊರಡಿಸಲಾಗುವದು

ಕೇಂದ್ರ ಶಾಸನ ಸಭೆಯ ಕಾರ್ಯಕಲಾಪ

೧೮ ನೇ ತಾರೀಕು ಕೇಂದ್ರ ಶಾಸನ ಸಭೆಯಲ್ಲಿ ರಿಝರ್ವ ಬ್ಯಾಂಕನ್ನು ರಾಷ್ಟ್ರೀಕರಣಗೊಳಿಸುವ ಶ್ರೀ ಜಮುನಾದಾಸ ಮೆಹತಾರ ಗೊತ್ತುವಳಿಯ ಮೇಲೆ ಚರ್ಚೆ ನಡೆಯಿತು. ಮನು ಸುಬೇದಾರ, ಡಾ. ಝಿಯಾಉದ್ದೀನ ಸನ್ಯಾಲ, ಗೋಳೆ ಮೊದಲಾದವರು ಅದಕ್ಕೆ ಬೆಂಬಲ ಕೊಟ್ಟರು. ಅರ್ಥಿಕ ಮಂತ್ರಿಗಳಾದ ಲಿಯಾಕತ ಅಲ್ಲಿಖಾನರು ಚರ್ಚೆಗೆ ಉತ್ತರ ಕೊಡುತ್ತ ಸರಕಾರವು ಈ ಸೂಚನೆಯನ್ನು ಸಹಾನುಭೂತಿ ಪೂರ್ವಕವಾಗಿ ವಿಚಾರ ಮಾಡುವದೆಂದೂ ಬ್ಯಾಂಕಿನ ರಾಷ್ಟ್ರೀಕರಣವು ದೇಶಕ್ಕೆ ಹಿತಕಾರಿಯಾಗುವದೆಂದು ಸರಕಾರಕ್ಕೆ ವಿಶ್ವಾಸವಿದೆ ಎಂದೂ ಆದಿನಿಂದಿಲ್ಲಿ ಮಹೆಲು ಜವಾಹರಲಾಲರು ಹಿಂದೆಮುಂದೆ ನೋಡುವದಿಲ್ಲೆಂದೂ ಆಶ್ವಾಸಿಸಿ ಗೊತ್ತುವಳಿಯನ್ನು ಹಿಂತೆಗೆದುಕೊಳ್ಳಲು ತಿಳಿಸಿದರು ಅದರಂತೆ ಗೊತ್ತುವಳಿ ಹಿಂತೆಗೆದುಕೊಳ್ಳಲ್ಪಟ್ಟಿತು. ಹಿಂದ ರಾಷ್ಟ್ರ ಸೇನೆಯ ಕೈದಿಗಳನ್ನು ಬಂಧಮುಕ್ತ ಮಾಡಬೇಕೆಂಬ ಗೊತ್ತುವಳಿಯನ್ನು ಖಾನಅಬ್ದುಲ್ ಗಣಿಖಾನರು ಮಂಡಿಸಿದರು. ಅಹಮ್ಮದ ಜಾಫರ ಶ್ರೀಮತಿ ಅಮ್ಮೂ ಸ್ವಾಮಿನಾಥನ್ ಬಾಳಕೃಷ್ಣ ಶರ್ಮಾ ಇವರು ಅದನ್ನು ಸಮರ್ಥಿಸಿ ಮಾತಾಡಿದರು. ಚರ್ಚೆಯಿನ್ನೂ ಸಾಗಿದೆ.

ಪೂರ್ವ ಅಫ್ರಿಕೆ ಮಾರಿಶಸ್ ಪಶ್ಚಿಮ ಇಂಡೀಜ ಹಾಗು ಫಿಜಿಗಳಲ್ಲಿ ಪ್ರತಿನಿಧಿಗಳನ್ನು ನೇಮಿಸುವ ವಿಚಾರವಿದೆಂದು ವಿದೇಶ ಮಂತ್ರಿ ಪಂಡಿತ ಜವಾಹರಲಾಲರು ಕೃಷ್ಣ ದತ್ತ ಪಾಲಿವಾಲರಿಗೆ ಉತ್ತರಿಸಿದರು. ಪರರಾಷ್ಟ್ರ ಸರ್ವಿಸ ಬಗ್ಗೆ ಪ್ರತ್ಯೇಕ ತರಬೇತಿ ವರ್ಗ ತೆರೆಯುವದಿಲ್ಲ. ಆದರೆ ಅ. ಭಾ. ಆಡಳಿತ ವರ್ಗದವರಿಗಾಗಿ ಬೇಗನೆ ಡೆಹರಾಡೂನನಲ್ಲಿ ತೆರೆಯಲಿರುವ ಶಾಲೆಯಲ್ಲಿ ಅವರಿಗೆ ಶಿಕ್ಷಣ ಕೊಡಲಾಗುವದೆಂದೂ ವಿದೇಶ ಮಂತ್ರಿಗಳು ಹೇಳಿದರು.

ಸಂಯುಕ್ತ ರಾಷ್ಟ್ರ ಸಂಸ್ಥೆಗೆ ವಂತಿಗೆ

ಅಹಮ್ಮದ ಜಾಫರರಿಗೆ ಉತ್ತರ ಕೊಡುತ್ತ ಪಂ ಜವಾಹರಲಾಲರು ಹಿಂದುಸ್ತಾನ ಯುಕ್ತರಾಷ್ಟ್ರ ಸಂಘಕ್ಕೆ ಕೊಡಲಾದ ವಂತಿಗೆ ಬಗ್ಗೆ ಹೇಳಿದರು. ೧೯೪೬ ರಲ್ಲಿ ೧೦೦ ಕ್ಕೆ ೪.೦೯; ೧೯೪೭ ರಲ್ಲಿ ೩.೯೫ ಎಂದೂ ಗೊತ್ತಾಗಿದ್ದರೂ ಹಿಂದುಸ್ತಾನ ೧೯೪೭ರ ಬಗ್ಗೆ ಸುಮಾರು ೩೬೧೪೨೫೦ ರೂ ಕೊಡಬೇಕಾಗುವದೆಂದೂ ೧೯೪೬ ರಲ್ಲಿ ೨೬೨೧೬೯೦ ರೂ. ಕೊಟ್ಟಿತೆಂದೂ ೧೯೪೭ ರಲ್ಲಿ ಒಟ್ಟು ೨೭೭೪೦೦೦೦೦ ಡಾಲರ ವೆಚ್ಚ ಬರುತಿರುವದೆ ಇದಕ್ಕೆ ಕಾರಣವೆಂದೂ ಹೇಳಲಾಯಿತು. ಹಿಂದುಸ್ತಾನ ಯುಕ್ತರಾಷ್ಟ್ರ ಸಂಘದಲ್ಲಿ ಹೆಚ್ಚು ಪಾತ್ರವಹಿಸುತಿರುವದರಿಂದ ಅದರ ದರ್ಜೆಗನುಸರಿಸಿ ವಂತಿಗೆ ಕೊಡಲೇಬೇಕಾಗುವದೆಂದೂ ಹೇಳಿದರು.

ಬಿರುದುಗಳನ್ನು ತ್ಯಜಿಸಿದವರೆಷ್ಟು ಜನ ಎಂದು ಸರಕಾರಕ್ಕೆ ಗೊತ್ತಿಲ್ಲ ಎಂದು ಹೇಳಲಾಯಿತು. ಎಲ್ಲರೂ ಬಿರುದುಗಳನ್ನು ತಿರುಗಿ ಕಳಿಸಬೇಕೆಂದು ಸರಕಾರ ಕೇಳುವದೇ ಎಂದು ಪ್ರಶ್ನಿಸಿದ್ದಕ್ಕೆ ಅಧ್ಯಕ್ಷರು ಅಪ್ಪಣೆ ಕೊಡಲಿಲ್ಲ.

ಫ್ರೆಂಚ ಇಂಡೋಚೀನಕ್ಕೆ ಹೋಗುವ ಫ್ರೆಂಚ ವಿಮಾನಗಳು ಹಿಂದುಸ್ತಾನದ ಮೇಲೆ ಹಾಯ್ದು ಹೋಗಲಿಕ್ಕೇಕಾಗುತಿದೆ. ಆದರೆ ಅವುಗಳಲ್ಲಿ ಯುದ್ಧ ವಿಮಾನಗಳು ಸ್ವಲ್ಪ ಇದ್ದುವು. ಅವುಗಳಿಗೆ ಮುಂದಿನ ಪ್ರಯಾಣಕ್ಕಾಗಿ ಬೇಕಾದ ಸಾಹಿತ್ಯಗಳನ್ನಷ್ಟೇ ಇಲ್ಲಿ ಒದಗಿಸಲಾಯಿತೆಂದೂ ಹೇಳಿದರು.

ನಿಕ್ಕಲಿನ ರೂಪಾಯಿಗಳು

ಈಗ ಪಾವಲಿ ಅರ್ಧ ರೂಪಾಯಿಗಳನ್ನು ಶುದ್ಧ ನಿಕ್ಕಲ್ಲಿನಿಂದ ತಯಾರಿಸುವಂತೆ ಇನ್ನು ಮುಂದೆ ರೂಪಾಯಿ ನಾಣ್ಯವನ್ನಾದರೂ ಶುದ್ಧ ನಿಕ್ಕಲ್ಲಿನಿಂದ ತಯಾರಿಸಲಾಗುವದು. ಸರಕಾರಕ್ಕೆ ಈ ಅಧಿಕಾರವನ್ನು ದೊರಕಿಸಿ ಕೊಡುವದಕ್ಕಾಗಿ ಅರ್ಥಿಕ ಮಂತ್ರಿಗಳು ಶಾಸನ ಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಿದ್ದಾರೆ. ಅದೇ ರೀತಿ ಬ್ಯಾಂಕಿಂಗ ಕಂಪನಿ ಕಾಯದೆಯ ತಿದ್ದುಪಡಿ ಮತ್ತು ಸಂಗ್ರಹಕ್ಕಾಗಿ ಒಂದು ಮಸೂದೆಯನ್ನು ಮಂಡಿಸಿದ್ದರು. ಈ ವಿಷಯದ ಬಗ್ಗೆ ವಿಶೇಷ ಸಮಿತಿ ವರದಿ ಮಾಡಿದೆ.

ಹುಟ್ಟುವಳಿಯನ್ನು ಹೆಚ್ಚಿಸಲು ಸರಕಾರ ಸಹಕಾರಿ ಒಕ್ಕಲತನ ಪ್ರಾರಂಭಿಸಲು ಯೋಚಿಸುವರೋ ಎಂದು ಕೇಳಿದ್ದಕ್ಕೆ ಆಹಾರ ಕಾರ್ಯದರ್ಶಿಗಳು ಅದರ ವಿಚಾರಣಾ ನಡೆದಿರುವದು. ಆದರೆ ಅದನ್ನು ಜಾರಿಯಲ್ಲಿ ತರುವಲ್ಲಿ ಅನೇಕ ವ್ಯವಹಾರಿಕ ಅಡಚಣಿಗಳು ಇವೆ. ಆದರೂ ವಿಶಿಷ್ಟ ಪ್ರದೇಶದಲ್ಲಿ ಅದರ ಪ್ರಯೋಗ ಮಾಡಿ ವ್ಯವಹಾರಿಕ ಅಡಚಣಿಗಳನ್ನು ಹೇಗೆ ಎದುರಿಸಬೇಕೆಂಬದನ್ನು ನೋಡುವ ಯೋಜನೆಯಿದೆ. ಅವಶ್ಯವಾದ ಎಲ್ಲ ಸೌಕರ್ಯಗಳು ಲಬ್ಧವಾದರೆ ಹಿಂದುಸ್ತಾನ ಇರಿಂದ ೧೦ ವರುಷಗಳಲ್ಲಿ ಸ್ವಾವಲಂಬಿಯಾಗುವದು ಪೂರ್ಣಸಾಧ್ಯವಿದೆಂದೂ ಹೇಳಿದರು.

ಜವಳಿ ಬಟ್ಟೆ ಕೊರತೆ

ಉದ್ಯೋಗಕ ಮಂತ್ರಿಗಳಾದ ರಾಜಾಜಿಯವರು ಕರಮರಕರರಿಗೆ ಉತ್ತರ ಕೊಡುತ್ತ ಹೀಗೆ ಹೇಳಿದರು. ಸದ್ಯಕ್ಕೆ ಬಡವರಿಗೆ ಬೇಕಾಗುವ ಬಟ್ಟೆಗಳನ್ನೊಳಗೊಂಡು ಎಲ್ಲ ಬಗೆಯ ಜವಳಿ ಬಟ್ಟೆಗಳ ಕೊರತೆಯಿದೆ. ಗಿರಣಿಗಳು ತಮಗೆ ಲಾಭಕರವಾದ ಬಟ್ಟೆಗಳನ್ನು ಹೊರಡಿಸುತಿರಬಹುದು. ಅದು ಬಟ್ಟೆಯ ಕೊರತೆಗೆ ಕಾರಣವಲ್ಲ. ಕೆಲಸದ ಗಂಟೆ ಕಡಿಮೆ ಮಾಡಿದ್ದು, ಗಲಭೆ ಪರಿಸ್ಥಿತಿ ಮತ್ತು ಸಂಪು, ನಯವಾದ ಬಟ್ಟೆ ಹೊರಡಿಸುತಿರುವದು ಮೊದಲಾದವು ಇದಕ್ಕೆ ಕಾರಣ. ಇವನ್ನೆಲ್ಲ ಸರಿಪಡಿಸಿ ಹುಟ್ಟುವಳಿ ಹೆಚ್ಚಾಗುವಂತೆ ನೋಡಿಕೊಳ್ಳಲಾಗುವದೆಂದೂ ಹೇಳಿದರು.

ಇಂಡಿಯನ್ ಅರ್ಮ್ಸ ಕಾಯದೆ ತಿದ್ದುಪಡಿ ಮಸೂದೆಯನ್ನು ಸಾರ್ವಜನಿಕರ ಅಭಿಪ್ರಾಯಾರ್ಥ ಕಳಿಸಿ ಕೊಡಬೇಕೆಂದು ಅಹಮ್ಮದ ಜಾಫರರ ಸೂಚನೆ ಬಿದ್ದು ಹೋಯಿತು. ಗೃಹಮಂತ್ರಿ ಸರದಾರ ಪಟೇಲ ಮತ್ತು ಕರಮರಕರರು ಇದನ್ನು ವಿರೋಧಿಸಿದರು. ವೆಂಕಟಸುಬ್ಬರೆಡ್ಡಿಯವರ ಕ್ರಿಮಿನಲ್ ಟ್ರಾಯಿಬ್ಸ ಕಾಯದೆ ತಿದ್ದುಪಡಿ ಮಸೂದೆ ಸ್ವೀಕೃತವಾಯಿತು. ಅದರಂತೆ ಸಯ್ಯದ ಛಿಕ ನಾರಂಗರ ಮುಸ್ಲಿಂ ವಕ್ಫ ಕಾಯದೆ ತಿದ್ದುಪಡಿಯೂ ಪಾಸು ಮಾಡಲಾಯಿತು. ಶ್ರೀ ಆದಿತ್ಯನ್‌ರ ಪುರಾವೆ ಕಾಯದೆ ತಿದ್ದುಪಡಿ ಪರಿಶೀಲಕ ಸಮಿತಿಗೆ ಒಪ್ಪಿಸಲಾಯಿತು. ಡಾ. ದೇಶಮುಖರ ಇಂಡಿಯನ್ ಕಂಪನಿ ಕಾಯದೆ ತಿದ್ದುಪಡಿ ಸಾರ್ವಜನಿಕರ ಅಭಿಪ್ರಾಯಾರ್ಥ ಕಳಿಸಲಾಯಿತು.

ಮ್ಯೂಚುಯಲ್ ಮನಿ ಸರ್ಕ್ಯುಲೇಷನ್ ಸ್ಕೀಮ್

--- ವಿನಂತಿ ---

ಈ ಸ್ಕೀಮಿನಲ್ಲಿ ಮೆಂಬರಾಗಿ ಸೇರತಕ್ಕವರ ನಂಬಿಕೆಗಾಗಿ ಮತ್ತು ಸ್ಕೀಮಿನಲ್ಲಿ ಏನಾದರೂ ಲೋಪಗಳು ಬಂದಲ್ಲಿ ಸರಿಪಡಿಸಲೂ ಸಹ ೧೦೦೦–೦–೦ ರೂಪಾಯಿಗಳನ್ನು ಶ್ರೀ ಶಾರದಾ ಬ್ಯಾಂಕ್ ಲಿಮಿಟೆಡ್ ಇವರಲ್ಲಿ ಡಿಪಾಜಿಟ್ ಇಟ್ಟಿದ್ದೇವೆ. ಅದ್ದರಿಂದ ಮೆಂಬರುಗಳು ಅಭಿಮಾನವಿಟ್ಟು ಸ್ಕೀಮಿಗೆ ಸೇರಿ ಸ್ಕೀಮಿನ ಪ್ರಯೋಜನ ಹೊಂದಿ ತಮ್ಮ ಇಷ್ಟ ಮಿತ್ರರಲ್ಲಿ ಪ್ರಚುರಪಡಿಸಿ ಸ್ಕೀಮಿನ ಪ್ರಯೋಜನಗಳನ್ನು ಹೊಂದಬೇಕಾಗಿ ಆಶಿಸಿದೆ.

೩—೮—೦ ರೂ. ಗಳಿಗೆ ೧೭೪೭೦—೦—೦ ರೂ. ಪಡೆಯಬಹುದು

ಇದು ಲಾಟರಿಯಲ್ಲ, ಸ್ಪರ್ಧೆಯಲ್ಲ, ಕೇವಲ ಪರಸ್ಪರ ಸಹಾಯದಿಂದ ಈ ಆದಾಯವನ್ನು ಪ್ರತಿಯೊಬ್ಬನೂ ಸರದಿಯಂತೆ ಕಾಲಾನುಕ್ರಮವಾಗಿ ಪಡೆಯಬಹುದು.

ವಿವರಗಳಿಗೆ ೦—೩—೦ ಸ್ಟಾಂಪಿಟ್ಟು ಬರೆಯಿರಿ:—

ಮುಖ್ಯ ಕಾರ್ಯಾಲಯ:—	ಅಧಿಕೃತ ಪ್ರತಿನಿಧಿಗಳು:—
ದಿ. ಮ್ಯೂಚುಯಲ್ ಮನಿಸರ್ಕ್ಯುಲೇಷನ್ ಸೊಸೈಟಿ,	S. P. V. ಜೋಯಿಸ್,
೨, ಟಿಸ್ಸ್ ಕಾಟ್ ರೋಡ್, ರಾಯಪೇಟೆ- (ಮದರಾಸು)	ಸ್ಕೀಂ ಸ್ಪೆಷಲಿಸ್ಟ್ ಶೃಂಗೇರಿ–ಕಡೂರ

ಜನವರಿ ತಿಂಗಳಲ್ಲಿ ತಾ|| ೨೫ ರ ವರೆಗೆ ಸೇರಿದ ಹೊಸ ಮೆಂಬರುಗಳ ಸಂಖ್ಯೆ ೧೩೦೦

ಐಂ೬ ಮಂದಿ ಲಾಭ ಹೊಂದಿರುವರು— ಪಿ. ಎಂ. ವಾಸುದೇವ ನಂಬೂದರಿ

ಅಧಿಕ ಲಾಭದ ಮೊತ್ತ ೧೧೯೪–೮–೦ ಇನ್ನೂ ಲಾಭ ಹೊಂದುತ್ತಲೇ ಇರುವರು

ಹಿಂದುಸ್ಥಾನ

ಮುಂಬಯಿ

ಪ್ರಾಥಮಿಕ ಶಿಕ್ಷಕರಿಗೆ ಮಾರ್ಚ ೧ ರಿಂದ ತಾನು ವಿಧಿಸಿದ ಪ್ರಮಾಣದ ಪ್ರಕಾರ ಸಂಬಳ ಹಾಗು ಭತ್ತೆ ನಿಯಮಿತವಾಗಿ ಮುಟ್ಟುವಂತೆ ಉಪಾಯಗಳನ್ನು ಕೈಕೊಳ್ಳುವದೆಂದು ಮುಂಬಯಿ ಸರಕಾರ ಸಾರಿದೆ.

ಸಾಮೂಹಿಕ ದಂಡಕ್ಕೆ ಗುರಿಯಾದ ನಾಲ್ವರು ನಿವಾಸಿಗಳು ಮುಂಬಯಿ ಸುರಕ್ಷಿತತೆ ಆರ್ಡಿನನ್ಸಿನ ಕ್ರಮಬದ್ಧತೆಯನ್ನು ಪ್ರಶ್ನಿಸಿ ಜಿಲ್ಲಾ ಸೆಶನ್ಸ ಕೋರ್ಟಿಗೆ ಹೋಗಿರುವರು. ಈ ತರದ ಆರ್ಡಿನನ್ಸ ಹೊರಡಿಸಲು ಗವರ್ನರರಿಗೆ ಅಧಿಕಾರವಿಲ್ಲೆಂದು ಅವರ ವಾದವಿದೆ.

ಬ್ಯಾಂಕ ಆಫ್ ಇಂಗ್ಲಂಡದ ಒಡೆತನದ ೩೪ ಲಕ್ಷ ಬಂಗಾರದ ಸಾವರಿನ್ ರಿಝರ್ವ ಬ್ಯಾಂಕು [illegible]ದಲ್ಲಿಯ ಬ್ಯಾಂಕಿಗೆ ವಿಮಾನದಿಂದ ಕಳಿಸು[illegible] ಈ ಬಂಗಾರ ಹಿಂದುಸ್ಥಾನದ್ದಲ್ಲ. ಹಿಂದುಸ್ಥಾನ ಇಂಗ್ಲಂಡ ಮತ್ತು ಗ್ರೀಸ ದೇಶಗಳ ನಡುವೆ ಆದ ಕರಾರನ್ನು ರಿಝರ್ವ ಬ್ಯಾಂಕ ಪೂರ್ಣ ಮಾಡುತಿರುವದೆಂದು ಬ್ಯಾಂಕಿನ ಓರ್ವ ಅಧಿಕಾರಿ ಹೇಳಿದನು.

ಮುಂಬಯಿ ಪ್ರಾಂತದಲ್ಲಿಯ ಮನೆಗಳ ಕೊರತೆಯನ್ನು ನಿವಾರಿಸಬೇಕೆಂಬ ಯೋಜನೆಯಲ್ಲಿ ಒಂದಂಶವೆಂದು ಸರಕಾರದವರು ಮುಂಬಯಿಯಲ್ಲಿ ಕೂಲಿಕಾರರ ಅನುಕೂಲತೆಗಾಗಿ ವರ್ಲಿ ಪಾರ್ಕಿನಲ್ಲಿ ೩೬೦ ಮನೆಗಳನ್ನು ಕಟ್ಟಿಸಬಯಸಿರುವರು. ಮನೆಗಳ ಬಾಡಿಗೆ ನಿಜವಾಗಿ ವಿಚಾರ ಮಾಡಿದರೆ ಕೂಲಿಕಾರರ ಸಂಬಳದ ನೂರಕ್ಕೆ ೪೦—೫೦ ರಷ್ಟು ಆಗತಕ್ಕದ್ದು. ಆದರೆ ಈಗ ನೂರಕ್ಕೆ ೧೦—೧೫ ರಷ್ಟು ಮಾತ್ರ ತೆಗೆದುಕೊಳ್ಳಲಾಗುವದೆಂದು ತಿಳಿಯುತ್ತದೆ.

ಅಹಮ್ಮದ ನಗರದ ಸ್ಥಾನಿಕ ಹಿಂದೂ ಮಹಾಸಭೆಯ ಮುಖಂಡರಾದ ಶ್ರೀ ವಿ. ಆರ್. ಕರಕರೆ ಹಾಗು ಆರ್. ಡಿ. ಬ್ರಹ್ಮೆಯವರು ಎರಡು [illegible]ಗಳ ವರೆಗೆ ನೌಖಾಲಿ ಬಗ್ಗೆ ಭಾಷಣ ಮಾಡ[illegible]ದೆಂದು ವಿಧಿಸಲಾಗಿದೆ. ಇವರು ನೌಖಾಲಿಯಲ್ಲಿ ಪರಿಹಾರ ಕಾರ್ಯ ಮಾಡಿಬಂದಿರುವರು.

ವಿಶಾಖಾ ಪಟ್ಟಣದ ನೌಕಾ ಕೇಂದ್ರ ಸಂಬಂಧದಲ್ಲಿ ಗುಪ್ತ ಸಂಗತಿಗಳ ಬಗ್ಗೆ 'ಲೋಕಯುಗ'ದಲ್ಲಿ ಲೇಖರೂಪವಾಗಿ ಪ್ರಸಿದ್ಧಿಸಿದ್ದಕ್ಕಾಗಿ ಸಂಪಾದಕ ಎಂ ಬಿ ರಾವ ಎಂಬವರನ್ನು ಸೆರೆಹಿಡಿದು ಸಾವಿರ ರೂಪಾಯಿ ಜಾಮೀನಿನ ಮೇಲೆ ಬಿಡಲಾಗಿದೆ.

ಮುಂಬಯಿ ಮುನಸಿಪಲ್ ಕಾರಪರೇಶನ್ನಿನವರಿಗೆ ಯಾವದೊಂದು ಟ್ರಾಮ್ವೆ ಅಥವಾ ವಿದ್ಯುತ್ ಪೂರೈಕೆ ಸಂಸ್ಥೆಯನ್ನು ಕೊಳ್ಳುವ ಸಂಪೂರ್ಣ ಅಧಿಕಾರವನ್ನು ಕೊಡುವಂತೆ ಮುಂಬಯಿ ಮುನಿಸಿಪಾಲಿಟಿ ಕಾಯಿದೆಯಲ್ಲಿ ತಿದ್ದುಪಡಿ ಮಾಡಬೇಕೆಂದು ಸೂಚಿಸುವ ಮಸೂದೆ ಸರಕಾರಿ ಗ್ಯಾಝಿಟನಲ್ಲಿ ಪ್ರಸಿದ್ಧವಾಗಿದೆ.

ಮೋಟಾರ ಸಾರಿಗೆಯನ್ನು ರಾಷ್ಟ್ರೀಕರಿಸುವ ಪ್ರಾಂತೀಕರಿಸುವ ಯೋಜನೆಯನ್ನೊಳಗೊಂಡ ವಿಧದಲ್ಲಿ ೧೯೩೯ ನೇ [illegible]ಯ ಮೋಟರ ಕಾಯಿದೆಯಲ್ಲಿ ತಿದ್ದುಪಡಿ [illegible]ಲಾಗುವ ಮಸೂದೆಯೊಂದು ಈ ಸಲದ ಮುಂಬಯಿ ಗ್ಯಾಝಿಟನಲ್ಲಿ ಪ್ರಕಟವಾಗಿದೆ.

ಹೊಸದಿಲ್ಲಿ

ಜಾತೀಯತೆಯ ತತ್ವವನ್ನಾಧರಿಸಿ ರಚಿತವಾದ ವಿದ್ಯಾಪೀಠಕ್ಕೆ ಸರಕಾರದ ವಿರೋಧವಿದೆ. ಇಂದಿನ ವರೆಗೆ ಇಂಥ ವಿದ್ಯಾಪೀಠಗಳಿಂದ ರಾಷ್ಟ್ರಕ್ಕೆ ವಿಪರೀತ ಹಾನಿಯಾಗಿದೆಂದು ಮುಂತಾಗಿ ಮೌ. ಅಬುಲ ಕಲಂ ಅಝಾದರು ಪತ್ರಿಕಾಪ್ರತಿನಿಧಿಗಳಿಗೆ ಕೊಟ್ಟ ಸಂದರ್ಶನದಲ್ಲಿ ಹೇಳಿದರು.

ಮದ್ರಾಸ

ಮದ್ರಾಸ ಮುಖ್ಯ ಮಂತ್ರಿ ಪ್ರಕಾಶಂರ ವಿರುದ್ಧ ಅವಿಶ್ವಾಸದ ಗೊತ್ತುವಳಿಗೆ ಸಹಿಮಾಡಿದ ೪೭ ಜನ ಅಂಧ್ರ ಸದಸ್ಯರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಅಂಧ್ರ ಪ್ರಾಂತಿಕ ಕಾಂ ಸಮಿತಿಯ ಕಾರ್ಯಕಾರಿ ಮಂಡಳದವರು ಯೋಚಿಸಿದ್ದಾರೆ. ಪ್ರಾಂತಿಕ ಕಾಂಗ್ರೆಸ ಕಾರ್ಯಸಮಿತಿಯ ಅಪ್ಪಣೆ ಪಡೆದು ಹೀಗೆ ಸಹಿ ಮಾಡಬೇಕಿತ್ತೆಂದು ಅವರ ಅಭಿಪ್ರಾಯ.

ಪಂಜಾಬ

ಪಂಜಾಬ ಸರಕಾರ ಮತ್ತು ಲೀಗಿನವರಲ್ಲಿ ಒಡಂಬಡಿಕೆಯನ್ನುಂಟುಮಾಡಲು ಕೆಲ ಮಧ್ಯಸ್ಥರು ಪ್ರಯತ್ನಿಸುತಿರುವರು. ಅ. ಭಾ. ಮಸ್ಲಿಂ ಲೀಗಿನ ಕ್ರಿಯಾಸಮಿತಿ ಸದಸ್ಯ ಖಾಜಾ ನಾಝೀಮುದ್ದೀನರು ಗವರ್ನರರನ್ನು ಕಂಡು ಒಡಂಬಡಿಕೆಯಾಗಬೇಕಾದರೆ ನಾಗರಿಕ ಸ್ವಾತಂತ್ರ್ಯದ ಮೇಲೆ ಹಾಕಿದ ನಿರ್ಬಂಧಗಳು ಹಿಂತೆಗೆದುಕೊಳ್ಳಲ್ಪಡಬೇಕೆಂದೂ ಹೇಳಿದರಂತೆ. ಪ್ರತಿಯಾಗಿ ಸರಕಾರದವರೂ ಕೆಲ ಕರಾರುಗಳನ್ನು ಹಾಕಿರುವರಂತೆ. ಲೀಗಿನ ಮೂಲ ಬೇಡಿಕೆ ಮೊದಲು ಮಾನ್ಯಮಾಡಬೇಕೆಂದೂ ಸರಕಾರದ ಕರಾರುಗಳನ್ನು ಜೇಲಿನಲ್ಲಿಯ ಧುರೀಣರಿಗೆ ತಿಳಿಸಬಹುದೆಂದೂ ಹೇಳಿದರೆಂದು ಗೊತ್ತಾಗುತ್ತದೆ.

ರಾವಳಪಿಂಡಿ ಹತ್ತರ ಸೋಮವಾರ ದಿನ ಲೀಗ ಕಿಡಿಗೇಡಿಗಳು ಒಂದು ಕಡೆಗೆ ಟ್ರಕ್ಕನ್ನು ಮತ್ತೊಂದು ಕಡೆಗೆ ಕಲ್ಲು ಗುಂಡು ಇಟ್ಟು ಫ್ರಂಟಿಯರ ಮೇಲನ್ನುರುಳಿಸುವ ಪ್ರಯತ್ನ ಮಾಡಿದರೆಂದೂ ಸಕಾಲಕ್ಕೆ ಡ್ರಾಯವರನು ಇದನ್ನು ಕಂಡುಹಿಡಿದದ್ದರಿಂದ ಅಪಘಾತ ತಪ್ಪಿತೆಂದೂ ಸಿವಿಲ್ ಮಿಲಿಟರಿ ಗ್ಯಾಜಿಟನಲ್ಲಿ ಪ್ರಸಿದ್ಧವಾಗಿದೆ.

ಲೇಖಕರಿಗೆ ಸೂಚನೆಗಳು

೧. ಕರ್ಮವೀರದಲ್ಲಿ ಪ್ರಕಟಿಸಲು ಉತ್ತಮ ಕಥೆ, ಲೇಖ, ಹರಟೆ, ಕವಿತೆಗಳಿಗೆ ಯಾವಾಗಲೂ ಸ್ವಾಗತವಿದೆ. ಇದಲ್ಲದೆ ಉತ್ತಮ ಛಾಯಾಚಿತ್ರಗಳನ್ನೂ (ಸ್ನ್ಯಾಪ್‌ಶಾಟ್) ವ್ಯಂಗ್ಯಚಿತ್ರಗಳನ್ನೂ ಸ್ವೀಕರಿಸಲಾಗುವದು.

೨. ಲೇಖಕರು ಲೇಖಗಳನ್ನು ಸ್ಫುಟವಾಗಿ ಕಾಗದದ ಒಂದೇ ಮಗ್ಗುಲಲ್ಲಿ ಬರೆದು ಕಳಿಸಬೇಕು. ತಮ್ಮ ಹೆಸರು ವಿಳಾಸಗಳನ್ನೂ ಒದಗಿಸಿರಬೇಕು. ಅನುವಾದಗಳಾಗಿದ್ದರೆ ಮೂಲವನ್ನು ಸೂಚಿಸಬೇಕು.

೩. ಅಸ್ವೀಕೃತವಾದ ಲೇಖಗಳನ್ನು ತಿರುಗಿ ಕಳಿಸಬೇಕಾದರೆ ಟಿಕೀಟು ಹಚ್ಚಿದ ವಿಳಾಸ ಬರೆದ ಕವರನ್ನು ಸಂಗಡ ಇಟ್ಟಿರಬೇಕು. ತಳಿಸಿ ಎಂಟು ವಾರಗಳೊಳಗೆ ಕರ್ಮವೀರದಲ್ಲಿ ಅದು ಪ್ರಸಿದ್ಧವಾಗದಿದ್ದರೆ ಸಾಮಾನ್ಯವಾಗಿ ಅಸ್ವೀಕೃತವೆಂದು ಗ್ರಹಿಸಬಹುದು. ಲೇಖಗಳ ಸ್ವೀಕೃತಿ ಅಸ್ವೀಕೃತಿಗಳ ಬಗ್ಗೆ ಪತ್ರವ್ಯವಹಾರವನ್ನು ಬೆಳೆಸಲಾಗುವದಿಲ್ಲ.

೪. ಸ್ವೀಕೃತವಾದ ಕಥೆ, ಲೇಖ, ಚಿತ್ರಗಳಿಗೆ ನಮ್ಮ ಸಾಮಾನ್ಯ ದರಗಳಲ್ಲಿ ಪ್ರತಿಫಲ ಕೊಡಲಾಗುವದು. ಪ್ರತಿಫಲವನ್ನು ಪ್ರಸಿದ್ಧವಾದ ಮುಂದಿನ ತಿಂಗಳಲ್ಲಿ ಮುಟ್ಟಿಸುವೆವು.

—ಸಂಪಾದಕ ಕರ್ಮವೀರ

ಮದ್ರಾಸ್ ಮಧ್ವಸಂಘದ ಮಧ್ವನವಮೀ ಮಹೋತ್ಸವ

ಜನೆವರಿ ೨೨ ರಿಂದ ೨೬ನೆಯ ದಿನಗಳವರೆಗೆ ಮದರಾಸಿನ ಪರಸುವಾಕಂದಲ್ಲಿ ಮೋಡರ್ನ ಕೆಫೆ ಪ್ರೊಪ್ರಾಯಿಟರ ಕೆ. ಸೀತಾರಾಮರಾಯರ ದಾಸಪ್ರಸಾದದಲ್ಲಿ ಅತಿ ವೈಭವದಿಂದ ನಡೆಯಿತು. ಪುರಂದರದಾಸರ ಪುಣ್ಯತಿಥಿ ದಿನ ಸಾಯಂಕಾಲ ಆರು ಗಂಟೆಗೆ ಬಲರಾಮದಾಸ ಮತ್ತು ಅವರ ಸಂಗಡದವರು ಪುರಂದರದಾಸರ ಕೀರ್ತನೆಗಳನ್ನು ಹಾಡಿದರು. ಶ್ರೀ. ಮುದ್ರಾಡಿ ಜನಾರ್ಧನಾಚಾರ್ಯ ಶಿರೋಮಣಿ ಇವರು ಪುರಂದರದಾಸರ ಜೀವನ ಚರಿತ್ರೆಯನ್ನೂ ಅವರ ಉಪದೇಶ ಸ್ಮರಣೆಯನ್ನೂ ಕುರಿತು ಉಪನ್ಯಾಸ ಮಾಡಿದರು. ಕುಂಭಕೋಣ, ತಿರುಪತಿ, ಉಡುಪಿ ಮುಂತಾದ ಕಡೆಯಿಂದ ಬಂದ ಹಲವು ವಿದ್ವಾಂಸರ ಭಾಷಣಗಳಾದವು. ಬೇಲೂರು ಕೇಶವದಾಸರ ಹರಿಕಥಾ ಕಾಲಕ್ಷೇಪವಾಯಿತು. ಮಧ್ವನವಮಿ ದಿವಸ ಮಧ್ವವಿಜಯ ಪಾರಾಯಣ ಮಹಾಪೂಜಾದಿಗಳು ನಡೆದು ಸಾಯಂಕಾಲ ನಾಲ್ಕು ಗಂಟೆಗೆ ನಿವೃತ್ತ ನ್ಯಾಯಾಧಿಪತಿಗಳಾದ ಸಿ. ಆರ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ವಿದ್ವಾಂಸರಿಗೆ ಸಂಭಾವನೆಯನ್ನು ವಿದ್ಯಾರ್ಥಿಗಳಾದ ಬಾಲಕ—ಬಾಲಕಿಯರಿಗೆ ಪಾರಿತೋಷಕ ಕೊಡಲಾಯಿತು.

ಶಾಸ್ತ್ರವಿಧಿಯಂತೆ ಗಿಡಗಳಿಗೆ ನೋವಾಗದಂತೆ ತುಳಸಿಯನ್ನು ಕೊಯ್ಯುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ೮ ಮಂದಿ ವಿದ್ಯಾರ್ಥಿಗಳು ಪಾರಿತೋಷಕವನ್ನು ಪಡೆದರು. ಮಧ್ವಸಿದ್ಧಾಂತದ ಕೆಲವು ವಿಷಯಗಳನ್ನು ಎತ್ತಿಕೊಂಡು ಉಡುಪಿ ಸೀತಾರಾಮಾಚಾರ್ಯರು ಭಾಷಣ ಮಾಡಿದರು. ಮಧ್ವಸಂಘದ ಕಾರ್ಯದರ್ಶಿಗಳು ಈ ಕಾರ್ಯಕ್ಕೆ ಇತ್ತ ಸದ್ಗೃಹಸ್ಥರ ಸಹಾಯ ಸಂಪತ್ತಿಯನ್ನು ಕುರಿತು ಪ್ರಸ್ತಾಪಿಸಿದ ಮೇಲೆ ಪಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರು ಸಭಿಕರಿಗೂ ಸಭಾಧ್ಯಕ್ಷರಿಗೂ ಕೃತಜ್ಞತೆಯನ್ನು ಸಮರ್ಪಿಸಿದರು. ಮಹೋಪಾಧ್ಯಾಯ ಕೆ. ಎಲ್. ವಿ. ಶಾಸ್ತ್ರಿಗಳು ಸಭಿಕರ ಪರವಾಗಿ ಇಲ್ಲಿಯ ಕಾರ್ಯ ಕಲಾಪಗಳ ಮತ್ತು ಅವರ ಪ್ರೋತ್ಸಾಹಕರ ಅಭಿನಂದನೆ ಮಾಡಿದರು. ಸಭಾ ಕಾರ್ಯ ಸಮಾಪ್ತಿಯಾದ ಮೇಲೆ ಶ್ರೀ ಮಧ್ವಾಚಾರ್ಯರ ಪ್ರತಿಕೃತಿಯ ಮೆರವಣಿಗೆ ಗಂಗಾಧರೇಶ್ವರ ದೇವಾಲಯಕ್ಕೆ ಪ್ರದಕ್ಷಿಣೆಯಾಗಿ ದಾಸಪ್ರಸಾದಕ್ಕೆ ಬಂದು ರಾತ್ರಿ ಪೂಜೆ ಆದ ಮೇಲೆ ನೆರೆದ ಭಕ್ತರಿಗೆಲ್ಲ ಪ್ರಸಾದ ಹಂಚಲಾಯಿತು. ಮರುದಿವಸ ವೈಕುಂಠವಾಸಿ ಶ್ರೀ ಗೋವಿಂದಾಸರ ಸ್ಮಾರಕ ಸಮಾರಾಧನೆ ನಡೆಯಿತು. ಸಾಯಂಕಾಲ ನಾಲ್ಕು ಗಂಟೆಗೆ ಶ್ರೀ ಉಡುಪಿ ಸೀತಾರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯ ಮುಂದೆ ಶ್ರೀ ಸಿ. ಆರ್. ಕೃಷ್ಣರಾಯರು ಶ್ರೀ ಮದ್ಭಾಗವತಸಾರವನ್ನು ಕುರಿತು ಭಾಷಣ ಮಾಡಿದರು. ಎಲ್. ಎಸ್. ರಾಜು ಅಡ್ವೊಕೇಟ ಬೆಂಗಳೂರು ಇವರು ಈ ಮಹೋತ್ಸವದಲ್ಲಿ ಸಹಭಾಗಿಗಳಾದವರೆಲ್ಲರನ್ನು ಅಭಿನಂದಿಸಿದರು. ಉಪಸಂಹಾರ ಭಾಷಣ ಮೊದಲಾದವು ನಡೆದ ಮೇಲೆ ವಿಶೇಷವಾದ ಭಜನೆ ಮತ್ತು ರಾತ್ರಿ ಪೂಜಾದಿಗಳು ವೈಭವದಿಂದ ಜರಗಿದವು. ೩ನೇ ತಾರೀಕಿನಲ್ಲಿ ಶ್ರೀ ಕೆ. ಸೀತಾರಾಮರಾಯರು ಬಡಬಗ್ಗರಿಗೆ ಅನ್ನದಾನ ನಡೆಸಿದರು.

ಮುಂಬಯಿ ರಾಷ್ಟ್ರೀಯ ಕನ್ನಡಶಾಲೆ

ಮುಂಬಯಿಯಲ್ಲಿಯ ರಾಷ್ಟ್ರೀಯ ಕನ್ನಡ ಶಾಲೆಯ ಸಮಾರಂಭ ಕಳೆದ ತಿಂಗಳ [illegible] ಕಮೀಟಿ ಚೇಅರಮನ್ ಕುಮಾರಿ [illegible] ಪಾಂಡವಾಲಾ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಆರ್. ವಿ. ಮೂರ್ತಿಯವರು ಪರಿಚಯಮಾಡಿಕೊಟ್ಟರು. ಒಕ್ಕಲತನ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರು ಬಹುಮಾನಗಳನ್ನು ಹಂಚಿದರು. ಕಮಲಾದೇವಿಯವರು ಸಂಸ್ಥೆಯ ಕಾರ್ಯಕಲಾಪಗಳನ್ನು ನೋಡಿ ಸಂತೋಷಪಟ್ಟು ಸಂಪೂರ್ಣ ಸಹಾಯದ ಆಶ್ವಾಸನ ಕೊಟ್ಟರು. ಸಾವಿರಾರು ಸಂಘಟಿತ ಕನ್ನಡಿಗರನ್ನು ಮತ್ತು ಮಕ್ಕಳನ್ನು ಈ ಮುಂಬಯಿಯಲ್ಲಿಯ ಒಂದು ಕನ್ನಡ ಶಾಲೆಯಲ್ಲಿ ನೋಡಿ ಸಂತೋಷವಾಯಿತೆಂದು ಮಂತ್ರಿವರ್ಯ ಮಲ್ಲನಗೌಡರು ಹೇಳಿದರು.

ರವಿವಾರ ಶ್ರೀ ಜಿ. ಎಸ್. ಕೃಷ್ಣಯ್ಯ ಕಾಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಶಾಲೆಯ ಮಕ್ಕಳು ಮಾರ್ಕಂಡೇಯನೆಂಬ ನಾಟಕವನ್ನಾಡಿ ಯಿಸಿದರು. ಕಟ್ಟಡಕ್ಕಾಗಿ ಎಲ್ಲರೂ ಪ್ರಯತ್ನಿಸಬೇಕೆಂದು ಅವರು ಬಿನ್ನವಿಸಿದರು. ಹೌಸ ಕಮೀಶನರ ಎನ್. ಬಿ. ಎಸ್. ಮೂರ್ತಿಯವರು ಎಲ್ಲ ಬಗೆಯಿಂದ ಶಾಲೆಗೆ ಸಹಾಯ ಸಲ್ಲಿಸುತಿರುವರು.

ಮೊಗವೀರ ವ್ಯವಸ್ಥಾಪಕ ಮಂಡಲಿ ಮತ್ತು ಪುಕ್ಕಟೆ ರಾತ್ರಿ ಶಾಲೆಯವರು ಮುಂಬಯಿ ಪ್ರಾಂತಿಕ ಕಾಂಗ್ರೆಸ ಸಮಿತಿ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರಿಗೆ ಬಿನ್ನವತ್ತಳೆಯನ್ನರ್ಪಿಸಿದರು. ಮೊಗವೀರ ಸ್ವೈನಿಕರು ಅಭಿವಂದನೆಗಳನ್ನರ್ಪಿಸಿದ ಬಳಿಕ ಪಾಟೀಲರು ರಾತ್ರಿ ಶಾಲೆಯನ್ನು ಸಂದರ್ಶಿಸಿದರು. ಕಳೆದ ೪೫ ವರುಷಗಳಿಂದ ಸಂಘವನ್ನು ನಡೆಸಿಕೊಂಡು ಬಂದು ಸಾವಿರಾರು ಬಡಮಕ್ಕಳಿಗೆ ಪುಕ್ಕಟೆ ಶಿಕ್ಷಣ ಕೊಡುತಿರುವದನ್ನು ಪಾಟೀಲರು ಪ್ರಶಂಸಿಸಿ ತಮ್ಮ ಸಂಪೂರ್ಣ ಸಹಾಯದ ಆಶ್ವಾಸನ ಕೊಟ್ಟರು. ಹೆಚ್ಚು ಸಹಾಯ ಸಹಾನುಭೂತಿ ಸಿಕ್ಕುವಂತೆ ಜೋರಾದ ಪ್ರಚಾರ ಮಾಡಬೇಕೆಂದೂ ಪಾಟೀಲರು ಸಲಹೆ ಇತ್ತರು.

ಅಸ್ಥಾನ ವಿದ್ವಾನ್ ಗಾನ ಕಲಾನಿಧಿ ಬಿ. ಎಸ್. ರಾಜ ಅಯ್ಯಂಗಾರರು ಮುಂಬಯಿ ಕರ್ನಾಟಕ ಸಂಘದ ಆಶ್ರಯದಲ್ಲಿ ಪೊದ್ದಾರ ಕಾಲೇಜಿನಲ್ಲಿ ೧೫ನೇ ತಾರೀಕು ಸಂಗೀತ ಕಚೇರಿಯನ್ನು ನಡೆಸಿದರು.

ಸಾಂಗಲಿ ಸಂಸ್ಥಾನದ ಶಿಕ್ಷಣ ಮಂತ್ರಿಗಳು ಶಾಲಾ ಶಾಖೆಯ ಕಾಗದ ಪತ್ರಗಳನ್ನು ಕನ್ನಡದಲ್ಲಿಡಬೇಕೆಂದು ವಿಧಿಸಿದ್ದಾರೆ.

★ ಬಡವನ ಮನೆಗೆ ಭಾಗ್ಯಲಕ್ಷ್ಮಿ ★

ಒಗ್ಗಟ್ಟಿನ ಪ್ರತಿಫಲ ! ಪರಸ್ಪರ ಸಹಾಯದ ಹಿರಿಮೆ !! ನಿತ್ಯದ ಸೌಖ್ಯದ ಲಾಭ !!!

6—8—0 ಗಳನ್ನು ಕೊಟ್ಟು ನಮ್ಮ ಪರಸ್ಪರ ಹಂಚಿಕೆಯ ಸ್ಕೀಮಿಗೆ ಮೆಂಬರಾದರೆ 17470—0—0 ಕಾಲಾನುಕ್ರಮವಾಗಿ ಪ್ರತಿಫಲ ಪಡೆಯಬಲ್ಲಿರಿ.

ಇದು ಲಾಟ್ರಿಯಲ್ಲ, ಸ್ಪರ್ಧೆಯಲ್ಲ, ಅದೃಷ್ಟ ಪರೀಕ್ಷೆಯಲ್ಲ, ಫಾರಂ ಹಂಚುವ ಕ್ರಮವಿಲ್ಲ, ಏನೊಂದೂ ಕೆಲಸವಿಲ್ಲ. ಕೇವಲ 6—8—0 ಮನಿಯಾರ್ಡರು ಮೂಲಕ ನಮ್ಮಲ್ಲಿ ಕಳುಹಿಸಿ ಮನಿಯಾರ್ಡರ ಮಾಡಿದರೆ ರಶೀದಿ ನಂಬ್ರು ಮತ್ತು ನಿಮ್ಮ ಪೂರ್ತಾ ವಿಳಾಸ ಸಹ ನಮ್ಮಲ್ಲಿಗೆ ಕಳುಹಿಸಿದರೆ ನಾವು 17470—0—0 ನಿಮಗೆ ಕಾಲಾನುಕ್ರಮವಾಗಿ ದೊರೆಯುವಂತೆ ಏರ್ಪಡಿಸುವೆವು. ಒಮ್ಮೆ ಮೆಂಬರಾಗಿ ಸೇರಿದರೆ ನಿಮಗೆ ವೇದ್ಯವಾಗುವುದು.

ವಿವರಗಳಿಗೆ 0—3—0 ಪೋಸ್ಟೇಜು ಸ್ಟಾಂಪಿನೊಂದಿಗೆ ಬರೆಯಿರಿ:

ಅಧಿಕೃತ ಪ್ರತಿನಿಧಿಗಳು:—

ಎಸ್. ಪಿ. ವಿ. ಜೋಯಿಸ್, ಸ್ಕೀಮ್ ಸ್ಪೆಷಲಿಸ್ಟ್

ಶೃಂಗೇರಿ — ಕಡೂರು (ಮೈಸೂರು)

ಕರ್ನಾಟಕ

ಬೆಳಗಾವಿ ಜಿಲ್ಲಾ ರೈತಪರಿಷತ್ತು

ಮಾನ್ಯ ಮುರಾರಜಿಯವರಿಂದ ಪ್ರಾರಂಭ

ಬೆಳಗಾವಿ ಗೊತ್ತಾಗತಂತೆ ಬೆಳಗಾವಿ ಜಿಲ್ಲಾ ರೈತ ಪರಿಷತ್ತು ಗೋಕಾಕದಲ್ಲಿ ೧೬ನೇ ತಾರೀಕು ಪ್ರಾರಂಭಗೊಂಡ ಸಾಂಗವಾಯಿತು. ಜಿಲ್ಲೆಯಿಂದ ಮತ್ತು ಇತರ ಭಾಗಗಳಿಂದ ಹತ್ತುಸಾವಿರಕ್ಕಿಂತ ಹೆಚ್ಚು ಜನ ಸಮ್ಮಿಲಿತರಾಗಿದ್ದರು. ಮುಂಬಯಿ ಸರಕಾರದ ಗೃಹಮಂತ್ರಿ ಮಾನ್ಯ ಮುರಾರಜಿಯವರು ಪರಿಷತ್ತನ್ನು ಉದ್ಘಾಟಿಸುತ್ತ ಜನಸಾಮಾನ್ಯರ ಸೇವೆಯೇ ಕಾಂಗ್ರೆಸ್ಸಿನ ಗುರಿಯಾಗಿರಬೇಕು. ವ್ಯಯಕ್ತಿಕ ಸ್ವಾರ್ಥ ಸಾಧನೆ ಇಚ್ಛಿಸುವ ಪಕ್ಷೋಪಪಕ್ಷಗಳ ಬಡಿದಾಟವನ್ನು ನಡೆಸಬಾರದು. ಒಂದೇ ಸಂಸ್ಥೆಯ ಆಶ್ರಯದಲ್ಲಿ ಒಂದೇ ಕೆಲಸಕ್ಕಾಗಿ ಎರಡು ಸಂಘಗಳನ್ನು ಸ್ಥಾಪಿಸುವದು ಕಾಂಗ್ರೆಸ್ಸಿನ ಚೆನ್ನಲ್ಲಿ ಇರಿಸಂತೆಯಸ್ಯ ಎಂದು ಹೇಳಿದರು. ಬೆಳಗಾವಿಯ ಕಾಂಗ್ರೆಸ್ಸಿಗರಲ್ಲಿ ಇಬ್ಬಣವಾಗಿದ್ದು ಅವರಲ್ಲಿ ಐಕ್ಯವಾಗುವ ವರೆಗೆ ತಾವು ಈ ಪರಿಷತ್ತನ್ನು ಪ್ರಾರಂಭಿಸಲು ಬರುತ್ತಿದ್ದಿಲ್ಲೆಂದು ಹೇಳಿದ್ದು ಆದರೀಗ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರು ಎರಡು ಬಣಗಳಲ್ಲಿ ಐಕ್ಯವಾಗಿದೆಂದು ಆಶ್ವಾಸನ ಕೊಟ್ಟಿದ್ದರಿಂದ ತಾವಿಲ್ಲಿಗೆ ಬಂದುದಾಗಿ ಹೇಳಿದರು. ಕಾಂಗ್ರೆಸ್ಸಿನ ನೇತೃತ್ವದಲ್ಲಿಯೇ ರೈತ ಸಂಘವನ್ನು ಸ್ಥಾಪಿಸಿಕೊಂಡು ರೈತರ ಸೇವೆ ಮಾಡಬೇಕೆಂದೂ ಅವರು ಹೇಳಿದರು. ಅನಂತರ ಬೆಳಗಾವಿ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಶ್ರೀ ಚನ್ನಪ್ಪ ವಾಲಿಯವರು ತಮಗೆ ರೈತಸಂಘವನ್ನೇಕೆ ಸ್ಥಾಪಿಸಬೇಕಾಯಿತೆಂಬುದನ್ನು ವಿವರಿಸುತ್ತ ಕಳೆದ ಏಳು ತಿಂಗಳಲ್ಲಿ ರೈತರ ಸೇವೆ ವಿಶೇಷ ಪರಿಶ್ರಮದಿಂದ ಮಾಡಿದುದಾಗಿ ಹೇಳಿದರು. ಕಾಂಗ್ರೆಸ್ಸಿನ ಪ್ರತಿಷ್ಠೆಗೆ ಸ್ವಲ್ಪೂ ಕುಂದು ಬಾರದಂತೆ ನೋಡಿಕೊಳ್ಳುವದಾಗಿಯೂ ಹೇಳಿ ಬಿಟ್ಟರಸ್ಸು ಹೊರ ಹೊಡುವ ಮತ್ತೊಂದು ಸಂಗ್ರಾಮ ಪ್ರಾರಂಭವಾಗದೆ ನಮ್ಮ ರುಂತಗಳನ್ನು ಕೊಡುವ ಸಮರ್ಪಿಸಲು ಸಿದ್ಧರಾಗಿರುವುದಾಗಿಯೂ ಹೇಳಿದರು.

ಅನಂತರ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ಸಿನ ನೇತೃತ್ವದಲ್ಲಿಯೇ ರೈತ ಸೇವೆ ನಡೆಸಬೇಕೆಂದು ಒತ್ತಿ ಹೇಳಿದರು. ಕರ್ನಾಟಕದ ಏಕೀಕರಣದ ಬೇಡಿಕೆ, ದಕ್ಷಿಣ ಸಂಸ್ಥಾನಗಳ ಒಕ್ಕೂಟ ವಿರೋಧ, ಆಹಾರ ಧಾನ್ಯಗಳನ್ನು ಬಿಟ್ಟು ಉಳಿದವುಗಳ ಮೇಲಿನ ನಿಯಂತ್ರಣ ಕ್ರಮೇಣ ಕಡಿಮೆ ಮಾಡುವದು ರೈತರಿಗೆ ಅವಶ್ಯವಾದ ಯಂತ್ರೋಪಕರಣ, ಬೀಜ ಮುಂತಾದವುಗಳನ್ನೊದಗಿಸುವುದು, ಬರಗಾಲ ನಿವಾರಣೆಗೆ ಯೋಗ್ಯ ಉಪಾಯ ಕೈಕೊಳ್ಳುವುದು ಇವೆ ಮೊದಲಾದ ಗೊತ್ತುವಳಿಗಳು ಪಂಪಸ್ತಿನಲ್ಲಿ ಸ್ವೀಕೃತವಾದುವು. ಕೊನೆಯಲ್ಲಿ ಶ್ರೀ ನಾನಾ ಪಾಟೀಲರ ಭಾಷಣವಾಗಿ ಅಧಾರಮನ್ನಣೆಯೊಂದಿಗೆ ಪರಿಷತ್ತು ರಾತ್ರಿ ೯ ಗಂಟೆಗೆ ಕೊನೆಗಂಡಿತು.

ಸನದಿ ಪರಿಷತ್ತು

ಇದಕ್ಕೂ ಮೊದಲು ಅಂದರೆ ಮಧ್ಯಾಹ್ನ ೩॥ ಗಂಟೆಗೆ ಡ್ಯಾ. ಮಾನೆಯವರ ಅಧ್ಯಕ್ಷತೆಯಲ್ಲಿ ಬೆಳಗಾವಿ ಜಿಲ್ಲಾ ಸನದಿಯ ಪರಿಷತ್ತು ನಡೆಯಿತು. ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ನೂರಾರು ಸನದಿಯವರು ತಮ್ಮ ವೃತ್ತಿಸೂಚಕವಾದ ಖಡ್ಗ ಸಹಿತ ಬಂದಿದ್ದರು. ಶ್ರೀ ಪದ್ಮಾವತಿ ದೇವಿ ಅಂಗಡಿಯವರು ಪರಿಷತ್ತನ್ನು ಪ್ರಾರಂಭಿಸುತ್ತ ಗ್ರಾಮರಕ್ಷಕರಾದ ಸನದಿಯರ ಸನದುಗಳನ್ನು ಇನಾಮುಗಳಂತೆ ತಿಳಿದು ವಂಶಪರಂಪರೆಯಿಂದ ಅದನ್ನು ನಡೆಸಿಕೊಂಡು ಹೋಗಬೇಕೆಂದು ಹೇಳಿ ಸನದಿ ಶ್ರೇಷ್ಠನಾದ ಸಂಗೊಳ್ಳಿ ರಾಯಣ್ಣನ ಆದರ್ಶವನ್ನು ಪಾಲಿಸಬೇಕೆಂದು ಸನದಿಯರಿಗೆ ಹೇಳಿದರು. ಅಧ್ಯಕ್ಷರಾದ ಡ್ಯಾ. ಮಾನೆಯವರು ಹಳ್ಳಿಗಳ ರಕ್ಷಕರಾದ ಸನದಿಯರು ಹಳ್ಳಿಗಳ ಹಿಂದಿನ ಕಾಲದಿಂದಲೂ ಇದ್ದಾರೆ. ಆದರೆ ಅವರ ಮೇಲೆ ಹೇರಲಾದ ವಂಶಪಾರಂಪರ್ಯ ಗುಲಾಮಗಿರಿ ಹೋಗಿ ಅವರಿಗೆ ಕನಿಷ್ಠ ೩೦ ರೂಪಾಯಿ ಸಂಬಳ ಸಿಕ್ಕಬೇಕು. ಎಂದು ಸ್ಪಷ್ಟವಾಗಿ ಹೇಳಿ

ಧಾರವಾಡ

ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ನೌಕರ ವರ್ಗದವರು ತಮಗೆ ೧೯೪೦ ರಿಂದ ಸರಕಾರೀ ಪ್ರಮಾಣದಂತೆ ತುಟ್ಟಿ ಭತ್ತೆ ಹಾಗು ೧-೮-೪೬ ರಿಂದ ತಾತ್ಪೂರ್ತಿಕ ಹೆಚ್ಚಿನ ಸಂಬಳ ಮತ್ತು ಬೋನಸ್ಸು ಕೊಡಬೇಕೆಂದು ಬೇಡಿಕೊಂಡಿದ್ದರು ತೀವ್ರದಲ್ಲಿಯೆ ತಮ್ಮ ಈ ಬೇಡಿಕೆಗಳ ವಿಚಾರವಾಗದಿದ್ದರೆ ಇದೇ ೨೬ ರಿಂದ ಸಂಪು ಪ್ರಾರಂಭಿಸುವದಾಗಿ ಜಿ. ಬೋ. ಅಧ್ಯಕ್ಷರಿಗೆ ನೋಟೀಸು ಕೊಟ್ಟಿರ ಪರಾಗಿ ತಿಳಿಯುತ್ತದೆ.

ರೋಣಕ್ಕೆ ೬-೭ ದಿನಗಳ ಹಿಂದ ಸುಮಾರು ೧೧೦೦ ಮಣ ಬೆಲ್ಲ ಬಂದಿತು ಊರಲ್ಲಿ ಜನರಿಗೆ ಸರಿಯಾಗಿ ಹಂಚದೆ ಇದ್ದ ಮೂಲಕ ಸರಿಯಾಗಿ ಹಂಚಬೇಕೆಂಬ ಸಾರ್ವಜನಿಕ ಅರ್ಜಿಯೊಂದನ್ನು ಮಾಮಲೇದಾರ ಸಾಹೇಬರ ಕಡೆಗೆ ಕಾಂಗ್ರೆಸ ಕಾರ್ಯಕರ್ತರಾದ ಶ್ರೀ ಗುರುಪಾದಪ್ಪಾ ಸಂತೋಜಿಯವರು ತೆಗೆದುಕೊಂಡು ಹೋಗಿದ್ದರು. ಅದರೆ ಮಾಮಲೇದಾರರು ಸಿಟ್ಟಿಗೆದ್ದು ಮನೆಯಿಂದ ಹೊರಗೆ ಹಾಕಿಸುತ್ತೇನೆಂದು ಗದರಿಸಿದರು. ಅಧಿಕಾರಿಗಳ ಸ್ವೇಚ್ಛಾಚಾರಕ್ಕೆ ಹಳಹಳಿಸಿ ಸಂತೋಜಿಯವರು ೧೬ ನೇ ತಾರೀಕಿನಿಂದ ೫ ದಿನ ಉಪವಾಸ ಪ್ರಾರಂಭಿಸಿರುವರು.

ಧಾರವಾಡ ಜಿಲ್ಲಾ ಲೋಕಲ್‌ಬೋರ್ಡಿನ ಅಧ್ಯಕ್ಷರಾದ ಶ್ರೀ ಬಿ. ಆರ್. ತಂಬಾಕದರವರು ಈ ಸಲದ ಚುನಾವಣೆಯಲ್ಲಿ ಪರಾಭವ ಹೊಂದಿ, ಜಯಶೀಲರಾದವರ ಪಕ್ಷಕ್ಕೆ ಅರಿಸಿ ಬರಲು ಒಪ್ಪಿ ಅವಿಧೇಯತೆಯಿಂದ ಸಿವಿಲ್ ಬೋರ್ಡಿಗೆ ಉತ್ತರ ಕೊಟ್ಟದ್ದರಿಂದ ಅವರನ್ನು ಕಾಂಗ್ರೆಸ ಪಕ್ಷದಲ್ಲಿ ಸೇರಿಸಿಕೊಳ್ಳಬಾರದು ಅವರ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳಬೇಕೆಂದು ಧಾರವಾಡ ಜಿಲ್ಲಾ ಸಿವಿಲ್ ಬೋರ್ಡಿನವರು ನಿರ್ಧರಿಸಿದ್ದಾರೆ.

ಬೆಳಗಾವಿ

ಮಾರ್ಚ ೯ನೇ ತಾರೀಕಿನಿಂದ ೧೧ನೇ ತಾರೀಕಿನ ವರೆಗೆ ಹುರೋಗಾಮಿ ಪಕ್ಷದ ಧುರೀಣರಾದ ಸರದಾರ ಶಾರ್ದೂಲಸಿಂಗ ಕವೀಶ್ವರ, ಕರ್ನಲ್ ಇಶಾರ ಕಾದ್ರಿ, ಶೀಲಭದ್ರಯಾಜಿಯವರು ಕರ್ನಾಟಕದಲ್ಲಿ ಸಂಚರಿಸುವರು. ಅವರ ಕಾರ್ಯಕ್ರಮ ಗೊತ್ತುಪಡಿಸಿಕೊಳ್ಳಬಯಸುವವರು ರಾ. ಅ. ಮುಂಡಗಿ ಸೆಕ್ರೆಟರಿ ಕರ್ನಾಟಕ ಪ್ರಾಂತಿಕ ಮುರೋಗಾಮಿ ಪಕ್ಷ ಅನಂತಶಯನ ಗಲ್ಲಿ ಬೆಳಗಾವಿ ಇವರಿಗೆ ಬರೆಯಬೇಕು.

ಕನ್ನಡ ಸಂಸ್ಥಾನ

ಪಂಢರಪುರದ ವಿಠ್ಠಲ ಮಂದಿರದಲ್ಲಿ ಹರಿಜನರಿಗೆ ಪ್ರವೇಶ ದೊರಕಿಸಬೇಕೆಂದು ಸಾನೆ ಗ.ರೂಜಿಯವರು ಜಿ. ಎಂ ಉಪವಾಸವನ್ನು ಹೂಡಿದ್ದಾರಷ್ಟೆ. ಅದರಂತೆ ದಕ್ಷಿಣ ಸಂಸ್ಥಾನದಲ್ಲಿ ಸಂಚರಿಸುತ್ತಿರುವ ದಕ್ಷಿಣ ಸಂಸ್ಥಾನದಲ್ಲಿ ಸಂಚರಿಸುತ್ತಿರುವ ಶ್ರೀ ಸಾನೆಯವರು ... ಆ ಮಂದಿರದಲ್ಲಿ ಹರಿಜನರಿಗೆ ಪ್ರವೇಶಸಿಕ್ಕದಿದ್ದರೆ ತಾವು ಆಮರಣ ಉಪವಾಸ ಕೈಕೊಳ್ಳುವುದಾಗಿ ಶ್ರೀ ಸಾನೆಯವರು ನಿರ್ಧರಿಸಿದ್ದಾರೆ.

ದರು. ಸನದುಗಳನ್ನು ಇನಾಮುಗಳೆಂದು ತಿಳಿಯಬೇಕು ಪೋಲಿಸರಿಗೆ ಹೆಚ್ಚಿಸಬೇಕು ಮುಂತಾದ ಗೊತ್ತುವಳಿಗಳು ಸ್ವೀಕೃತವಾದವು. ಶ್ರೀ ವೀರನಗೌಡ ಪಾಟೀಲ, ನಿಜಲಿಂಗಪ್ಪ ಮತ್ತು ನೇಸ್ವಿಯವರ ಭಾಷಣಗಳಾಗಿ ಪರಿಷತ್ತು ಕೊನೆಗೊಂಡಿತು. ವಿವಿಧೋದ್ದೇಶ ಸಹಕಾರಿ ಸಂಘಗಳ ಪರಿಷತ್ತು ಉಪಮಂತ್ರಿ ಶ್ರೀ ಕೆ. ಎಫ್. ಪಾಟೀಲರ ಅಧ್ಯಕ್ಷತೆಯಲ್ಲಿ ನಗರದಲ್ಲಿ ನಡೆಯಿತು. ಮಾನ್ಯ ಕಂದಾಯಮಂತ್ರಿ ಮುರಾರಜಿಯವರು ಅದರ ಉದ್ಘಾಟನ ಮಾಡಿ ಸಂಘಗಳ ಉದ್ದೇಶದಂತೆ ನಡೆವ ಜನರ ಅವಶ್ಯಕತೆ ಇದೆ ಸಂಘದ ಹಣ ತಮ್ಮದೆಂದು ವ್ಯವಹರಿಸಬಾರದೆಂದು ಸ್ಪಷ್ಟವಾಗಿ ಹೇಳಿದರು.

ಬಳ್ಳಾರಿ ಶ್ರೀ ಜೋಳದರಾಶಿ ದೊಡ್ಡನಗೌಡ ಅಧ್ಯಕ್ಷತೆಯಲ್ಲಿ ಲಾವಣಿಕಾರರ ಪರಿಷತ್ತು ನಡೆಯಿತು. ಉಪಮಂತ್ರಿ ಶ್ರೀ ಕೆ. ಎಫ್. ಪಾಟೀಲರು ಅದನ್ನು ಪ್ರಾರಂಭಿಸಿದರು.

ಬಳ್ಳಾರಿ

ಬಳ್ಳಾರಿ ಭಾಗದಿಂದ ಮದ್ರಾಸ ಶಾಸನ ಸಭೆಯ ಸದಸ್ಯರಾಗಿದ್ದ ಅಬ್ದುಲ್ ರಾಶೀಧರ ನಿಧನದಿಂದ ತೆರವಾದ ಸ್ಥಳದ ಚುನಾವಣೆಗೆ ಮುಸ್ಲಿಂ ಪ್ರಾಂತೀಯ ಮುಸ್ಲಿಂಲೀಗಿನವರು ಶ್ರೀ ಮಹಮ್ಮದ ಇಸ್ಮಾಯಿಲ್‌ರನ್ನು ಆರಿಸಿದ್ದಾರೆ ಪ್ರರಾಷ್ಟ್ರಕ್ಕಿರದಾಕ ಸಾಹೇಬರು ಅವರನ್ನು ವಿರೋಧಿಸುವರು. ಇವರು ಜಿಲ್ಲಾ ಮುಸ್ಲಿಂಲೀಗಿನ ಅಧ್ಯಕ್ಷರಿದ್ದು ಜಿಲ್ಲಾ ಶಾಖಾ ಸಂಘಗಳ ಸಭೆಯಲ್ಲಿ ರಜಾಕರ ಹುರಿಯಾಳನ ಪರ ಠರಾವು ಪಾಸಾಯಿತು. ಈ ಚುನಾವಣೆ ಮಾರ್ಚ ೧೦ ಕ್ಕೆ ಜರಗುವದು.

ಹೊಸಪೇಟೆ ಮುನಸಿಪಲ್ ಹಾಯಸ್ಕೂಲಿನ ರಜತ ಮಹೋತ್ಸವ ದಿನಾಂಕ ೨೭ ಕ್ಕೆ ಜರಗುವದು ಶ್ರೀ ಶಿವರಾವು ಕಾರಂತರು ಈ ಮಹೋತ್ಸವದ ಉದ್ಘಾಟನ ಮಾಡುವರು. ೨೮-೨-೪೭ ರಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮ ಜರಗುವವು ತಾ. ೨೭—೨೮—೨೬ ಕ್ಕೆ ವಿವಿಧ ಪಂದ್ಯಾಟಗಳು ಜರಗುವವು.

ಉತ್ತರ ಕನ್ನಡ

ಶ್ರೀ ಮಾರಿನ ಶುಕ್ರೆಯವರ ಅಧ್ಯಕ್ಷತೆಯಲ್ಲಿ ಕಾರವಾರ ತಾಲೂಕ ಪರಿಷತ್ತು ಶಿರಾಲಿಯಲ್ಲಿ ೯ನೇ ತಾರೀಕು ಜರುಗಿತು. ಕಾಂಗ್ರೆಸ್ ಧೋರಣೆಯ ಮೇರೆಗೆ ಸ್ಥಾಪಿತವಾದ ಜಿಲ್ಲಾ ರೈತರ ಸಂಘಕ್ಕೆ ಮನ್ನಣೆಕೊಡುವ ಹಾಗು ಸಾಲಪರಿಹಾರ ಕಾಯಿದೆ ಸಾಗುವಳಿ ಕಾಯದೆಗಳಲ್ಲಿ ಇನ್ನೂ ತಿದ್ದುಪಡಿಯಾಗಿ ರೈತರಿಗೆ ಹೆಚ್ಚು ಲಾಭ ದೊರೆಯಬೇಕೆಂಬಾಶಯದ ಗೊತ್ತುವಳಿಗಳಾದವು.

ಅಂತರ್‌ ರಾಷ್ಟ್ರೀಯ

(೬ ನೇ ಪುಟದಿಂದ)

ಆ ಮೇಲೆ ಸಾಮ್ರಾಜ್ಯವಾದಿಗಳ ತಿರುಮಂತ್ರವಾದ ಭೇದನೀತಿಯನ್ನು ಪ್ರಯೋಗಿಸಲು ಅವರು ಉದ್ಯುಕ್ತರಾಗಿದ್ದಾರೆ. ಇಂಡೋಚೀಣಿಯರಿನ್ನೂ ಶಕ್ತಿ ಮೀರಿ ಹೋರಾಡುತಿದ್ದಾರೆ. ಯುಕ್ತ ರಾಷ್ಟ್ರ ಸಂಸ್ಥೆಗೆ ಅರ್ಜಿ ಮಾಡುವೆನೆಂದು ಹೋಚಿ ಮಿನ್ನರು ಹೇಳಿದ್ದಕ್ಕೆ ಗಹಗಹಿಸಿದರು ಫ್ರೆಂಚರು: "ವೀಟನಾಮು ಸರಕಾರಕ್ಕೆ ಯುಕ್ತ ರಾಷ್ಟ್ರ ಮನ್ನಣೆ ಕೊಟ್ಟಿಲ್ಲ. ಹೇಗೆ ಬರುವರೋ ನೋಡೋಣ!"

ಫ್ರಾನ್ಸಿನಲ್ಲಿ ಬಿಕ್ಕಟ್ಟು

ಅದರ ಫ್ರೆಂಚರು ಐಕ್ಯದ ಉತ್ತಮ ಆದರ್ಶವೇನೂ ಅಲ್ಲ ಅವರ ಅಂತರಿಕ ಪರಿಸ್ಥಿತಿ ಈಗಲೂ ಸಿಡುಬಿನ ತಿಸುತಿದೆ. ಕಲ್ಪನಾತೀತ ಕಳ್ಳಪೇಟೆ, ಜೀವನ ನಿರ್ವಹದ ಆಕಾಶ ಗಮನದಿಂದ ಜನತೆ ಜರ್ಜರಿತವಾಗಿದೆ. ಮೊನ್ನೆ ಮೊನ್ನೆ ಸರಕಾರಿ ನೌಕರರು ಹೆಚ್ಚು ಸಂಬಳಕ್ಕಾಗಿ ಪ್ರಚಂಡ ಪ್ರದರ್ಶನಗಳನ್ನು ನಡೆಸಿದರು. ಈ ಸಂಧಿಯಲ್ಲಿ ಬಿಗಟ್ಟು ಶಿಸ್ತುಗಳನ್ನು ಕೋರದಿದ್ದರೆ ಪರಿಸ್ಥಿತಿ ಅಧೋಗತಿಗೆ ಹೋಗುವವೆಂದು ಮಂತ್ರಿಗಳು ಬಹಿರಂಗವಾಗಿ ಸಾರಿದ್ದಾರೆ. ಚಿಕ್ಕ ಪಕ್ಷದ ಅಂತಿಕರನ್ನ ಕೆಲಸ ಮಾಡುವ ಹಿರಿಪಕ್ಷದ ಮಂತ್ರಿಗಳ ನಿಷ್ಠೆ ಸ್ಥಿರವಾಗಿ ನಿಲ್ಲುವದೆಂದು ನಂಬಲೆಡೆಯಿಲ್ಲ. ಇಂಗ್ಲಂಡಿನೊಡನೆ ೫೦ ವರ್ಷದ ಒಪ್ಪಂದ ಮಾಡಿಕೊಳ್ಳುವ ವಿಚಾರ ಕಮ್ಯುನಿಸ್ಟರಿಗೆ ರುಚಿಕಟ್ಟಾಗಿಲ್ಲ. ಅಲ್ಲದೆ ಕೂಲಿಕಾರ ನೌಕರರ ಬೇಡಿಕೆಗಳಿಗೆ ಬೆಂಬಲವೀಯುವದು ಅವರ ಕರ್ತವ್ಯವೆಂದು ಪರಿಗಣಿಸಲಾಗಿದೆ. ಈ ಪ್ರಕಾರ ಫ್ರೆಂಚ ಸರಕಾರದಲ್ಲಿ ಬೇಗನೆ ಹೊಸ ಬಿಕ್ಕಟ್ಟು ಎದ್ದರೆ ಆಶ್ಚರ್ಯವಿಲ್ಲ.

ಯುಕ್ತರಾಷ್ಟ್ರಕ್ಕೆ ಪಾಲಿಸ್ತಾನ ಸಮಸ್ಯೆ

ಪಾಲಿಸ್ತಾನದ ಭವಿತವ್ಯವನ್ನು ಕುರಿತು ಬ್ರಿಟಿಶ ಸರಕಾರ ರಚಿಸಿದ ಯೋಜನೆಗೆ ಅರಬರೂ ಸಮ್ಮತಿಸಲಿಲ್ಲ, ಯಹೂದ್ಯರೂ ಒಪ್ಪಗುಟ್ಟಲಿಲ್ಲ. ಆ ಯೋಜನೆಯೇನಿತ್ತೆಂಬುದಿನ್ನೂ ಗುಪ್ತವಾಗಿಯೆ ಇದೆ. ವಿಭಜನೆ ಅವರ ನೇಕಟ್ಟಾಗಿತ್ತೆಂದು ಕೆಲವರು, ಅಲ್ಲವೆಂದು ಕೆಲವರು ಹೇಳುತ್ತಾರೆ. ಹೇಗೆ ಇದ್ದರೂ ಅದಕ್ಕೆ ಇಬ್ಬರೂ ಒಪ್ಪಲಿಲ್ಲವೆಂದಾದ ಬಳಿಕ ಈ ಸಮಸ್ಯೆಯನ್ನು ಬಿಡಿಸಲು ಯುಕ್ತರಾಷ್ಟ್ರ ಸಂಸ್ಥೆಗೊಪ್ಪಿಸಲಾಗುವದೆಂದು ವಿದೇಶ ಮಂತ್ರಿ ಬೆವಿನ್ನರು ಪ್ರಕಟಿಸಿದ್ದಾರೆ. ಪೂರೈಸಲು ಸಾಧ್ಯವಿಲ್ಲದ ವಾಗ್ದಾನಗಳನ್ನು ಯಹೂದ್ಯರಿಗೆ ಕೊಟ್ಟು ಆ ಮೇಲೆ ಹಿಂತೆಗೆದು ಬ್ರಿಟನ್ನು ಪಾಲಿಸ್ತಾನದಲ್ಲಿ ಉಂಟುಮಾಡಿದ ಗೊಂದಲಗೇರಿಯನ್ನು ಬಳಿಯಲು ಯುಕ್ತರಾಷ್ಟ್ರ ಬರಬೇಕು. ಆದಾಗ ಅಂತರ್‌ರಾಷ್ಟ್ರೀಯ ಪ್ರಭುತ್ವ ಲಾಲಸೆಯ ಎಳೆದಾಟದ ಪಣವಾಗುವದು. ಅಮೇರಿಕೆಯ ಡಾಲರ ಸಾಮ್ರಾಜ್ಯದ ಬೆಂಬಲದಲ್ಲಿ ಯಹೂದ್ಯರು ಗೆಲುವಿನ ಆಶೆ ಹಿಡಿದಿದ್ದಾರೆ. ಅರಬರಿಗೆ ಏಶಿಯಾದ ಬೆಂಬಲವುಂಟೆಂದು ನಿಶ್ಚಯವಾಗಿ ನಂಬಬಹುದು. ಆ ಯುಕ್ತರಾಷ್ಟ್ರ ತಮ್ಮ ವಿರುದ್ಧ ತೀರ್ಪು ಕೊಟ್ಟರೆ ತಾವು ಹೋರಾಡಲು ಸಿದ್ಧರೆಂದು ಅರಬರು ಎಚ್ಚರಿಕೆಯಿತ್ತಿದ್ದಾರೆ.

ಚೀನೀ ಪರಿಸ್ಥಿತಿ

ಚಿಯಾಂಗ ಕೈ-ಶೇಕರು ಈಚೆಗೆ ಕಮ್ಯುನಿಸ್ಟರ ವಿರುದ್ಧ ಗಳಿಸಿದ ವಿಜಯಗಳಲ್ಲಿ, ಕಮ್ಯುನಿಸ್ಟ ಅಷ್ಟಮ ಸೈನ್ಯದ ಸನ್ನಿಧಿ ಕೇಂದ್ರವೂ ಶಾಂಟುಂಗ್ ಪ್ರಾಂತದ ರಾಜಧಾನಿಯೂ ಆದ ಲಿನಯಿ ನಗರದ ಆಕ್ರಮಣ ಮಹತ್ವದ್ದು. ಈ ವಿಜಯವನ್ನು ಉಪಯೋಗಿಸಿ ಚಿಯಾಂಗರು ಇನ್ನೆಷ್ಟು ಮುಂದೊತ್ತಬಲ್ಲರೋ ಹೇಳಲಾಗಲ್ಲ. ಅತ್ಯಂತ ತೀಕ್ಷ್ಣವಾದ ಹಣಕಾಸಿನ ಬಿಕ್ಕಟ್ಟು ಚೀನವನ್ನಾವರಿಸಿದೆ. ಚೀನಿ ಡಾಲರ ನಾಣ್ಯದ ಬೆಲೆ ಸರಕಾರಿ ವಿನಿಮಯ ದರಕ್ಕಿಂತ ತೀವ್ರ ಬಿದ್ದು ಹೋದುದರಿಂದ ಒಂದು ಅಮೇರಿಕನ್ ಡಾಲರಿಗೆ ೧೨೦೦೦ ಚೀನೀ ಡಾಲರಗಳೆಂದು ಸರಕಾರನೇ ಒಪ್ಪಬೇಕಾಯಿತು. ಅಂದರೆ ಹಿಂದಿನ ದರಕ್ಕಿಂತ ಅರ್ಧಕ್ಕೂ ಕಡಿಮೆಯಾಯಿತು. ಅತ್ಯಂತ ತೀಕ್ಷ್ಣ ನಿಯಂತ್ರಣಗಳನ್ನು ಹೇರುವ ಸಿದ್ಧತೆ ನಡೆದಿವೆ. ಹೀಗಿದ್ದರೂ ವಿಜಯಿ ಚಿಯಾಂಗ್ ಪಕ್ಷದವರ ತಲೆಗೇರಿದಂತೆ ತೋರುವದು. ಬಲುವೆಯೊಂದೇ ಕಮ್ಯುನಿಸ್ಟ ಸಮಸ್ಯೆಯ ತೀರ್ಮಾನದ ಉಪಾಯವೆಂದು ಅವರೆಲ್ಲ ಬಲ್ಲ ಹೇಳಿದ ಅಮೇರಿಕೆ ಆಯುಧಗಳನ್ನು ಚಿಯಾಂಗರಿಗೆ ಮಾರುವದನ್ನು ನಿಲ್ಲಿಸಿ ಈ ತೀರ್ಮಾನವನ್ನು ವಿಲಂಬಿಸುತ್ತಿದ್ದಾರೆಂದು ಅವನ ದೂರು!

ಇಜಿಪ್ತದಲ್ಲಿ ಅನಿಶ್ಚಿತಿ

ಒಂದು ಹುಲುಸಿನಲ್ಲಿ ಬ್ರಿಟಿಶ-ಇಜಿಪ್ತ ಭಿನ್ನಾಭಿಪ್ರಾಯವನ್ನು ಯುಕ್ತರಾಷ್ಟ್ರ ಸಂಸ್ಥೆಗೊಪ್ಪಿಸಬೇಕೆಂಬ ನಿರ್ಣಯ ಮಾಡಿದ ಇಜಿಪ್ತ ಈಗ ಹಿಂದುಮುಂದೆ ನೋಡುತಿರುವಂತೆ ಭಾಸವಾಗುತ್ತದೆ. ಇಜಿಪ್ತದಲ್ಲಿಯೆ ಕೆಲ ಮುಂದಾಳುಗಳು ಇದಕ್ಕೆ ವಿರುದ್ಧರಾಗಿರುವರಲ್ಲದೆ, ಟ್ರಾನ್ಸಜಾರ್ಡನದಂಥ ಬ್ರಿಟಿಶ ಹಸ್ತಕ ಅರಬ ರಾಷ್ಟ್ರಗಳೂ ನಿರುತ್ಸಾಹ ತೋರುತಿವೆ. ಪೌರ್ವಾತ್ಯ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿರುವ ಅನೈಕ್ಯತೆ ಪಾಪ ಇಜಿಪ್ತನ್ನೂ ಬಿಟ್ಟಿಲ್ಲವೆಂದು ತೋರುತ್ತದೆ.

ನಿಮಗೆ ಗೊತ್ತೆ?

● ಲಂಡನ್ನಿನಲ್ಲಿ ಬ್ರಹ್ಮದೇಶದ ಜನರಲ ಅಂಗಸಾನರು ಮುಖ್ಯಮಂತ್ರಿ ಆಟ್ಲಿಯವರ ಗಡೆಕಿಗೆ ಜಿದರಿಯೆ ಒಲ್ಲದ ಒಪ್ಪಂದಕ್ಕೆ ಸಹಿಯಿಕ್ಕಿದರಂತೆ. ಯಾಕಾ ಅವರು ಈ ಗಡ್ಡ ಹೊರಗಡಹಿದ್ದಾರೆ.

● ಅಣು ಬಾಂಬಿನ ಗುಟ್ಟು ಅಮೇರಿಕೆಯದು ಗುತ್ತಿಗೆಯಲ್ಲವೆಂದು ಹಿಂದೆ ಅಮೇರಿಕನ್ ವಾಣಿಜ್ಯ ಮಂತ್ರಿಗಳಾಗಿದ್ದ ಹೆನ್ರಿ ವಾಲೇಸರು ಹೇಳುತ್ತಾರೆ. ಫ್ರಾನ್ಸ, ಒಂದು ಸ್ಕ್ಯಾಂಡಿನೇವಿಯನ್ ರಾಷ್ಟ್ರ ಮೊದಲಾದವು ಈ ಗಾಗಲೆ ಪರಮಾಣು ಕಾರಖಾನೆ ತೆಗೆದಿವೆಯಂತೆ.

● ನೂರು ಪೌಂಡಿನ ಚೀಲಕ್ಕೆ ೪ ಸೆಂಟ್ಸ ಅಂದರೆ ಎರಡಾಣೆಯಂತೆ ತನಗೆ ಹೆಚ್ಚಾದ ಅನೇಕ ಸಾವಿರ ಚೀಲ ಬಟಾಟೆಯನ್ನು ಮಾರಲು ಅಮೇರಿಕೆ ಕೆಲ ರಾಷ್ಟ್ರಗಳಿಗೆ ಕೊಡುಗೆ ಮಾಡಿದೆ ಆದರೆ ಅಂಥ ಭಾಗ್ಯಶಾಲಿಗಳಲ್ಲಿ ಹಿಂದುಸ್ತಾನ ಸೇರಿಲ್ಲ!

೧೯೪೮ರ ಜೂನದೊಳಗೆ ಬ್ರಿಟಿಶರ "ಚಲೇಜಾವ"

(೯ ನೇ ಪುಟದಿಂದ)

ಇದರಿಂದ ಕೋಲಾಹಲ ಇನ್ನಷ್ಟು ಹೆಚ್ಚಾಯಿತು. ಚರ್ಚಿಲ್ಲರು ಕಡಿಮೆಯೆಂದರೆ ೧೫ ಬಾರಿ ಅದೇ ಪ್ರಶ್ನೆಯನ್ನು ಕೇಳಿದರು. ಹಿಂದುಸ್ತಾನವನ್ನು ಅರಾಜಕತೆಯಲ್ಲಿ ಬಿಟ್ಟು ಬರಲಾಗುವದೇ ಎಂದು [...]ದಲಾಗಿಯೂ ಕೇಳಲಾಯಿತು. ಪ್ರಶ್ನೆಗೆ [...] ಉತ್ತರಕೊಡದಿದ್ದರೆ ಏನನ್ನೋ ಮ[...]ಲಾಗುತಿದೆಯೆಂಬ ಸಂಶಯಕ್ಕೆ ಪುಷ್ಟಿ ದೊರೆಯುವದೆಂದು ಲಿಬರಲ್ ಸದಸ್ಯರೂ ಹೇಳಿದರು. ಆದರೆ ಅಟ್ಲಿಯವರು ತಮ್ಮ ಮೊದಲಿನ ಉತ್ತರಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಲಿಲ್ಲ. ಇವೆಲ್ಲ ಪ್ರಶ್ನೆಗಳನ್ನು ಕಾಮನ್ಸ ಚರ್ಚೆಯಲ್ಲಿ ಎತ್ತಬಹುದೆಂದು ಉಳಿದವರಿಗೆ ಉತ್ತರ ಕೊಟ್ಟರು. ಹಿಂದುಸ್ತಾನವನ್ನು ಅರಾಜಕತೆಗೆ ಬಿಟ್ಟು ಬರುವದಿಲ್ಲವೆಂದು ಅವರು ಹೇಳಿದರು.

ಪ್ರಶ್ನೋತ್ತರಗಳಲ್ಲಿ ಅವರು ತಿಳಿಸಿದ ಇನ್ನೊಂದು ಮಹತ್ವದ ವಿಷಯವಿದೆ. ಈ ಉಗ್ರ ನಿರ್ಣಯವನ್ನು ಸರಕಾರ ಕೈಕೊಳ್ಳಲು ಕಾರಣ ಹೇಳುತ್ತ ಅವರು ಪರಿಸ್ಥಿತಿಯಲ್ಲಿರುವ ಅನಿಶ್ಚಿತತೆಯೇ ಪ್ರಶ್ನೆಯ ನಿರ್ಣಯಕ್ಕೆ ಅಡ್ಡ ಬಂದಿದೆಯೆಂದೊಪ್ಪಿಕೊಂಡರು. ಅದಕ್ಕಾಗಿಯೇ ಹೀಗೆ ನಿಶ್ಚಿತ ಅವಧಿಯನ್ನು ಗೊತ್ತುಪಡಿಸಲಾಗಿದೆ. ಅನಿಶ್ಚಿತತೆಯಲ್ಲಿ ಒಪ್ಪಂದವಾಗುದು ಅಸಾಧ್ಯ [...]ತೋರಿತು. ಯಾವುದೂ ನಿಶ್ಚಿತವಿಲ್ಲೆಂದ[...] ನಾವು ಹೋಗುತ್ತಲೆ ಉಳಿಯೋಣ ಎಂದು ಕೆಲವರು ಭಾವಿಸಿದ್ದಾರೆ, ಎಂದು ಅವರು ಹೇಳಿದರು. ಈ ದೂರು ಯಾರನ್ನು ಕುರಿತು ಎಂದು ಬೇರೆ ಹೇಳಬೇಕಿಲ್ಲ.

ಲಾರ್ಡ್ಸ ಸಭೆಯಲ್ಲಿ

ಭಾರತ ಮಂತ್ರಿ ಲಾರ್ಡ ಪೆಥಿಕ ಲಾರೆನ್ಸರು ಅಟ್ಲಿಯವರು ಕಾಮನ್ಸದಲ್ಲಿ ಕೊಟ್ಟ ಹೇಳಿಕೆಯಂಥದೇ ಹೇಳಿಕೆಯನ್ನು ಲಾರ್ಡ್ಸ ಸಭೆಯಲ್ಲಿ ಕೊಟ್ಟರು. ಕಾನ್ಸರ್ವೇಟಿವರ ಪ್ರಾಬಲ್ಯವುಳ್ಳ ಆ ಸಭೆಯಲ್ಲಿ ಈ ಹೇಳಿಕೆಯನ್ನು ಪ್ರತಿಕೂಲ ರೀತಿಯಲ್ಲಿ ಪ್ರಶ್ನಿಸಲಾಯಿತು. "ಇದನ್ನು ಕೇಳಿ ಕೇಸಿಡಿಲು ಬಡಿದಂತಾಯಿತು" ಎಂದೊಬ್ಬ ಸದಸ್ಯರು ಹೇಳಿದರು. ಅನ್ಯಾಯಕತೆ, ಅರಾಜಕತೆ, ಬ್ರಿಟಿಶ ಕರ್ತವ್ಯ ಹೊಣೆಗಳ ಮಾತುಗಳು ಅಲ್ಲಿಯೂ ಬಂದವು.

ಲಾರ್ಡ್ಸ ಸಭೆಯ ಕಾನ್ಸರ್ವೇಟಿವ್ ಸದಸ್ಯರು "ಅಲ್ಪಸಂಖ್ಯಾತರ ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಯೋಗ್ಯ ಒಪ್ಪಂದವಾಗದ [...]ರವನ್ನು ಹಿಂದೀಯರ ಕೈಗೊಪ್ಪಿಸುವ ಸರಕಾರದ ನಿರ್ಣಯದಿಂದ ಹಿಂದುಸ್ತಾನದ ಹಿತಕ್ಕೆ ಅತಿಶಯ ಗಂಡಾಂತರವಿದೆ"ಯೆಂಬ ಗೊತ್ತುವಳಿಯನ್ನು ಮಂಡಿಸುವವರಿದ್ದಾರೆ. ಅದು ಲಾರ್ಡ ಟೆಂಪಲವುಡ್ಡರ ಹೆಸರಿನಲ್ಲಿ ಮಂಡಿಸಲ್ಪಡುವದು.

ಅನಿಶ್ಚಿತಸ್ಥಿತಿ ಒಂದು ವರ್ಷದೊಳಗೆ ಶಾಂತವಾಗುವಂತಿಲ್ಲ. ಅದು ಅನೇಕ ವರ್ಷಗಳವರೆಗೆ ಉಳಿಯುವದು. ಇಷ್ಟರಲ್ಲೆ ಬ್ರಿಟಿಶರು ಹಿಂದೆ ಸರಿದರೆ ಅಂತರ್ಯುದ್ಧವಾಗಬಹುದು. ಹೀಗಾದರೆ ಹಿಂದೀಯರು ಮತ್ತೆ ನಮ್ಮನ್ನು ದೂರಬಾರದೆಂದು ಲಿಬರಲ್ ಲಾರ್ಡರೊಬ್ಬರು ಹೇಳಿದರು.

ಪ್ರತಿಕ್ರಿಯೆಗಳು

ಬ್ರಿಟಿಶರು ಒಡಕು ಹುಟ್ಟಿಸಿ ಆಳುವರೆಂಬ ಹಳೆಯ ಆರೋಪವನ್ನು ಕೊನೆಗೊಳಿಸಿ "ಕೊಂದು ಹಾಕುವದೇ" ಅಟ್ಲಿಯವರ ಹೇಳಿಕೆಯ ಉದ್ದೇಶವೆಂದು ರಾಯ್ಟರ ವಿಶೇಷ ಸುದ್ದಿಗಾರನಾದ ಫ್ರೇಜರ ವೇಟನ್ನನು ಹೇಳುತ್ತಾನೆ. ಹಿಂದೀ ರಾಜಕೀಯ ಪಕ್ಷಗಳು ತೋರುತ್ತಿರುವ ಅನಿಶ್ಚಿತ ಮನೋವೃತ್ತಿಯನ್ನು ನೋಡಿ ಬ್ರಿಟನ್ನಿನಲ್ಲಿ ಬಹಳ ವ್ಯಾಕುಲತೆಯುಂಟಾಗಿತ್ತು. ಕೂಲಿಕಾರ ಸರಕಾರ ಎಷ್ಟು ದಿನ ಮಧ್ಯಸ್ಥನಂತೆ ಸಂಧಾನ ನಡೆಸುತ್ತ ಹೋಗುವದೆಂದು ರಾಜಕಾರಣಿಗಳು ಚಿಂತಿಸತೊಡಗಿದ್ದರಂತೆ. ಅದ್ದರಿಂದ ಇನ್ನು ತಡವಿಲ್ಲದೆ ಹೊಣೆ ಹೊರಲು ಮುಂದಾಳುಗಳು ಮುಂದೆ ಬರಬೇಕಾದುದರಿಂದ ನಡುಗಾಲ ಸರಕಾರದಲ್ಲಿರುವ ಎರಡೂ ಪಕ್ಷಗಳು ಹೆಚ್ಚು ಸಹಕಾರ ಬುದ್ಧಿ ತಳೆಯಬಹುದೆಂದು ಆಶಿಸಲಾಗಿದೆ ಹಿಂದೀ ಸಂಸ್ಥಾನಗಳೂ ಬೇಗನೆ ತಮ್ಮ ನಿಲುಮೆಯನ್ನು ನಿರ್ಧರಿಸಬೇಕಾಗುವದು. ೧೯೪೮ ಜೂನನ್ನೆ ಏಕೆ ಆರಿಸಲಾಯಿತೆಂಬದಕ್ಕೆ ಹಲವು ಕಾರಣಗಳನ್ನು ಮುಂದೊಡ್ಡಲಾಗುತಿದೆ. ಮೊದಲನೆಯದಾಗಿ ಒಮ್ಮತದ ಘಟನೆಯನ್ನು ಸಿದ್ಧಗೊಳಿಸಲು ಹಿಂದೀಯರಿಗೆ ಅವಕಾಶ ದೊರೆಯುವದು; ಎರಡನೆಯದಾಗಿ ಆಡಳಿತ ಯಂತ್ರ ಕುಸಿದು ಬೀಳುವ ಮೊದಲೆ ಹೊರಟಿದ್ದು ಹೋಗುವದು. ಹಿಂದೀ ಸಿವಿಲ ಸರ್ವಿಸಗೆ ಈಗ ೧೮ ತಿಂಗಳಿಂದ ಹೊಸ ನೇಮಕವಾಗಿಲ್ಲ. ಹಳೆ ಅಧಿಕಾರಿಗಳಲ್ಲಿ ಅನೇಕರು ಮುದುಕರಾಗುತ್ತಲೂ ಅನೇಕರು ನಿವೃತ್ತರಾಗಲು ಬಯಸಿಯೂ ಇದ್ದಾರೆ. ಹೀಗಿರುವಾಗ ಇನ್ನೂ ಬಹಳ ದಿನ ಉಳಿದರೆ ಆಡಳಿತ ಯಂತ್ರವನ್ನು ಸುಸ್ಥಿತಿಯಲ್ಲಿ ಬಿಟ್ಟುಕೊಡಲು ಸಾಧ್ಯವಾಗಲಿಕ್ಕಿಲ್ಲ.

ಹಿಂದುಸ್ತಾನದಲ್ಲಿ ಪ್ರಮುಖ ಪಕ್ಷಗಳೆರಡೂ ಅಧಿಕೃತವಾಗಿ ಏನನ್ನೂ ಸಾರಿಲ್ಲ. ಆದರೂ ಎರಡೂ ಪಕ್ಷಗಳಿಗೆ ಸಾಮಾನ್ಯವಾಗಿ ಈ ಘೋಷಣೆಯಿಂದ ಸಂತೋಷವಾಗಿದೆಯಂತೆ. ನಿರ್ದಿಷ್ಟ "ಚಲೇಜಾವ" ದಿನವನ್ನು ಗೊತ್ತುಪಡಿಸಿದ್ದರಿಂದಲೂ ಕೇಂದ್ರ ಅಥವಾ ಪ್ರಾಂತಿಕ ಸರಕಾರಗಳಿಗೆ ಅಧಿಕಾರ ಒಪ್ಪಿಸಬಹುದೆಂದು ಬ್ರಿಟಿಶರು ಹೇಳಿದ್ದರಿಂದಲೂ ಕಾಂಗ್ರೆಸ್ಸು ಸಂತುಷ್ಟವಾಗಿದೆ. ಲೀಗು ಈ ಹೇಳಿಕೆಯನ್ನು ತನ್ನ ಗೆಲವೆಂದೇ ತಿಳಿಯುತ್ತದೆ. ಇದು ಹೊಸತಾದ ಪ್ರಾರಂಭವೆಂದು ಅವರು ಹೇಳುತ್ತಾರೆ. ಘಟನಾ ಸಮಿತಿಯಲ್ಲಿ ಒಮ್ಮತವಾಗುವ ಸಂಭವವಿಲ್ಲವೆಂದು ಬ್ರಿಟಿಶರು ಒಪ್ಪಿಕೊಂಡು ಪ್ರಾಂತಗಳಿಗೆ ಅಧಿಕಾರ ಬಿಟ್ಟುಕೊಡುವದಾಗಿ ಹೇಳಿದ್ದರಿಂದ ಪಾಕಿಸ್ತಾನ ಸಿಕ್ಕಿದಂತಾಗಿದೆಯೆಂದು ಅವರ ಭಾವನೆ. ಕಾಂಗ್ರೆಸ್ ಕಾರ್ಯಸಮಿತಿ ಬೇಗನೆ ಕೂಡಬಹುದು.

ಚಲಚ್ಚಿತ್ರಗಳು

ಶ್ರೀಮತಿ ರಾಮೇಶ್ವರಿ ನೆಹರು ಹೀಗೆ ಬರೆಯುತ್ತಾರೆ— ನಮ್ಮ ರಾಷ್ಟ್ರೀಯ ಸರಕಾರಗಳು ಆಧುನಿಕ ಚಲಚ್ಚಿತ್ರ ಪಟಗಳ ಮೇಲೆ ಕೆಲ ನಿರ್ಬಂಧಗಳನ್ನು ಹಾಕಬೇಕೆಂದು ಜಾನೇವಾರಿ ೫ ನೇ ತಾರೀಖಿನ ಹರಿಜನ ಸಂಚಿಕೆಯಲ್ಲಿ ಮಾಡಿಕೊಂಡ ಸುದ್ದಿಗಾರರ ಬಿನ್ನಹವನ್ನು ಸಮರ್ಥಿಸಿ ನಾನು ಕೆಲ ಮಾತು ಜೋಡಿಸಬಯಸುತ್ತೇನೆ.

ನಾನೇನು ಸಿನೇಮಾಗಳಿಗೆ ಮೇಲಿಂದ ಮೇಲೆ ಹೋಗುವವಳಲ್ಲ. ಆದರೆ ನಾನು ನೋಡಿದ ಸಿನೇಮಾಗಳ ಅನುಭವದಿಂದ ಹೇಳಬೇಕಾದರೆ ಸಿನೇಮಾಗಳಿಂದ ತರುಣ ತರುಣಿಯರ ನೀತಿಯ ಮೇಲೆ ಘಾತಕ ಪರಿಣಾಮವಾಗುವದೆಂದು ಆ ಸುದ್ದಿಗಾರರು ಬರೆದದ್ದು ಯಥಾರ್ಥವೆಂದು ನನ್ನ ಮನವರಿಕೆಯಾಗಿದೆ.

ಸಿನೆಮಾ ಚಟ ದಿನ ದಿನಕ್ಕೆ ಬೆಳೆಯಹತ್ತಿದೆ. ಹಳ್ಳಿಗಳಲ್ಲಿಯೂ ಅದು ಬೇರು ಬಿಡಹತ್ತಿದ್ದು ನಿಜವಾಗಿ ಹೆಚ್ಚು ಗಂಡಾಂತರದ್ದಾಗಿದೆ. ಹಿಂದಿನ ಕಾಲದ ಆರೋಗ್ಯಕರ ಮನರಂಜನೆಯ ಸ್ಥಳಗಳನ್ನೆಲ್ಲ ಸಿನೆಮಾಗಳು ಆಕ್ರಮಿಸಹತ್ತಿವೆ. ಕಥಾಕಾಲಕ್ಷೇಪ ಸಂಗೀತ ಕಚೇರಿಗಳು ಮತ್ತು ಸಾಮಾನ್ಯ ಧಾರ್ಮಿಕ ಮನರಂಜನೆಯ ಕಾರ್ಯಕ್ರಮಗಳು ಜನತೆಯ ನೀತಿಮತ್ತೆ ಹೆಚ್ಚಲು ಸಾಧನವಾಗಿದ್ದವು. ಆದರೀಗ ಅವೆಲ್ಲ ಮಾಯವಾಗಹತ್ತಿವೆ. ಸಿನೇಮಾಗಳು ದಿನದಿನಕ್ಕೆ ಹೆಚ್ಚು ಲೋಕಪ್ರಿಯವಾಗಹತ್ತಿವೆ. ಅದರಿಂದ ದೇಶವೀಗ ಅತ್ಯಂತ ಘಾತಕ ನೈತಿಕ ಅವನತಸ್ಥಿತಿಗಿಳಿಯಹತ್ತಿದೆ. ಅದನ್ನು ಹೊಡೆದು ಹಾಕಲು ಎಲ್ಲ ಬಗೆಯ ಪ್ರಯತ್ನಗಳನ್ನು ಮಾಡಬೇಕಾಗಿದೆ. ಮಶ್ರೂವಾಲಾರವರ ಉಪಮೆಯನ್ನು ತೆಗೆದುಕೊಳ್ಳುವುದಾದರೆ ಈ ರಾಷ್ಟ್ರದ ನೈತಿಕ ಪ್ರಗತಿ ಮಾರ್ಗದಲ್ಲಿ ಸಿನೇಮಾಗಳು ಬಂಡೆಗಲ್ಲಾಗಿ ಪರಿಣಮಿಸಿದ್ದು ಅವನ್ನು ತೆಗೆದು ಹಾಕಬೇಕಾದರೆ ಬಲಿಷ್ಠ ಮದ್ದಾನೆಗಳ ಶಕ್ತಿ ಅವಶ್ಯವಾಗಿದೆಂದು ನಾನು ಹೇಳಬಲ್ಲೆನು. ಜನತೆ ಮನಸ್ಸಿಗೆ ಬಂದಂತೆ ಮಾಡಲಿ ಎಂದು ಹೇಳಿ ಬಿಡುವಷ್ಟು ಕ್ಷುಲ್ಲ ವಿಷಯವೇನು ಇದಲ್ಲ. ಈ ಚಲಚ್ಚಿತ್ರಗಳ ಉತ್ಪಾದನೆ ಕೇವಲ ಹಣ ಗಳಿಸುವವರ ಕಡೆಗಿರುವುದು. ಅವರಲ್ಲಿ ಅನೇಕರು ಕೇವಲ ಹಣ ಗಳಿಸುವದನ್ನೆ ಮುಖ್ಯಧ್ಯೇಯವನ್ನಾಗಿಟ್ಟುಕೊಳ್ಳುತ್ತಿರುವುದರಿಂದಲೆ ಇದು ಹೆಚ್ಚು ಗಂಡಾಂತರದ್ದಾಗಿದೆ. ಶಾಸ್ತ್ರೀಯ ಸಂಶೋಧನೆ ಒದಗಿಸಿಕೊಟ್ಟ ಒಂದು ಅನುಪಾಯಕಾರಿ ಸಾಧನದ ಉಪಯೋಗ ಕ್ರತೆ ಹೀಗೆ ಹಾಳಾಗುತಿದೆ. ಸರಕಾರದವರ ಸ್ವಲ್ಪ ನಿಯಂತ್ರಣದಿಂದ ಅದು ಜನತೆಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರಗತಿಯ ಅತ್ಯುತ್ತಮ ಸಾಧನವಾಗಿ ಪರಿಣಮಿಸುವದು.

ಇಂದು ಹಿಂದುಸ್ತಾನದಲ್ಲಿ ಸಿನೇಮಾ ಒಂದು ಅತ್ಯುತ್ತಮ ಉದ್ಯೋಗಗಳಲ್ಲಿ ಒಂದಾಗಿ ಪರಿಣಮಿಸಿದೆ. ಎಲ್ಲ ಬಗೆಯ ಔದ್ಯೋಗಿಕ ಉತ್ಪಾದನೆಗಳಲ್ಲಿಯಂತೆ ಇದರಲ್ಲಿಯೂ ಅತಿ ಅಗ್ಗದ ವಸ್ತುಗಳನ್ನು ಉತ್ಪಾದಿಸಲಾಗುತ್ತಿದೆ. ಹೆಚ್ಚು ಹಣ ಬರುವ ದೃಷ್ಟಿಯಿಂದಲೆ ವಸ್ತುಗಳನ್ನು ನಿರ್ಮಿಸಲಾಗುತಿದೆ. ಈ ಸಂದರ್ಭದಲ್ಲಿ ಕಾಮವಾಸನೆಯನ್ನುದ್ದೀಪಿಸುವಂಥ ಚಿತ್ರಗಳಿಗೇ ಹೆಚ್ಚು ಜನ ಆಕರ್ಷಿಸಲ್ಪಡುತಿರುವರು. ಅದುದರಿಂದ ಖಾಸಗಿ ವ್ಯಕ್ತಿಗಳು ಖಾಸಗಿ ಲಾಭಕ್ಕಾಗಿ ಸಾರ್ವಜನಿಕರ ರುಚಿಯನ್ನು ಹಾಳುಗೆಡಿಸಹತ್ತಿರುವರು. ಪೂರೈಕೆಯು ಬೇಡಿಕೆಯನ್ನು ಹುಟ್ಟಿಸುತಿದೆಯಲ್ಲದೆ ಬೇಡಿಕೆಯಂತೆ ಪೂರೈಕೆ ನಡೆಯುವದಿಲ್ಲ.

ಈ ದಿನಗಳಲ್ಲಿ ರಾಷ್ಟ್ರೀಕರಣದ ಮಾತು ಜೋರಿನಿಂದ ಸಾಗಿದೆ. ನನ್ನ ದೃಷ್ಟಿಯಿಂದ ಬೇರೆ ಯಾವ ಉದ್ಯೋಗಗಳಿಗಿಂತ ಮೊದಲು ಚಲಚ್ಚಿತ್ರಗಳ ರಾಷ್ಟ್ರೀಕರಣ ಅವಶ್ಯವೆಂದು ಎನಿಸುತ್ತದೆ. ಏನಿಲ್ಲದಿದ್ದರೂ ಸರಕಾರದ ಅತ್ಯುಗ್ರ ನಿಯಂತ್ರಣ ಅತ್ಯವಶ್ಯವಾಗಿದೆ. ನಿಯಂತ್ರಣ ಈಗ ಇದ್ದೇ ಇದೆ ಎಲ್ಲ ಪ್ರಾಂತಗಳಲ್ಲಿ ನಿಯಂತ್ರಣ ಮಂಡಲಗಳಿವೆ.

ಕೆಲ ದಿನಗಳ ಹಿಂದೆ ನಾನೂ ಪಂಜಾಬ ಪ್ರಾಂತಿಕ ನಿಯಂತ್ರಣ ಮಂಡಳದ ಓರ್ವ ಸದಸ್ಯೆಯಾಗಿದ್ದೆ. ಆಗ ಪರಕೀಯ ಸರಕಾರವಿದ್ದಿತು. ಆ ಸರಕಾರದ ಧೋರಣದ ದೃಷ್ಟಿಯಿಂದ ನಿಯಂತ್ರಣವೆಲ್ಲ ನಡೆಯುತಿದ್ದಿತು. ದೇಶ ಸ್ವಾತಂತ್ರ್ಯದ ಯಾವದೆ ಬಗೆಯ ಉಲ್ಲೇಖ ಇಲ್ಲವೆ ರಾಷ್ಟ್ರೀಯ ಧುರೀಣರ ಉಲ್ಲೇಖ ರಾಜದ್ರೋಹವೆನಿಸುತಿದ್ದುದರಿಂದ ಅದಕ್ಕೆಲ್ಲ ಕತ್ತರಿ ಬೀಳುತಿತ್ತು. ಚಿತ್ರಪಟದ ನೈತಿಕ ಮತ್ತು ಸಾಂಸ್ಕೃತಿಕ ಮಟ್ಟದ ಪರಿವೆ ಆ ನಿಯಂತ್ರಣ ಮಂಡಲಕ್ಕಿರಲಿಲ್ಲ. ಇವುಗಳಿಂಬೇಕೆಂಬ ಬಗ್ಗೆ ಯಾವದೇ ಬಗೆಯ ಪ್ರಮಾಣಪಟ್ಟವನ್ನು ಇಟ್ಟುಕೊಂಡಿರಲಿಲ್ಲ. ಈ ಬಗೆಯ ನಿಯಂತ್ರಣ ಪದ್ಧತಿ ನನಗೆ ಸರಿಯೆನಿಸದ್ದರಿಂದ ಮಂಡಳದ ಸದಸ್ಯತ್ವಕ್ಕೆ ನಾನು ರಾಜೀನಾಮೆ ಕೊಡಬೇಕಾಯಿತು. ಆದರೀಗ ಪರಿಸ್ಥಿತಿ ಬದಲಾಗಿದೆ. ನಮ್ಮ ಸರಕಾರಗಳೆ ಈಗ ಆಡಳಿತವನ್ನು ಸಾಗಿಸುತಿವೆ. ಈಗ ಈ ಸರಕಾರಗಳು ಅವುಗಳ ಬಗ್ಗೆ ಅಸಹಾನುಭೂತಿಯನ್ನು ತಾಳಲು ಕಾರಣವಿಲ್ಲ. ಪ್ರಾಂತಿಕ ಸರಕಾರಗಳು ಈ ವಿಷಯವನ್ನು ತೆಗೆದುಕೊಂಡು ಸಾರ್ವಜನಿಕರಿಗಾಗಿ ಪ್ರದರ್ಶಿಸಲ್ಪಡುವ ಚಿತ್ರಪಟಗಳ ಮೇಲೆ ಅತ್ಯುಗ್ರ ನಿಯಂತ್ರಣವನ್ನು ಹಾಕಬೇಕು. ವಿಶೇಷತಃ ಶಿಕ್ಷಣ ಶಾಖೆ ಈ ವಿಷಯದಲ್ಲಿ ಧುರೀಣತ್ವವನ್ನು ವಹಿಸತಕ್ಕದ್ದು.

ಈ ವಿಷಯದಲ್ಲಿ ಪ್ರಾಂತಿಕ ಸರಕಾರಗಳು ಕೈಕೊಳ್ಳತಕ್ಕ ಕ್ರಮ ಕರ್ತವ್ಯದ ಬಗ್ಗೆ ನಾನು ಒತ್ತಿ ಹೇಳಲಿಲ್ಲೆಂಬ ಬಗ್ಗೆ ನನ್ನನ್ನು ಸೌಮ್ಯವಾಗಿಯಷ್ಟೆ ಉಗ್ರ ರೀತಿಯಿಂದ ಟೀಕಿಸಿ ಬರೆದ ಇಂಥ ಹಲವಾರು ಪತ್ರಗಳೂ ನನಗೆ ಬಂದಿವೆ. ಇಂಥ ಪತ್ರಗಳನ್ನು ಬರೆದವರಲ್ಲಿ ಬಹುಸಂಖ್ಯಾಕರು ಚಲಚ್ಚಿತ್ರಪಟಗಳನ್ನುದ್ದೇಶಿಸಿಯೆ ಬರೆದಿರುವದಾದ್ದರಿಂದ ಆ ಅಭಿಪ್ರಾಯದ ಬಗ್ಗೆಯೆ ನಾನಿಲ್ಲಿ ಉಲ್ಲೇಖಿಸುತ್ತೇನೆ. ಉಳಿದವುಗಳ ಬಗ್ಗೆಯೂ ಇದನ್ನೆ ಹೇಳಬಹುದಾಗಿದೆ. ಮೂಲ ಪತ್ರಿಕಾ ಲೇಖಕಿ ಮಧ್ಯಹಿಂದುಸ್ತಾನದವಳು ಅವಳನ್ನು ಬೆಂಬಲಿಸಿದವರು ಪಂಜಾಬ, ಗುಜರಾತ, ಮಧ್ಯಪ್ರಾಂತ ಮತ್ತು ಮದ್ರಾಸ. ಹಿಂದುಸ್ತಾನದಲ್ಲಿಯ ಎಲ್ಲ ಬಗೆಯ ವಿಚಾರಶೀಲ ಜನರೆಲ್ಲ ಈ ಚಲಚ್ಚಿತ್ರಪಟಗಳ ಬಗ್ಗೆ ಅಸಮಾಧಾನಗೊಂಡಿರುವರೆಂದು ಇದರಿಂದ ವ್ಯಕ್ತವಾಗುತ್ತದೆ.

ನಾನು ನನ್ನ ಲೇಖದಲ್ಲಿ ಸರಕಾರದ ಕರ್ತವ್ಯ ಈ ವಿಷಯದಲ್ಲಿ ಏನೂ ಇರುವುದಿಲ್ಲೆಂದು ಪ್ರತಿಪಾದಿಸಿಲ್ಲ, ಜಾಣರಿಗೆ ಒಂದೇ ಮಾತು ಸಾಕು ಎಂಬ ತತ್ತ್ವದ ಸಾರವಾಗಿ ಪತ್ರಿಕಾ ಲೇಖಕಿ ಬರೆದಿದ್ದರಲ್ಲಿ ಬಹಳ ಸತ್ಯಪೂರ್ಣವಾಗಿದೆ. ಅದುದರಿಂದ ಪ್ರಜಾ ಪ್ರಾತಿನಿಧಿಕ ಸರಕಾರಗಳು ಇತ್ತ ಗಮನಿಸಬೇಕೆಂದು ಕೇಳಿಕೊಂಡಿದ್ದು ನಾನು ಇದನ್ನು ಬರೆಯುತಿರುವಾಗಲೆ ಮುಂಬಯಿ ಸರಕಾರದವರು ಈಗಾಗಲೆ ಈ ವಿಷಯದಲ್ಲಿ ಕೆಲ ಮಟ್ಟಿಗೆ ತೆಗೆದುಕೊಂಡಿರುವರೆಂದೂ ಚಲಚ್ಚಿತ್ರಪಟಗಳು ಶೈಕ್ಷಣಿಕ ಮತ್ತು ನೈತಿಕ ದೃಷ್ಟಿಯಿಂದ ಹೆಚ್ಚು ಸುಧಾರಣೆ ಹೊಂದುವಂತೆ ಕೆಲ ಕಾಯದೆ ಮಾಡಲಿರುವರೆಂದೂ ಸ್ಥಳಿಕ ಪತ್ರಿಕೆಯೊಂದರಲ್ಲಿ ಓದಿದೆನು ಉಳಿದ ಸರಕಾರಗಳೂ ಈಗಾಗಲೆ ಅಂಥ ಕ್ರಮವನ್ನು ತೆಗೆದುಕೊಂಡಿರದಿದ್ದರೆ ಕೂಡಲೆ ತೆಗೆದುಕೊಂಡು ಸರಿಯಾದ ದಿಸೆಯಲ್ಲಿ ಮುಂದಡಿಯಿಡುವವೆಂದು ಆಶಿಸುತ್ತೇನೆ.

ಇಷ್ಟು ಹೇಳಿದ ಬಳಿಕ ಈ ಸಂಬಂಧದಲ್ಲಿ ಸಾರ್ವಜನಿಕರ ಕರ್ತವ್ಯವನ್ನಾದರೂ ಒತ್ತಿ ಹೇಳಬಯಸುತ್ತೇನೆ. ಮನರಂಜನೆಯ ಮತ್ತು ಚಟಗಳ ಸಂಬಂಧದ ವಿಷಯಗಳಲ್ಲಿ ಸರಕಾರದವರು ಮಾಡಬೇಕೆಂದು ಬಯಸುವದಕ್ಕಿಂತ ಹೆಚ್ಚು ಸಾರ್ವಜನಿಕಾಭಿಪ್ರಾಯವನ್ನು ಪರಿವರ್ತಿಸುವ ಕಾರ್ಯವನ್ನು ಕಾರ್ಯಕರ್ತರು ಮಾಡತಕ್ಕದ್ದು. ಅವರು ತಮ್ಮ ಕರ್ತವ್ಯವನ್ನು ಮಾಡದಿದ್ದರೆ, ಮನರಂಜಕರ ಮತ್ತು ಸಾಮಾಜಿಕರ ಅಪ್ರೀತಿಗೆ ಪಾತ್ರರಾಗಿಯೂ ಅವರು ಈ ಕಾರ್ಯ ಮಾಡದಿದ್ದರೆ ಸರಕಾರದ ಯೋಜನೆಗಳು ಈ ವಿಷಯದಲ್ಲಿ ಹೆಚ್ಚು ಆಳವಾಗಿ ಹೋಗಲಾರವೆಂದು ಅವರು ತಿಳಿಯತಕ್ಕದ್ದು.

ಈ ಲೇಖನ ವ್ಯವಸಾಯಿ ಬಹಳ ದಿನ ನಡೆಯುವ ಸಂದರ್ಭವೊದಗಿದ್ದಾದರೆ ಮತ್ತೊಮ್ಮೆ ನಾನು ಈ ವಿಷಯವನ್ನು ಹೆಚ್ಚಾಗಿ ವಿವರಿಸಬಯಸುವೆ.

ಸಾಬರಮತಿ — ಕೆ. ಜಿ. ಮಶ್ರೂವಾಲಾ

೨೨—೧—೪೭

ರಾಮಬಾಣ ಉಪಾಯ

ಜಾತೀಯ ಐಕ್ಯಕ್ಕೆ ಮತ್ತು ನಮ್ಮ ದೇಶದಲ್ಲಿಯ ಉಳಿದ ಸಮಸ್ಯೆಗಳನ್ನು ಬಿಡಿಸುವುದಕ್ಕೆ ವಿಧಾಯಕ ಕಾರ್ಯಕ್ರಮವೆ ರಾಮಬಾಣ ಉಪಾಯವೆಂದು ಗಾಂಧೀಜಿ ಅಭಿಪ್ರಾಯ ಪಡುತ್ತಾರೆ. ಪ್ರೊ. ಜೆ. ಸಿ. ಕುಮಾರಪ್ಪನವರಿಗೆ ಗಾಂಧೀಜಿ ಖಾಜಿರಕಿಲ್ಲ (ನೌಖಾಲಿ ಜಿಲ್ಹಾ) ದಿಂದ ಬರೆದ ಪತ್ರದಲ್ಲಿ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ.

"ಇಲ್ಲಿ ನಾನು ಮಾಡುತಿರುವ ಕಾರ್ಯ ಈ ವರೆಗೆ ನಾನು ಕೈಕೊಂಡಿದ್ದ ಎಲ್ಲ ಕೆಲಸಗಳಿಗಿಂತ ಬಹಳ ಕಠಿನವಾದುದು ಮತ್ತು ದೇಶಸೇವೆಯ ಕಾರ್ಯವನ್ನು ಮಾಡುವ ಕಾರ್ಯಕರ್ತರು ತಮ್ಮ ತಮ್ಮ ಕಾರ್ಯದಲ್ಲಿ ಪರಿಣಾಮಕಾರಕವಾದ ಭಾಗವಹಿಸಬಲ್ಲರೆಂಬುದೂ ನನಗೆ ಗೊತ್ತಿದೆ. ನಿಮ್ಮ ಪಾಲಿಗೆ ಬಿದ್ದ ಹಳ್ಳಿಯ ಕಾರ್ಯದಿಂದ ಇಲ್ಲಿ ನಡೆವ ಕಾರ್ಯಕ್ಕೆ ಬಹಳ ಮಟ್ಟಿಗೆ ಸಹಾಯವಾಗಬಲ್ಲದೆಂದೆನಿಸುತ್ತದೆ. ಆದರೆ ಅದೇ ಕಾಲಕ್ಕೆ ಇದು ಬಹಳ ಕಠಿನ ಕೆಲಸವೆಂಬೂ ನನಗೆ ಗೊತ್ತು. ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತ ಸ್ವಚ್ಛತೆ, ರಾಟಿ, ನೇಯುವದು ಮತ್ತು ಆಯಾ ಹಳ್ಳಿಗೆ ವಿಶಿಷ್ಟವಾದ ಕೈಗಾರಿಕೆಯನ್ನು ಜನತೆಯ ಮುಂದೆ ಮಂಡಿಸುವಾಗ ಈ ಕೆಲಸ ಎಷ್ಟು ಕಠಿನವಾಗಿದೆಂಬುದರ ಪ್ರತ್ಯಯ ನನಗೆ ಕಂಡುಬಂದಿದೆ.

ಗೋಪಾಲನೆಯ ಯೋಜನೆ

(೮ನೇ ಪುಟದಿಂದ)

ಒದಗಿಸಿ ಕೊಡತಕ್ಕದ್ದು. ಇದು ಅತಿ ಮುಖ್ಯ ಮಹತ್ವದ್ದೆಂದು ಭಾವಿಸಬೇಕು.

ಗೋಪಾಲನೆಗೆ ಕನಿಷ್ಠ ಇಷ್ಟಾದರೂ ಇರತಕ್ಕದ್ದೆಂದು ನಾನು ಸೂಚಿಸಬಯಸುತ್ತೇನೆ. ವಿವರಗಳನ್ನು ನಾನು ವಿವೇಚಿಸಿಲ್ಲ. ಇವೆಲ್ಲ ಸೂಚನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡರೆ ದೇಶಕ್ಕೆ ಹಿತಕರವಾಗುವದು. ಆದರೆ ನಾವು ತಪ್ಪುದಾರಿಯಲ್ಲಿ ಕೆಲಸ ಪ್ರಾರಂಭಿಸಿದರೆ ಯಾವ ಕಾರ್ಯವೂ ಚೆನ್ನಾಗಿ ಆಗದು. ಮತ್ತು ಶ್ರಮ ಮತ್ತು ಹಣ ವ್ಯರ್ಥ ವ್ಯಯವಾದಂತಾಗುವದು.

ವ್ಯಾಪಕ ಯೋಜನೆಯನ್ನು ಸಿದ್ಧಪಡಿಸುವಾಗ ಈ ಮುದ್ದೆಗಳನ್ನೆಲ್ಲ ಮನಸಿನಲ್ಲಿಟ್ಟುಕೊಳ್ಳತಕ್ಕದ್ದು.

— ವಿನೋಬಾ

ಪವನಾರ (ಹಿಂದುಸ್ತಾನಿಯಿಂದ)

೧೯೪೮ರ ಜೂನದೊಳಗೆ ಬ್ರಿಟಿಶರ "ಚಲೇಜಾವ"

ಪಾರ್ಲಿಮೆಂಟಿನಲ್ಲಿ ಮುಖ್ಯ ಮಂತ್ರಿ ಆಟ್ಲಿಯ ಹೇಳಿಕೆ—
ವೇವೆಲ್ಲರು ಹೋಗಿ ಮೌಂಟಬ್ಯಾಟನ್ನರು ವಾಯಿಸರಾಯರಾಗುವರು

ಮೊದಲೇ ನಿರೀಕ್ಷಿಸಿದಂತೆ, ಮುಖ್ಯಮಂತ್ರಿ ಆಟ್ಲಿಯವರು ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ಹಿಂದುಸ್ತಾನದ ಬಗ್ಗೆ ಗುರುವಾರ ಮಹತ್ವದ ಘೋಷಣೆ ಮಾಡಿದರು. ಅದರ ಮುಖ್ಯಾಂಶಗಳು ಇಂತಿವೆ.

● ಲಾರ್ಡ ವೇವೆಲ್ಲರು ವಾಯಿಸರಾಯ ಪದದಿಂದ ನಿವೃತ್ತರಾಗುವರು. ಅವರ ಸ್ಥಾನದಲ್ಲಿ ಆಗ್ನೇಯ ಏಶಿಯಾ ಯುದ್ಧರಂಗದ ಮುಖ್ಯ ಸೇನಾಪತಿಯಾಗಿದ್ದ ಅಡ್ಮಿರಲ ಲಾರ್ಡ ಲುಯಿ ಮೌಂಟಬ್ಯಾಟನ್ನರು ಇದೇ ಮಾರ್ಚ ತಿಂಗಳಿಂದ ಅಧಿಕಾರ ವಹಿಸುವರು.

● ಹಿಂದುಸ್ತಾನದ ಅಧಿಕಾರವನ್ನು ಜವಾಬದಾರ ಹಿಂದೀಯರ ಅಧೀನತೆಗೊಪ್ಪಿಸಲು ಜೂನ್ ೧೯೪೮ನ್ನೇ ಕೊನೆಯ ಅವಧಿಯಾಗಿ ಗೊತ್ತುಪಡಿಸಲಾಗಿದೆ.

● (ಸಂಸ್ಥಾನಗಳ ಮೇಲಿನ) ವರಿಷ್ಠಾಧಿಕಾರವನ್ನು ಬ್ರಿಟಿಶ್ ಹಿಂದುಸ್ತಾನದ ಯಾವುದೇ ಸರಕಾರಕ್ಕೆ ವರ್ಗಾಯಿಸುವದಿಲ್ಲ.

ಆದರೆ ಸದ್ಯದ ನಡುಗಾಲ ಸರಕಾರದಲ್ಲಿನ ಲೀಗ್ ಮಂತ್ರಿಗಳ ಸ್ಥಾನಮಾನವನ್ನು ಕುರಿತು ಈ ಹೇಳಿಕೆಯಲ್ಲಿ ಏನೂ ಹೇಳಲಾಗಿಲ್ಲ.

ಆಟ್ಲಿಯವರೋದಿದ ಹೇಳಿಕೆಯ ಸಾರವಿಂತಿದೆ—

"ಹಿಂದುಸ್ತಾನವನ್ನು ಸ್ವತಂತ್ರ ಆಳಿಕೆಗೆ ಅಣಿಗೊಳಿಸುವದೇ ಎಂದಿನಿಂದಲೂ ಬ್ರಿಟಿಶ ಸರಕಾರಗಳ ಧೋರಣವಾಗಿತ್ತು. ಈ ಧೋರಣೆಯನ್ನು ಅನುಸರಿಸಿ ಹಿಂದೀಯರಿಗೆ ಹೆಚ್ಚು ಹೆಚ್ಚು ಹೊಣೆಯನ್ನು ಒಪ್ಪಿಸುತ್ತ ಬರಲಾಗಿತ್ತು. ಇಂದು ಹಿಂದೀ ನಾಗರಿಕ ಆಡಳಿತೆಯೂ ಸೇನಾ ಬಲ ಸಹ ಬಹಳ ಮಟ್ಟಿಗೆ ಹಿಂದೀ ಅಧಿಕಾರಿಗಳನ್ನೇ ಅವಲಂಬಿಸಿವೆ. ಘಟನಾತ್ಮಕ ಕ್ಷೇತ್ರದಲ್ಲಿ, ಬ್ರಿಟಿಶ್ ಪಾರ್ಲಿಮೆಂಟು ಸ್ವೀಕರಿಸಿದ ೧೯೧೯ ಮತ್ತು ೧೯೩೫ರ ಕಾಯಿದೆಗಳಿಂದಲೂ ಬಹಳ ರಾಜಕೀಯ ಅಧಿಕಾರವನ್ನು ವರ್ಗಾಯಿಸಿದವು. ೧೯೪೦ರಲ್ಲಿ ನಾಯಕತ್ವ ಸರಕಾರ ಹಿಂದೀಯರಿಗೆ ಸಂಪೂರ್ಣ ಸ್ವಾಯತ್ತ ಘಟನೆಯನ್ನು ರಚಿಸಿಕೊಳ್ಳುವ ಹಕ್ಕುಂಟೆಂಬ ತತ್ವವನ್ನು ಮಾನ್ಯ ಮಾಡಿತ್ತಲ್ಲದೆ, ಯುದ್ಧ ಮುಗಿದೊಡನೆ ಹಿಂದೀಯರು ಈ ಬಗ್ಗೆ ಘಟನಾಸಮಿತಿಯನ್ನು ಸ್ಥಾಪಿಸಬಹುದೆಂದು ೧೯೪೨ರಲ್ಲಿ ಸೂಚಿಸಿತು.

"ಈ ಧೋರಣೆ ಉಚಿತವೆಂದೂ ಸಮಂಜಸವೆಂದೂ ಪ್ರಜಾ ತಂತ್ರಾತ್ಮಕ ತತ್ವಗಳಿಗೆ ಒಪ್ಪುವಂಥದೆಂದೂ ಬ್ರಿಟಿಶ್ ಸರಕಾರ ನಂಬಿದೆ. ಅದು ಅಧಿಕಾರಕ್ಕೆ ಬಂದೊಡನೆ ಅದನ್ನು ಪೂರ್ಣಗೊಳಿಸಲು ಕೈಲಾದುದನ್ನೆಲ್ಲ ಮಾಡಿದೆ. ಮಾರ್ಚ ೧೯೪೬ರಲ್ಲಿ ಮುಖ್ಯಮಂತ್ರಿಗಳು ಕೊಟ್ಟ ಹೇಳಿಕೆಗೆ ಪಾರ್ಲಮೆಂಟಿನ ಸಾಧಾರಣ ಒಪ್ಪಿಗೆ ದೊರೆತಿತ್ತು. ಕಳೆದ ವರ್ಷ ಹಿಂದುಸ್ತಾನಕ್ಕೆ ಕಳಿಸಲ್ಪಟ್ಟ ಮಂತ್ರಿ ಶಿಷ್ಟಮಂಡಲ ಹಿಂದುಸ್ತಾನದ ಭಾವೀ ಘಟನೆಯ ರಚನೆಗಾಗಿ ಒಂದು ಯೋಜನೆಗೆ ಹಿಂದೀ ಮುಂದಾಳುಗಳನ್ನು ಒಪ್ಪಿಸಲು ಮೂರು ತಿಂಗಳು ಪ್ರಯತ್ನಿಸಿ, ಶಿಷ್ಟಮಂಡಳದವರು ಮಾರ್ಗದರ್ಶನ ಮಾಡಿಸಲು ಮುಂದಾದ ಹೊರತು ಒಪ್ಪಂದ ದುಸ್ಸಾಧ್ಯವೆಂದು ತೋರಿಬಂದ ಮೇಲೆಯೆ ತಮ್ಮ ಸೂಚನೆಗಳನ್ನು ಮುಂದಿಸಿದರು. ಕಳೆದ ಮೇ ತಿಂಗಳಲ್ಲಿ ಬಹಿರಂಗವಾದ ಈ ಸೂಚನೆಗಳಲ್ಲಿ, ಬ್ರಿಟಿಶ ಹಿಂದುಸ್ತಾನ ಮತ್ತು ಸಂಸ್ಥಾನಗಳಲ್ಲಿರುವ ಎಲ್ಲ ಜಾತಿ ಹಿತಸಂಬಂಧಗಳಿಗೂ ಪ್ರಾತಿನಿಧ್ಯವುಳ್ಳ ಘಟನಾ ಸಮಿತಿಯ ಮೂಲಕ ಭಾವೀ ಘಟನೆಯನ್ನು ನಿರ್ಧರಿಸಿಕೊಳ್ಳಬೇಕೆಂದು ಸೂಚಿಸಲಾಗಿತ್ತು.

ಮಂತ್ರಿ ಶಿಷ್ಟರು ಹಿಂದೆ ಬಂದಮೇಲೆ ಮುಖ್ಯ ಪಕ್ಷಗಳ ಮುಂದಾಳುಗಳನ್ನೊಳಗೊಂಡ ನಡುಗಾಲ ಸರಕಾರವನ್ನು ಕೇಂದ್ರದಲ್ಲಿ ಸ್ಥಾಪಿಸಲಾಗಿದೆ. ಈಗಿರುವ ಘಟನೆಯ ಅಳವಿನಲ್ಲಿ ಅದು ವಿಶಾಲ ಅಧಿಕಾರಗಳನ್ನು ನಡೆಸುತಿದೆ. ಎಲ್ಲ ಪ್ರಾಂತಗಳಲ್ಲಿಯೂ ಶಾಸನ ಸಭೆಗಳಿಗೆ ಹೊಣೆಯುಳ್ಳ ಮಂತ್ರಿಮಂಡಲಗಳು ಅಧಿಕಾರದಲ್ಲಿವೆ.

"ಆದರೆ ಹಿಂದೀ ಪಕ್ಷಗಳಲ್ಲಿ ಇನ್ನೂ ಮತಭೇದಗಳಿದ್ದು ಘಟನಾಸಮಿತಿ ಹೇಗೆ ಕೆಲಸ ಮಾಡಬೇಕಿತ್ತೋ ಹಾಗೆ ಮಾಡಲು ಸಾಧ್ಯವಿಲ್ಲದಿರು-



ಅಡ್ಮಿರಲ್ ಮೌಂಟಬ್ಯಾಟನ್
ಕೊನೆಯ ವಾಯಿಸರಾಯ ?

ವದು ವಿಷಾದಕರ. ಘಟನಾಸಮಿತಿ ಪೂರ್ಣ ಪ್ರಾತಿನಿಧಿಕವಾಗಿರಬೇಕೆಂಬುದು ಯೋಜನೆಯ ಮುಖ್ಯಾಂಶವಾಗಿತ್ತು. ಎಲ್ಲ ಪಕ್ಷಗಳ ಒಪ್ಪಿಗೆಯುಳ್ಳ ಘಟನೆಯ ಮೂಲಕ ಸ್ಥಾಪಿತವಾದ ಸರಕಾರಕ್ಕೆ ಅಧಿಕಾರವನ್ನು ವರ್ಗಾಯಿಸಲು ಬ್ರಿಟಿಶ ಸರಕಾರ ಆಶಿಸಿತ್ತಾದರೂ ಸದ್ಯಕ್ಕೆ ಅಂಥ ಘಟನೆ ಅಥವಾ ಸರಕಾರ ತಲೆಯೆತ್ತುವ ಲಕ್ಷಣವಿಲ್ಲ. ಸದ್ಯದ ಅನಿಶ್ಚಿತ ಸ್ಥಿತಿ ಗಂಡಾಂತರಕ್ಕೆ ಕಾರಣವಾಗಬಹುದು. ಆದುದರಿಂದ ೧೯೪೮ರ ಜೂನಕ್ಕಿಂತ ತಡವಾಗದಂತೆ, ಹೊಣೆಗಾರ ಹಿಂದೀಯರ ಕೈಗೆ ಪರಿಣಾಮಕಾರಿಯಾಗಿ ಅಧಿಕಾರವನ್ನು ವರ್ಗಾಯಿಸುವದು ಸರಕಾರದ ದೃಢಸಂಕಲ್ಪವೆಂದು ಸ್ಪಷ್ಟಗೊಳಿಸುವದು ಅವಶ್ಯವಾಗಿದೆ.

"ಜನರ ಬೆಂಬಲದ ಬಲವಾದ ಆಧಾರದ ಮೇಲೆ ನಿಂತು, ಶಾಂತಿಯನ್ನು ಕಾಯ್ದುಕೊಂಡು, ನ್ಯಾಯದಿಂದಲೂ ಕ್ಷಮತೆಯಿಂದಲೂ ಆಡಳಿತ ಸಾಗಿಸಬಲ್ಲ ಸರಕಾರಕ್ಕೆ ತನ್ನ ಅಧಿಕಾರಗಳನ್ನೊಪ್ಪಿಸಲು ಬ್ರಿಟಿಶ ಸರಕಾರ ಆತುರಪಡುತ್ತಿದೆ. ಆದುದರಿಂದ ಬರುವ ವರ್ಷ ತಮ್ಮ ಮೇಲೆ ಬರಲಿರುವ ಮಹಾ ಕರ್ತವ್ಯಗಳನ್ನು ಹೊರಲು ಸಿದ್ಧರಾಗಿರುವಂತೆ ಎಲ್ಲ ಪಕ್ಷಗಳೂ ತಮ್ಮ ಭೇದಭಾವಗಳನ್ನು ಕಳೆದೊಗೆಯುವದು ಅತ್ಯವಶ್ಯವಾಗಿದೆ.

"ತಿಂಗಳು ಗಟ್ಟಲೆ ಕಷ್ಟಪಟ್ಟು ಘಟನೆಯನ್ನು ರಚಿಸುವ ರೀತಿಯ ಬಗ್ಗೆ ಮಂತ್ರಿ ಶಿಷ್ಟರು ಒಂದು ಬಿಟ್ಟಿನ ಒಮ್ಮತವನ್ನು ಸಾಧಿಸಲು ಸಮರ್ಥರಾದರು. ಇದು ಹೊನ್ನೆ ಮೇ ತಿಂಗಳ ಹೇಳಿಕೆಯಲ್ಲಿ ಅಡಕವಾಗಿದೆ. ಆದರೆ ಪ್ರಾತಿನಿಧಿಕವಾದ ಘಟನಾ ಸಮಿತಿಯೊಂದರಲ್ಲಿ ಮೇಲೆ ಹೇಳಿದ ತಾರೀಖಿನೊಳಗೆ ಅಂಥ ಘಟನೆ ಸಿದ್ಧವಾಗದೆ ಹೋದರೆ, ಆಗ ನಿರ್ದಿಷ್ಟ ದಿವಸಕ್ಕೆ ಕೇಂದ್ರ ಸರಕಾರದ ಅಧಿಕಾರಗಳನ್ನು ಯಾರಿಗೆ ವರ್ಗಾಯಿಸಬೇಕು, ಬ್ರಿಟಿಶ ಹಿಂದುಸ್ತಾನದಲ್ಲಿ ಯಾವುದಾದರೊಂದು ಬಗೆಯ ಕೇಂದ್ರ ಸರಕಾರಕ್ಕೋ ಅಥವಾ ಕೆಲ ಪ್ರದೇಶಗಳಲ್ಲಿ ಈಗಿರುವ ಪ್ರಾಂತಿಕ ಸರಕಾರಗಳಿಗೋ ಅಥವಾ ಹಿಂದೀ ಜನರ ಹಿತದೃಷ್ಟಿಯಿಂದ ಅತಿ ಸಮಂಜಸವೆಂದು ತೋರಬಹುದಾದ ಇತರ ರೀತಿಯಲ್ಲೊ ಎಂಬುದನ್ನು ಸರಕಾರ ವಿಚಾರಿಸಬೇಕಾಗುವದು.

"ಅಧಿಕಾರದ ಕೊನೆಯ ಬದಲಿಕೆ ೧೯೪೮ರ ಜೂನಿಗಿಂತ ಮೊದಲು ಆಗುವದಿಲ್ಲವಾದರೂ ಅದಕ್ಕೆ ಸಿದ್ಧತೆಯಾಗುವಂತೆ ಆ ಮೊದಲೇ ಕ್ರಮಗಳನ್ನು ಕೈಕೊಳ್ಳಬೇಕಾಗುವದು. ನಾಗರಿಕ ಆಡಳಿತದ ಕ್ಷಮತೆಯನ್ನು ಕಾಯ್ದುಕೊಳ್ಳುವದೂ ಹಿಂದುಸ್ತಾನದ ಸಂರಕ್ಷಣೆಗೆ ಪೂರ್ಣ ವ್ಯವಸ್ಥೆ ಮಾಡುವದೂ ಅತ್ಯವಶ್ಯ. ಆದರೆ ಅಧಿಕಾರದ ವರ್ಗೀಕರಣದ ಕಾರ್ಯ ಸಾಗುತ್ತ ಹೋದಂತೆ ೧೯೩೫ರ ಹಿಂದುಸ್ತಾನ ಕಾಯದೆಯ ಎಲ್ಲ ನಿಯಮಗಳನ್ನೂ ಪೂರೈಸುವದು ಸಾಧ್ಯವಾಗಲಿಕ್ಕಿಲ್ಲ. ಕೊನೆಯ ಅಧಿಕಾರತ್ಯಾಗಕ್ಕಾಗಿ ಅವಶ್ಯಕ ಮಸೂದೆಯನ್ನು ಮಂಡಿಸಬೇಕಾದೀತು.

"ಹಿಂದೀ ಸಂಸ್ಥಾನಗಳ ಸಂಬಂಧದಲ್ಲಿ, ಮಂತ್ರಿ ಶಿಷ್ಟಾಯಿಯವರು ಸ್ಪಷ್ಟವಾಗಿ ಹೇಳಿರುವಂತೆ, ಬ್ರಿಟಿಶ ಸರಕಾರದವರು ಚಲಾಯಿಸುತ್ತಿದ್ದ ವರಿಷ್ಠಾಧಿಕಾರಗಳನ್ನೂ ಹೊಣೆಗಳನ್ನೂ ಬ್ರಿಟಿಶ ಹಿಂದುಸ್ತಾನದ ಯಾವುದೇ ಸರಕಾರಕ್ಕೆ ವರ್ಗಾಯಿಸಲು ಇಚ್ಛಿಸುವದಿಲ್ಲ. ವರಿಷ್ಠಾಧಿಕಾರದ ಪದ್ಧತಿಯನ್ನು ಕೊನೆಯ ಅಧಿಕಾರತ್ಯಾಗದ ದಿನದ ಮುಂಚೆಯೆ ರದ್ದುಗೊಳಿಸುವದಿಲ್ಲವಾದರೂ ವಿವಿಧ ಸಂಸ್ಥಾನಗಳಿಗೂ ಚಕ್ರವರ್ತಿಗಳಿಗೂ ಇರುವ ಸಂಬಂಧವನ್ನು ಪರಸ್ಪರ ಒಪ್ಪಿಗೆಯಿಂದ ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು.

"ಅಧಿಕಾರದ ವರ್ಗೀಕರಣದಿಂದ ತಲೆಯೆತ್ತುವ ವಿಷಯಗಳನ್ನು ಕುರಿತು ಬ್ರಿಟಿಶ ಸರಕಾರದವರು ತಾವಾರಿಗೆ ಅಧಿಕಾರ ಬಿಟ್ಟುಕೊಡಬೇಕೆನ್ನುವರೋ ಅವರೊಡನೆ ಸಂಧಾನ ನಡೆಸುವರು.

"ಹಿಂದುಸ್ತಾನದಲ್ಲಿರುವ ಬ್ರಿಟಿಶ ವ್ಯಾಪಾರಿ ಮತ್ತು ಔದ್ಯೋಗಿಕ ಹಿತಸಂಬಂಧಗಳಿಗೆ ಹೊಸಸ್ಥಿತಿಗತಿಗಳಲ್ಲಿ ಹಿಂದುಸ್ತಾನದಲ್ಲಿ ಯೋಗ್ಯ ಕ್ಷೇತ್ರವಿರುವದೆಂದು ಬ್ರಿಟಿಶ ಸರಕಾರದ ನಂಬಿಕೆ. ಹಿಂದುಸ್ತಾನದೊಡನೆ ಬ್ರಿಟನ್ನಿನ ವ್ಯಾಪಾರಿ ಸಂಬಂಧ ಬಹಳ ದೀರ್ಘಕಾಲದ್ದೂ ಸೌಹಾರ್ದಪೂರ್ಣವೂ ಆಗಿತ್ತು. ಇನ್ನಾದರೂ ಅದು ಹಾಗೆ ಉಳಿಯುವದು ಪರಸ್ಪರ ಹಿತಕ್ಕೆ ಅವಶ್ಯ."

ಕೊನೆಯಲ್ಲಿ ಆಟ್ಲಿಯವರು ಹಿಂದೀ ಜನತೆಗೆ ಸದಾಶಯಗಳನ್ನರ್ಪಿಸಿ ಹಿಂದೀ ಬ್ರಿಟಿಶ ಸಂಬಂಧ ಹರಿಯಬಾರದೆಂದೂ ಹಿಂದೀಯರ ಹಿತಕ್ಕಾಗಿ ಕೈಲಾದುದನ್ನೆಲ್ಲ ಮಾಡಲು ಬ್ರಿಟಿಶರು ಸಿದ್ಧರಿದ್ದಾರೆಂದೂ ಸೂಚಿಸಿದರು.

ಕಾಮನ್ಸದಲ್ಲಿ ಗಲಭೆ

ಮುಖ್ಯಮಂತ್ರಿ ಆಟ್ಲಿಯವರು ಈ ಹೇಳಿಕೆಯನ್ನೋದುತಿದ್ದಾಗ ಕಾಮನ್ಸ ಸಭೆ ಒಳ್ಳೆ ಶಾಂತತೆಯಿಂದ ಕೇಳಿಕೊಂಡಿತು. ಓದುವಿಕೆ ಮುಗಿಸಿ ಆಟ್ಲಿಯವರು ಲಾರ್ಡ ವೇವಲ್ಲರ ಕಾರ್ಯವನ್ನು ಪ್ರಶಂಸಿಸಿ ಅವರಿಗೆ ಅರ್ಲ ಪದವಿಯನ್ನಿತ್ತಿರುವದಾಗಿ ಜಾಹೀರು ಮಾಡಿದ್ದಲ್ಲದೆ ಹಿಂದೀ ಸಮಸ್ಯೆಯ ರೂಪವೀಗ ಪೂರ್ಣ ಬದಲಾದ



ಕ್ಲೆಮೆಂಟ ಆಟ್ಲಿ
ಸಾಮ್ರಾಜ್ಯ ನೌಕೆ ಮುಳುಗಿಸುವರು ?

ಕಾರಣ ವೇವಲ್ಲರನ್ನು ಪದವಿಯಿಂದ ನಿವೃತ್ತಿಗೊಳಿಸಿ ಚಕ್ರವರ್ತಿಗಳು ಮೌಂಟಬ್ಯಾಟನ್ನರನ್ನು ನೇಮಿಸಿದ್ದಾರೆಂದೂ ಆದರೂ ಮೌಂಟಬ್ಯಾಟನ್ನರು ನೌಕೆಯ ಸೇವೆಯಿಂದ ನಿವೃತ್ತರಾಗುವದಿಲ್ಲವೆಂದೂ ಸಾರಿದರು. ಈ ಹೇಳಿಕೆ ಮುಗಿದೊಡನೆ ಕಾಮನ್ಸ ಭವನದ ಬಿಸಿಯೇರಹತ್ತಿತು. ಚರ್ಚಿಲ್ಲರು ಚಕ್ರವನ್ನು ತಿರುಗಿ ಬಿಟ್ಟರು. "ವೇವಲ್ಲರನ್ನು ಈ ವಿಶಿಷ್ಟ ಸಂಧಿಯಲ್ಲಿ ಏಕೆ ಸೇವೆಯಿಂದ ನಿವೃತ್ತಗೊಳಿಸಲಾಯಿತು? ಅವರಿಗೂ ಸರಕಾರಕ್ಕೂ ಅಂಥ ಮತಭೇದಗಳುಂಟಾಗಿದ್ದವೆ?" ಎಂದು ಅವರು ವಿಚಾರಿಸಿದರು. "ಇಲ್ಲ, ಈ ವಿಚಾರದಲ್ಲಿ ನಾನು ಹೇಳಿಕೆಯಲ್ಲಿ ಹೇಳಿರುವದಕ್ಕಿಂತ ಹೆಚ್ಚೇನೂ ಹೇಳಬಯಸುವದಿಲ್ಲ"ವೆಂದು ಆಟ್ಲಿ ತಿಳಿಸಿದರು. ಚರ್ಚಿಲ್ಲರು ಅಷ್ಟಕ್ಕೇ ಬಿಡಲಿಲ್ಲ. ಈ ವಿಷಯದಲ್ಲಿ ಸಮಂಜಸ ಉತ್ತರವನ್ನು ಅಪೇಕ್ಷಿಸಲು ಕಾಮನ್ಸ ಸಭೆಗೆ ಹಕ್ಕುಂಟೆಂದರವರು. ಯುದ್ಧಾವಧಿಗಷ್ಟೆ ವೇವಲ್ಲರ ನೇಮಕವಾಗಿದ್ದರೆ ಹದಿನೆಂಟು ತಿಂಗಳ ಹಿಂದೆಯೆ ಅವರನ್ನು ತೆಗೆಯಬೇಕಾಗಿತ್ತು. ಮೂರು ವರ್ಷದ ನೇಮಕವಾಗಿದ್ದರೆ ಕಳೆದ ಜೂನಿನಲ್ಲಿ ಅವರ ಅಧಿಕಾರ ಮುಕ್ತಾಯವಾಗಬೇಕಿತ್ತು. ಅಂದ ಮೇಲೆ ಈ ಸಂಧಿಯಲ್ಲಿ ಏಕೆ ಮುಕ್ತಾಯಗೊಳಿಸಲ್ಪಟ್ಟಿತು, ಎಂದು ಅವರು ಜಿಜ್ಞಾಸೆ ತೆಗೆದರು.

ವೇವೆಲ್ಲರನ್ನು ಇಂತಿಷ್ಟೇ ಅವಧಿಗೆಂದು ನೇಮಿಸಲಿಲ್ಲವೆಂದು ಹೇಳಿ ಕಾರಣದ ಬಗ್ಗೆ ಮೊದಲು ಹೇಳಿದ್ದನ್ನೇ ಆಟ್ಲಿಯವರು ತಿರುಗಿ ನುಡಿದರು.

ಚರ್ಚಿಲ್ಲರಿಗೆ ತೃಪ್ತಿಯಾಗಲಿಲ್ಲ. ಸತ್ಯವನ್ನು ಈ ಸಭೆಯಿಂದ ಮರೆಮಾಚಲಾಗುತಿದೆಂದವರು ಆರೋಪಿಸಿದರು. ಆಟ್ಲಿಯವರು ಮತ್ತೆ ಅದೇ ಮಾತು ಹೇಳಿದರು. ಅಷ್ಟರಲ್ಲಿ ವಿರೋಧಿಪಕ್ಷದ ಸದಸ್ಯರು ಕೂಗಾಡತೊಡಗಿದರು. "ಒಂದು ದಿನ ಬೆಳಿಗ್ಗೆ ಎದ್ದು 'ಹಾಂ ಇಂದು ಹೊಸ ವಾಯಿಸರಾಯರನ್ನು ನೇಮಿಸೋಣ' ಎಂದು ಮುಖ್ಯಮಂತ್ರಿಗಳು ನಿಶ್ಚಯಿಸಿದರೆ? ಇದಕ್ಕೆನಾದರೂ ಕಾರಣ ವಿವರಿಸಬೇಕು" ಎಂದರು ಚರ್ಚಿಲ್. "ಹೇಳಿರಿ ಹೇಳಿರಿ" ಎಂಬ ಬೊಬ್ಬಾಟವೆದ್ದಿತು.

ಲಿಬರಲ್ ಪಕ್ಷದ ಕ್ಲೆಮೆಂಟ ಡೇವೀಸರು ಕಾಂಗ್ರೆಸ ಲೀಗುಗಳಲ್ಲಿ ಒಪ್ಪಂದವಾಗದಿದ್ದರೂ ನಿಶ್ಚಿತ ದಿನಕ್ಕೆ ಅಧಿಕಾರ ತ್ಯಾಗಮಾಡಲಾಗುವದೇನೆಂದು ಕೇಳಿದರು.

ಈ ಬಗ್ಗೆ ಚರ್ಚೆಯನ್ನೇರ್ಪಡಿಸಲು ಮುಖ್ಯಮಂತ್ರಿಗಳು ಒಪ್ಪಿದರು.

ಆದರೆ ಚರ್ಚಿಲ್ಲರು ಪುನಃ ಎದ್ದು ವೇವೆಲ್ಲರ ಪ್ರಶ್ನೆಯನ್ನೇ ಮುಂದೊತ್ತಿದರು.

ಆಟ್ಲಿಯವರ ಸಹನೆ ಮೀರಿತು. "ಯುದ್ಧಕಾಲದಲ್ಲಿ ಚರ್ಚಿಲ್ಲರು ಸೈನಿಕ ಮತ್ತು ನಾಗರಿಕ ನೇಮಕಗಳಲ್ಲಿ ಬೇಕಾದಷ್ಟು ಬದಲಾವಣೆ ಮಾಡಿದ್ದರು. ಅದಕ್ಕೆ ಕಾರಣ ಕೊಟ್ಟಿದ್ದರೆ?" ಎಂದವರು ಸಿಟ್ಟಿನಿಂದಲೇ ಹೇಳಿದರು.

—೧೦ನೇ ಘಟಿಕೆ

ಗಾಂಧೀ ಯಾತ್ರೆ

ಬೌದ್ಧಿಕ ಶ್ರಮ

ತಾ ೭ಕ್ಕೆ ಪ್ರಸಾದಪುರದಲ್ಲಿ ಗಾಂಧೀಜಿ ಕಾಯ ಕಷ್ಟದ ಅವಶ್ಯಕತೆಯನ್ನೊತ್ತಿ ಹೇಳಿದರು. ಪ್ರತಿಯೊಬ್ಬನೂ ಕಾಯ-ಕಷ್ಟ ಮಾಡಬೇಕೆಂದು ಅವರು ಹೇಳಿದಾಗ ನೆರಹಳ್ಳಿಯಲ್ಲಿ ವಿಧಾಯಕ ಕಾರ್ಯ ನಡೆಸುತ್ತಿದ್ದ ಶ್ರೀಮತಿ ವೀಣಾ ದಾಸರು, ಠಾಕೂರ, ರಾಮನ್ನ ರಂಥವರು ಕಾಯ ಕಷ್ಟವನ್ನು ಮಾಡಬೇಕಾದ ಅವಶ್ಯಕತೆಯೇ[illegible]ನು ಕೇಳಲಾಗಿ ಬೌದ್ಧಿಕ ಶ್ರಮಜೀವಿ ಮನುಷ್ಯ ನಿದ್ದರೂ ದೈಹಿಕ ಶ್ರಮ ಮಾಡಬೇಕಾದು ಅವಶ್ಯ. ಅದರಿಂದ ಬೌದ್ಧಿಕ ಶಕ್ತಿಯು ವಿಕಾಸ ವಾಗುವದೆಂದರು. ದೈಹಿಕ ಶ್ರಮ ಮಾಡುವವರಿಗೇ ಮತಾಧಿಕಾರವಿರಬೇಕೆಂದು ೧೯೩೫ ರಲ್ಲಿ ಹೇಳಿದ್ದನ್ನೇ ಅವರು ಪುನರುಚ್ಚರಿಸಿದರು.

ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಹೋಗುವಾಗ ಜನರು ತಮ್ಮ ಸುತ್ತ ಮುಕುರುತ್ತಿರುವದನ್ನು ಗಾಂಧೀಜಿ ನಿಷೇಧಿಸಿದರು. ಅವರು ಏಕಾಂತವನ್ನ ಪೇಕ್ಷಿಸಿದ್ದಾರೆ.

ತಾ೮ಕ್ಕೆ ಅವರು ನಂದಿಗ್ರಾಮಕ್ಕೆ ಹೋದಾಗ ಅವರೊಡನೆ ಉರ್ದುವಾದ ಸೇನಯ ಶ್ರೀ. ಶಾನವಾಜರೂ ಇದ್ದರು. ಅವರು ಮಹಾತ್ಮರ ಆದೇಶದಂತೆ ನೌಖಾಲಿಯಲ್ಲುಳಿದು ಜಾತೀಯ ಸೌಹಾರ್ದಕ್ಕಾಗಿ ಪ್ರಯತ್ನಿಸುವರು.

ಬಹಿಷ್ಕಾರ ತಪ್ಪು

ನಂದಿಗ್ರಾಮದಲ್ಲಿ ಅವರಿಗೆ ಕೇಳಲಾದ ನಾಲು ಪ್ರಶ್ನೆಗಳಿಗೆ ಪ್ರಾರ್ಥನಾ ಸಭೆಯಲ್ಲಿ ಉತ್ತರ ಹೇಳಿದರು. ನೌಖಾಲಿಯಲ್ಲಿ ಹಿಂದುಗಳ ಹತ್ತಿರ ತಾವೇ ಸಾಗುಮಾಡಲಾರದಷ್ಟು ಭೂಮಿಯಿದೆ. ಮುಸ್ಲಿಮರು ಅವರನ್ನು ಬಹಿಷ್ಕರಿಸಿದ್ದರಿಂದ ಅವರು ಏನು ಮಾಡಬೇಕೆಂದು ಕೇಳಲಾಗಿತ್ತು. ಈ ಬಗೆಯ ಬಹಿಷ್ಕಾರ ಸರ್ವತ್ರವ್ಯಾಪಿಯಾಗಿಲ್ಲವಾದರೂ ಅದು ನಿಷೇಧಾರ್ಹವೆಂದು ಗಾಂಧೀಜಿ ಉತ್ತರಿಸಿದರು. ಹಿಂದುಗಳನ್ನು ಶತ್ರುಗಳೆಂದು ಭಾವಿಸಿ ನೌಖಾಲಿಯಲ್ಲಿಲ್ಲದಂತೆ ಮಾಡಬೇಕೆಂದು ಮುಸ್ಲಿಮರು ಬಗೆದರೆ ಮಾತ್ರ ಹೀಗಾಗಬಹುದು. ಹಾಗಾದರೆ ಅದು ಯುದ್ಧಸಾರಿದಂತೆಯೆ. ಇನ್ನು ಬಹಿಷ್ಕಾರಕ್ಕೀಡಾದ ಹಿಂದುಗಳು ಭೂಮಿಯನು ಹಡಕೆಡವಬಹುದು. ಇಲ್ಲವೆ ಬೆಟ್ಟಿನ ಭೂಮಿಯನ್ನು ಮಾಡಬಿಡಬಹುದು. ಉಪಯೋಗಿಸಬಾರದು. ಭೂಮಿಯನ್ನಿಟ್ಟುಕೊಳ್ಳಲಾಗದು.

ಇನ್ನೊಂದು ಪ್ರಶ್ನೆಗೆ ಉತ್ತರವಾಗಿ, ತನ್ನ ನೌಖಾಲಿ ವಾಸ್ತವ್ಯದಿಂದ ಹಿಂದುಗಳು ಸ್ವಲ್ಪಮಟ್ಟಿಗೆ ಭಯವನ್ನು ತೊರೆದಿದ್ದಾರೆಂಬ ಸಂತೋಷಪಟ್ಟರು. ಮೂರನೆ ಪ್ರಶ್ನೆಗೆ ಮುಸ್ಲಿಮರು ಗೆಳೆಯರು ಕೆಲವ ಮೇಲೂ ಪರಿಣಾಮವಾಗಿದೆಯೆಂದು ಹೇಳಿದರೆ ಬಣ್ಣಬಣ್ಣವಾದೀತೆಂದರು.

ಗಾಂಧೀಜಿಯು ಸಹಕಾರ್ಯಕರ್ತರ ಶ್ರಮದಿಂದಾಗುತ್ತಿರುವ ಪರಿಣಾಮದ ಬಗ್ಗೆ ಕೇಳಲಾಗಿ ತಾವು ಕಾಯಾ ವಾಚಾ ಮನಸಾ ಪವಿತ್ರರಾಗಿದ್ದರೆ ತಮ್ಮ ಕಾರ್ಯ ಚಿರಸ್ಥಾಯಿಯಾಗುವದೆಂದೂ ತಮ್ಮ ಸಹಕಾರ್ಯಕರ್ತರ ಮಾತು ಹಾಗೆಯೆ ಎಂದೂ ಉತ್ತರವಿತ್ತರು.

ಅಹಿಂಸೆಯಿಂದಲೆ ಐಕ್ಯ

ವಿಜಯ ನಗರದಲ್ಲಿ ತಾ೧೦ ಕ್ಕೆ ಪ್ರಾರ್ಥನಾ ಸಭೆಯಲ್ಲಿ ಅವರಿಗೆ ಹಲ ಪ್ರಶ್ನೆಗಳು ಕೇಳಲ್ಪಟ್ಟವು ಹಿಂದುಸ್ಥಾನದಲ್ಲಿ ಮುಸ್ಲಿಮರಿಗೂ ಸ್ವಾತಂತ್ರ್ಯ ದೊರೆಯದೇ ಪಾಕಿಸ್ತಾನವಿರುವಾಗ ಅದಕ್ಕೆ ಕಾಂಗ್ರೆಸ್ಸಿನ ವಿರೋಧವೇಕೆಂದು ಕೇಳಲಾಯಿತು ಗಾಂಧೀಜಿ, ಹಾಗಿದ್ದರೆ ಅದು ತ್ಯಾಜ್ಯವೆಂದರು. ಹಿಂದೂ ಬಹುಸಂಖ್ಯಾಕ ಪ್ರಾಂತಗಳಲ್ಲಿ ಮುಸ್ಲಿಮರು ಮುಸ್ಲಿಂ ಪ್ರಾಂತಗಳಲ್ಲಿ ಹಿಂದುಗಳೂ [illegible]ರಾಗಿರಬೇಕಾಗುವದು. ದುರ್ದೈವದಿಂದ [illegible]ಜೆಗಾರ ಲೀಗ ನಾಯಕರಾರೂ ಹಾಗೆ ಹೇಳಲ್ಲವೆಂದರು.

ಲೀಗ್-ಕಾಂಗ್ರೆಸ ಐಕ್ಯವಿಲ್ಲದಿರುವಾಗ ಹಿಂದೂ ಮುಸ್ಲಿಂ ಐಕ್ಯ ಸಾಧ್ಯವಿಲ್ಲವಲ್ಲವೆ ಎಂದು ಕೇಳಿದುದಕ್ಕೆ ಸಂಗಡಗಳ ರಾಜಕಾರಣವನ್ನು ಬಿಟ್ಟುಬಿಟ್ಟು ಇನ್ನೂ ಅವಕಾಶವಿರುವಾಗ ನೌಖಾಲಿಯ ಹಿಂದೂ ಮುಸ್ಲಿಮರು ಮೈತ್ರಿಯಿಂದ ನಡೆದುಕೊಂಡು ಲೀಗ ಕಾಂಗ್ರೆಸ್ಸುಗಳಿಗೆ ಮೇಲ್ಪಂಕ್ತಿ ಹಾಕಿಕೊಡಬೇಕೆಂದರು. ಅಹಿಂಸೆಯಿಂದಲೆ ಈ ಐಕ್ಯಸಾಧ್ಯ ನನ ಅಹಿಂಸೆಯನ್ನು ಪರೀಕ್ಷೆಗೊಳಗುಮಾಡಲು ಇಲ್ಲಿಗೆ ಬಂದಿದ್ದೇನೆಂದರು.

ಮುಸ್ಲಿಮರು ಸೌಹಾರ್ದ ತೋರಿಸುತ್ತಿದ್ದರೂ ಹಿಂದುಗಳು ಮರಳಿ ಬಾರದೆ ಉದ್ವೇಗದ ವಾತಾವರಣವನ್ನು ಉಳಿಸಿಕೊಂಡಿದ್ದಾರೆಂದು ಇನ್ನೊಂದು ಪ್ರಶ್ನೆಯಲ್ಲಿ ಆರೋಪಿಸಲಾಗಿತ್ತು ಗಾಂಧೀಜಿ ಅದನ್ನು ಅಲ್ಲಗಳೆದು ಹಿಂದುಗಳು ಮರಳಿ ಬರಬೇಕೆಂದು ಸಾಮಾನ್ಯವಾಗಿ ಮುಸ್ಲಿಮ ಜನತೆಯು ಇಚ್ಛೆಯಿದ್ದರೆ ಅವರು ಸಂತೋಷದಿಂದ ಮರಳುತ್ತಿದ್ದರೆಂದೂ ಆದರೆ ಪರಿಸ್ಥಿತಿ ಅಷ್ಟು ಸುಗಮ. ಎಲ್ಲೊಂದೂ ಒದಲಿಗೆ ಕೆಲವೆಡೆ ಮರಳುತ್ತಿರುವ ಹಿಂದುಗಳನ್ನು ತಡೆವ ತಿಡಿಗೇಡಿತನ ನಡೆಯುತ್ತಿದೆಂದೂ ಸಾರಿದರು. ಹಿಂದುಗಳು ಕೆಲವರು ಸುಳ್ಳು ದೂರುಗಳನ್ನುಕೊಡುತ್ತಿರುವರೆಂಬುದಕ್ಕೆ ಅದು ನಿಜವಾಗಿದೆಯೆಂದು ಸಿದ್ಧವಾದರೆ ಸುಳ್ಳು ದೂರುಕೊಟ್ಟವರನ್ನು ದಂಡಿಸಬೇಕೆಂದರು.

ಒಡೆಯನ ಪಾಲು

ಹಮುಚಡಿಯಲ್ಲಿ ತಾ. ೧೧ಕ್ಕೆ ಬಂಗಾಲ ಸರಕಾರದ ಹೊಲಸಾಗುವಳಿ ಮಸೂದೆಯ ಬಗ್ಗೆ ಗಾಂಧೀಜಿಯನ್ನು ಪ್ರಶ್ನಿಸಲಾಯಿತು. ಈ ಮಸೂದೆಯನ್ವಯ ಒಡೆಯನ ಅಂಶವನ್ನು ಒಂದು-ಮೂರಾಂಶಕ್ಕಿಳಿಸಿದ್ದಲ್ಲದೆ, ೧೯೪೬ ಡಿಸೆಂಬರ ೨೨ಕ್ಕೆ ಸಾಗುವಳಿ ಮಾಡುತ್ತಿದ್ದ ರೈತನನ್ನು ಮೂರು ವರ್ಷ ಬಿಡಿಸಬಾರದೆಂದು ವಿಧಿಸಲಾಗಿದೆ. ಗಲಭೆ ಕಾಲದಲ್ಲಿ ನೌಖಾಲಿಯ ಹಿಂದೂ ರೈತರು ಹೊರಟು ಹೋದಾಗ ಮುಸ್ಲಿಂ ರೈತರು ಸಾಗುಮಾಡಿದ್ದಾರೆ. ಈಗ ಮರಳಿದ ಹಿಂದೂ ರೈತರು ಮೂರು ವರ್ಷ ಹೊಲದ ಹಕ್ಕನ್ನು ಕಳೆದುಕೊಳ್ಳಬೇಕಾಗುವದೆಂದು ಒಂದು ಪ್ರಶ್ನೆಯಲ್ಲಿ ದೂರಲಾಗಿತ್ತು. ಗಾಂಧೀಜಿ ಒಡೆಯನ ಭಾಗವನ್ನು ಕಡಿಮೆ ಮಾಡುವದು ನ್ಯಾಯವೇ ಸರಿಯೆಂದೊಪ್ಪಿದರು. ಆದರೆ



ಶ್ರೀನಗರದಿಂದ ಧರ್ಮಪುರಕ್ಕೆ
೬-೨-೪೭ಕ್ಕೆ ಗಾಂಧೀಜಿ ಹೋಗುತ್ತಿರುವದು
ಛಾಯಾ ಚಿತ್ರಕಾರ—
ಶ್ರೀ ನಾರಾಯಣರಾವ ಕುಲಕರ್ಣಿ ವಿಜಾಪುರ

ದಂಗೆಗೆ ಹೆದರಿ ಓಡಿ ಹೋದ ರೈತರಿಗೆ ಅವರ ಹೊಲಗಳನ್ನು ಮರಳಿ ಕೊಡುವದು ಮುಸ್ಲಿಂ ರೈತರ ಕರ್ತವ್ಯವೆಂದೂ ಹಾಗಿಲ್ಲದೆ ಅವರು ಭೂಮಿಯನ್ನು ಆಕ್ರಮಿಸ ಹೋದರೆ ಅದನ್ನು ತಡೆಯಲು ಸರಕಾರ ಯೋಗ್ಯ ಕ್ರಮ ಕೈಕೊಳ್ಳುವದೆಂದೂ ಹೇಳಿದರು.

ಮಕ್ಕಳ ಶಿಕ್ಷಣ ಮನೆಯಲ್ಲಿ ಆಗುವದು ಮನವಿಟ್ಟು ದುಡಿಯುವವರಿಗೆ ವೃದ್ಧರ ಪೋಷಣೆ ಕಷ್ಟವಲ್ಲವೆಂದೂ ಹೇಳಿದರು. ಅಲ್ಲದೆ ಅವರು ಭೂಮಿಯನ್ನು ಪುಕ್ಕಟೆ ಬಿಟ್ಟುಕೊಡಬೇಕಾಗಿಲ್ಲ. ಮಾರಬಹುದು ಇಲ್ಲವೆ ಹಡಕೆಡವಬಹುದೆಂದು ಸೂಚಿಸಿದರು.

ಗೋಪಾಲನೆಯ ವ್ಯಾಪಕ ಯೋಜನೆ ಬಗ್ಗೆ ಸೂಚನೆ

ಫೆಬ್ರುಅರಿ ೧೧ನೇ ತಾರೀಖು ಶೇಟ ಶ್ರೀ ಜಮನಾಲಾಲಜಿಯ ಸಾಂವತ್ಸರಿಕ. ಅವರು ಗೋಸೇವೆಗಾಗಿ ಎಷ್ಟೊಂದು ನಿಷ್ಠರಾಗಿದ್ದರೆಂಬುದು ಆ ಸಾಂವತ್ಸರಿಕ ನಮ್ಮ ಸ್ಮರಣೆಗೆ ತಂದುಕೊಡುತದೆ. ಆ ನಿಷ್ಠೆಯ ಸ್ಮರಣೆಯಿಂದ ಗೋವಿನ ಬಗ್ಗೆ ನಮ್ಮ ಕರ್ತವ್ಯ ಜಾಗೃತಿಯ ಅರಿವು ಉಂಟಾಗುತ್ತದೆ. ಕೇವಲ ಸದಿಚ್ಛೆ ವ್ಯಕ್ತಪಡಿಸುವದರಲ್ಲಿಯೆ ಪಂಚವರ್ಷ ಗತಿಸಿಹೋದವು. ಉಳಿದವರು ತಮ್ಮ ಪಂಚವಾರ್ಷಿಕ ಯೋಜನೆಗಳನ್ನು ಮಾಡಿಕೊಂಡು ಜಾರಿಯಲ್ಲಿ ತಂದು ತಮ್ಮ ದೇಶದ ಭವಿತವ್ಯವನ್ನು ಬದಲಿಸಿಕೊಂಡರು. ಆದರೆ ಈ ಐದು ವರುಷಗಳಲ್ಲಿ ತೋರಿಸಬರುವಂಥ ಯಾವ ಕೆಲಸವನ್ನಾದರೂ ಮಾಡಿರುವೆವೆಂದು ಹೇಳಿಕೊಳ್ಳುವದು ನಮಗೆ ಶಕ್ಯವಿಲ್ಲ. ಆದರೆ ಈ ಐದು ವರುಷಗಳ ಅವಧಿಯಲ್ಲಿ ನಾವು ಸ್ವರಾಜ್ಯಕ್ಕಾಗಿ ದೊಡ್ಡ ಹೋರಾಟವನ್ನು ನಡೆಸಿದೆವು. ಅದರಿಂದ ನಮಗೆ ಕೆಲಮಟ್ಟಿಗೆ ರಾಜಕೀಯ ಅಧಿಕಾರ ಪ್ರಾಪ್ತವಾಗಿದೆ. ಗೋಸೇವೆಯ ದೇಶವ್ಯಾಪಕ ಕಾರ್ಯಕ್ರಮವನ್ನು ಕೈಕೊಳ್ಳಲು ಈ ಅಧಿಕಾರದ ಉಪಯೋಗ ಮಾಡಿಕೊಳ್ಳುವಾ. ನಾವೀಗ ಪಡೆದ ಅಧಿಕಾರವೇನು ಸಣ್ಣಮಟ್ಟದಲ್ಲ. ಗೋಸೇವೆಯಲ್ಲಿ ನಾವು ಪಡೆಯದಿರುವ ಪ್ರಗತಿಯನ್ನು ಅದು ತೋರಿಸಿಕೊಡುತಿದೆ. ಆದರೆ ಮುಂಬರುವ ಐದು ವರುಷಗಳ ಗತಿಯೇನು? ನಾವೊಂದು ಯೋಜನೆಯನ್ನು ಸಿದ್ಧಪಡಿಸಿಕೊಂಡು ಅದನ್ನು ಕಾರ್ಯರೂಪದಲ್ಲಿ ತರಲು ಕಂಕಣಬದ್ಧರಾಗಬೇಕು.

ಯುದ್ಧದ ಗೊಂದಲದ ಕಾಲದಲ್ಲಿಯೂ ಗೋಸೆವಾಸಂಘವು ಹೇಳಿಕೊಳ್ಳುವಂಥ ಸ್ವಲ್ಪ ಸೇವೆ ಸಲ್ಲಿಸಿದೆ. ಅದರ ಸ್ವರೂಪ ಮರ್ಯಾದಿತವಿದೆ ನಿಜ. ಅಂಕಿಸಂಖ್ಯೆಗಳಿಂದ ಈ ಕಾರ್ಯ ಕಡಿಮೆಯದೆನಿಸಬಹುದು. ಆದರೆ ಅದು ಅಮೂಲ್ಯವಾಗದೆ ಭಾವೀ ಯೋಜನೆಯನ್ನು ಸಿದ್ಧಪಡಿಸುವಲ್ಲಿ ದೇಶಕ್ಕೆ ಅನೊಂದು ಬಗೆಯ ಮಾರ್ಗದರ್ಶನ ಮಾಡಿಕೊಡುತ್ತಿದೆ. ಸೇವಾಗ್ರಾಮದಲ್ಲಿ ಮತ್ತು ಗೋಪುರಿ ಗೋಶಾಲೆಯಲ್ಲಿ ನಡೆದ ಸಣ್ಣ ಸಣ್ಣ ಪ್ರಯೋಗಗಳಿಂದ ಸಿದ್ಧವಾದ ದೆಂದರೆ ನಾವು ನಮ್ಮ ಸ್ಥಳೀಕ ಗೋಗಳ ಹಾಲಿನ ಸಂಪತ್ತಿಯನ್ನೂ ಬೀಜದ ಹೋರಿಗಳ ಸಂಪತ್ತಿಯನ್ನು ಅಭಿವರ್ಧಿಸಿಕೊಳ್ಳಬಲ್ಲೆವೆಂಬುದು ಗೋಸೇವೆಯ ದೃಷ್ಟಿಯಿಂದಲಾದರೂ ನಾವು ನಮ್ಮ ಸ್ಥಳೀಕ ಗೋಗಳ ತಳಿಗೆಯಲ್ಲಿ ಸುಧಾರಣೆ ಮಾಡಬೇಕಾದುದು ಅವಶ್ಯವಾಗಿದೆ. ಈ ಸಭೆಗಳಲ್ಲಿ ಇದನ್ನು ಮಾಡಲಾಗಿದ್ದು ಹೆಚ್ಚು ಹಣವೂ ಇದಕ್ಕಾಗಿ ವೆಚ್ಚವಾಗಿಲ್ಲ. ಇವೆಲ್ಲ ಮಾಡತಕ್ಕದ್ದು ಇನ್ನೂ ಬೇಕಾದಷ್ಟಿದೆಂಬುದು ನಿಜ. ಮತ್ತು ನಮ್ಮ ಧ್ಯೇಯವನ್ನು ನಾವಿನ್ನೂ ಮುಟ್ಟಿರುವದಿಲ್ಲ ಆದರೆ ನಾವು ಪಡೆದಷ್ಟು ನಿಃಸಂಶಯವಾಗಿ ಪ್ರಶಂಸನೀಯವಾಗಿದೆ. ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ಇರುವದರಿಂದ ನಮ್ಮ ಆಕಳು ಮತ್ತು ಎತ್ತುಗಳ ಪರಿಸ್ಥಿತಿಯನ್ನು ಸುಧಾರಿಸುವ ಹೊಣೆ ಬಹಳ ಮಟ್ಟಿಗೆ ಹೆಚ್ಚಿದೆ. ಈಗ ಕಾರ್ಯ ಯಾವ ಮಾರ್ಗದಿಂದ ಸಾಗತಕ್ಕದ್ದು ಎಂಬುದರ ನಿಶ್ಚಿತ ರೂಪರೇಷೆಯನ್ನು ಗೊತ್ತುಪಡಿಸತಕ್ಕದ್ದು. ನಗರಗಳಿಗೆ ಒಳ್ಳೆ ಮತ್ತು ಸಾಕಷ್ಟು ಹಾಲಿನ ಪೂರೈಕೆಯು ಅವಶ್ಯಕತೆ ಕೂಡಲೆ ನಮ್ಮ ಗಮನಕ್ಕೆ ಬರುತ್ತದೆ. ಈ ಸಂದರ್ಭದಲ್ಲಿ ಮುಖ್ಯ ಉಪಾಯವಾಗಿ ಗೋಪಾಲನೆಯಲ್ಲಿ ಕೆಲ ಸೂಚನೆಗಳನ್ನು ಇಲ್ಲಿ ಮಾಡಬಯಸುತ್ತೇನೆ.

೧) ಹಾಲಿನ ಪೂರೈಕೆ ಪ್ರಶ್ನೆ ಎತ್ತಲ್ಪಟ್ಟ ಕೂಡಲೆ ಹೆಚ್ಚು ಹಾಲು ಕೊಡುವ ಆಕಳುಗಳನ್ನು ತರಿಸಬೇಕೆಂಬ ವಿಚಾರದಿಂದಲೆ ನಾವು ಹೊರಡುತ್ತೇವೆ. ನಮ್ಮ ಅಭಿಪ್ರಾಯದಲ್ಲಿ ಇದು ಅವಶ್ಯವಿಲ್ಲ. ಕಳ್ಳದಿಪ್ಪುಟ್ಟಿಗೆ ಸ್ಥಳೀಕ ತಳಿಗೆಯನ್ನೇ ನಮ್ಮ ಕೆಲಸಕ್ಕಾಗಿ ಆರಿಸಿಕೊಳ್ಳಬೇಕು. ಸ್ವಲ್ಪ ವಿಚಾರ ಮಾಡಿದ್ದಾದರೆ ನಮ್ಮ ಮುದ್ದೆ ಸ್ಪಷ್ಟವಾಗುವದು. ಸ್ಥಳೀಕ ತಳಿಗೆಯನ್ನು ಅಲಕ್ಷಿಸಿದರೆ ನಮ್ಮ ಉದ್ದೇಶ ಸಾಧಿಸಲಾರದು. ಒಕ್ಕಲಿಗನನ್ನು ನಾವು ವಂಚಿಸಲಾರೆವು. ಅವರಲ್ಲಿಯ ಆಕಳುಗಳ ಸ್ಥಿತಿಯನ್ನು ಸುಧಾರಿಸುವ ಮಾರ್ಗವನ್ನು ನಾವು ಅವರಿಗೆ ತೋರಿಸಿ ಕೊಡತಕ್ಕದ್ದು ಅವಶ್ಯವಾಗಿದೆ. ನಗರಗಳಿಗೆ ಹಾಲಿನ ಪೂರೈಕೆ ಮಾಡುವ ಹುರುಪಿನಲ್ಲಿ ನಾವು ಈ ಪ್ರಾಣಿಗಳನ್ನು ಲಕ್ಷಿಸುವದು ಘಾತಕವಾಗುವದು.

೨) ಕೇವಲ ಹೆಚ್ಚು ಹಾಲನ್ನು ಕೊಡುವ ತಳಿಗೆಗಳನ್ನೇ ಬೆಳಸಿ ಬೀಜದ ಹೋರಿಗಳ ಉತ್ಪಾದನೆಯನ್ನು ಅಲಕ್ಷಿಸುವದು ತಪ್ಪಾಗುವದು. ಒಕ್ಕಲತನಕ್ಕಾಗಿ ಒಳ್ಳೆ ಎತ್ತುಗಳನ್ನು ಒದವಿಸಬೇಕು. ಯಾವ ದೇಶಗಳಲ್ಲಿ ಒಕ್ಕಲತನ ಎತ್ತುಗಳನ್ನು ಅವಲಂಬಿಸುವದಿಲ್ಲವೊ ಮತ್ತು ಎಲ್ಲಿ ಕರುಗಳು ಕೇವಲ ಆಹಾರದದ್ರವ್ಯವಾಗಿ ಪರಿಣಮಿಸುವವೋ ಅಂಥಲ್ಲಿ ಹೆಚ್ಚು ಹಾಲು ಒದವಿಸುವದರ ಕಡೆಗೆ ನಾವು ಗಮನ ಕೊಡುತ್ತೇವೆಂದು ಹೇಳಿದರೆ ನಡೆಯುವದು. ಬಲಿಷ್ಠ ಎತ್ತುಗಳ ಬಗ್ಗೆ ನಾವೇನು ಕಾಳಜಿ ಮಾಡಲಾರೆವು. ಹಿಂದುಸ್ತಾನದಲ್ಲಿ ಮಾತ್ರವೆ ಗೋವಿನ ಭವಿತವ್ಯ ಉಜ್ವಲವಾಗಿದೆ. ಇಲ್ಲಿನ ಆಕಳುಗಳು ನಮಗೆ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಹಾಲನ್ನು ಪೂರೈಸುವದಲ್ಲದೆ ಬಲಿಷ್ಠ ಹೋರಿಗಳನ್ನೂ ಒದವಿಸಬಲ್ಲವು.

೪) ನಗರಗಳಿಗೆ ಹಾಲು ಪೂರೈಸುವುದು ಹಳ್ಳಿಗಳ ಕರ್ತವ್ಯ ಖಂಡಿತವಾಗಿ ಅಲ್ಲ. ಹಳ್ಳಿಯ ಜನ ತಾವೇ ಬೇಕಾದಷ್ಟು ಹಾಲು ಕುಡಿಯಬೇಕು. ಹೆಚ್ಚಿಗೆ ಉಳಿದುದನ್ನು ಮಾತ್ರ ಎರಡನೆಯವರಿಗೆ ಮಾರತಕ್ಕದ್ದು—ಹಳ್ಳಿಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಹಾಲು ದೊರೆಯಿತೆಂದರೆ ಮಾತ್ರ ಈ ಧ್ಯೇಯ ಸಾಧ್ಯವಾಗುವದು. ಮತ್ತು ಹಳ್ಳಿಗರಿಗೆ ಸಾಕಷ್ಟು ಹಾಲು ಕುಡಿಯಲಿಕ್ಕೆ ದೊರೆಯುವದು.

೫) ಒಕ್ಕಲತನ, ಗೋಪಾಲನೆ, ಎತ್ತಿನಿಂದ ಎಳೆಯುವ ಗಾಣದಿಂದ ಎಣ್ಣೆ ತೆಗೆವುದು, ಚರ್ಮ ಹದ ಮಾಡುವದು ಮತ್ತು ಒಳ್ಳೆ ಗೊಬ್ಬರ ತಯಾರ ಮಾಡುವದು ಇವೆಲ್ಲ ಒಂದೇ ಘಟದಲ್ಲಿ ಬರುವದಾದ್ದರಿಂದ ಎಲ್ಲ ಕೂಡಿಯೆ ನಡೆಯಲಿಕ್ಕೆಬೇಕು. ಒಕ್ಕಲಿಗರಿಗೆ ಮತ್ತು ಅವರ ಮಕ್ಕಳಿಗೆ ಸಾಕಷ್ಟು ಹಾಲು ಸಿಕ್ಕಬೇಕಾದರೆ ಇವೆಲ್ಲ ಉದ್ಯೋಗಗಳು ಕೂಡಿಯೆ ಸಾಗತಕ್ಕದ್ದು. ಗೋಪಾಲನೆಯು ಯಾವದೊಂದು ಯೋಜನೆಯಲ್ಲಿ ಎಲ್ಲವೂ ಏಕಕಾಲದಲ್ಲಿಯೆ ಸಾಗತಕ್ಕದ್ದು.

೬) ಗೋಪಾಲನೆ ಬೇರೆ ಗ್ರಾಮೋದ್ಯೋಗಗಳಿಂದ ಪ್ರತ್ಯೇಕಿತವಾಗಲಾರದು. ತನ್ನ ಮನೆಯಲ್ಲಿಯೇ ಅವಶ್ಯಕ ಉದ್ಯೋಗಗಳಲ್ಲಿ ಒಕ್ಕಲಿಗನನ್ನು ತೊಡಗಿಸುವ ವ್ಯವಸ್ಥೆ ಮಾಡುವದು ಶಕ್ಯವಾಗದಿದ್ದರೆ ತನ್ನ ಬೇಕುಗಳಿಗಾಗಿ ಅವನು ಹೊರಗಿನ ಪೇಟೆಯನ್ನವಲಂಬಿಸಬೇಕಾಗುವದು ಮತ್ತು ಅದಕ್ಕಾಗಿ ಅವನು ರೊಕ್ಕ ಹಣ ಕೊಟ್ಟು ಕೊಳ್ಳಬೇಕಾಗುವದು. ಈ ಪರಿಸ್ಥಿತಿ ಇರುವ ವರೆಗೆ ಅವನು ಯಾವಾಗಲೂ ತನ್ನ ಹಾಲು ಮತ್ತು ಹಾಲಿನ ಪದಾರ್ಥಗಳನ್ನೆಲ್ಲ ಮಾರಲಿಕ್ಕೆ ಬೇಕಾಗುವದು.

೭) ಹಳ್ಳಿಗರು ಹೊರಗಿನಿಂದ ಎತ್ತುಗಳನ್ನು ಕೊಳ್ಳುವ ಅವಶ್ಯಕತೆಯಿಲ್ಲ. ಪ್ರತಿ ಹಳ್ಳಿಯಲ್ಲಿ ಒಳ್ಳೆ ಎತ್ತುಗಳನ್ನ ಉತ್ಪಾದಿಸಬಹುದು. ಇದಕ್ಕಾಗಿ ಸರಕಾರದವರು ಯೋಗ್ಯ ಸೌಕರ್ಯಗಳನ್ನು

—೧೦ನೇ ಪುಟಕ್ಕೆ

ಧರ್ಮವೀರ
ಹರಿಜನ ಪುರವಣಿ

ಅನುಚಿತ ಪ್ರತಿಪಾದನೆ

'ಸ್ಟಾರ್ಲಿಂಗ ಬಾಳಿಕಸಾಲ' ಮತ್ತು ಸ್ಟರ್ಲಿಂಗ ಸಾಲಗಳೆಂದು ಹೇಳಿಕೊಳ್ಳುವ ಪ್ರಕರಣಗಳನ್ನು ಬಗೆಹರಿಸುವದಕ್ಕಾಗಿ ನಿಷ್ಪಕ್ಷಪಾತ ನ್ಯಾಯಮಂಡಲದಿಂದ ಅವನ್ನು ತೀರ್ಮಾನಿಸಬೇಕೆಂದು ನಾವು ಸೂಚಿಸಿದ್ದೆವು. ಬ್ರಿಟಿಷರು ಈ ಸೂಚನೆಯನ್ನು ಸ್ವೀಕರಿಸಿದರೆ ಒಳ್ಳೇದು. ಇದು ಬಹಳ ಮೂಲ್ಯದ ಅನೇಕ ಹೊಣೆಗೆಟ್ಟ ಪ್ರತಿಪಾದನೆಗಳನ್ನು ನೋಡಿದರೆ ಅಂಥ ನಿಷ್ಪಕ್ಷಪಾತ ನ್ಯಾಯಮಂಡಲದ ನೇಮಕ ಅತ್ಯವಶ್ಯವೆಂಬುದು ಸ್ಪಷ್ಟವಾಗುತ್ತದೆ. ಯುದ್ಧಕಾಲದ ಮುಖ್ಯಮಂತ್ರಿ ಚರ್ಚಿಲರ ಸ್ನೇಹಿತರು ಕಾಮನ್ಸ ಸಭೆಯಲ್ಲಿ "ಜಪಾನಿಯ ದಾಳಿಯಿಂದ ಭೂ-ಜಲ ವಾಯು ಸಾಧನಗಳಿಂದ ಹಿಂದುಸ್ತಾನವನ್ನು ಸಂರಕ್ಷಿಸಿದ್ದಕ್ಕಾಗಿ ಬ್ರಿಟಿಶರಿಗೆ ಪ್ರತಿಫಲವನ್ನು ಕೊಡದಿದ್ದರೆ ಬ್ರಿಟಿಷ ಅಧಿಕಾರಿಗಳು ಹಿಂದಿನ ಸರಕಾರವು ಗವರ್ನರ್ ಜನರಲ್ಲರಿಗೆ ತಿಳಿಸಿತ್ತು" ಎಂಬುದಾಗಿ ಹೇಳಿದರು. ಈ ಪ್ರತಿಪಾದನೆಯಿಂದ ಅನೇಕ ಪ್ರಶ್ನೆಗಳು ಉದ್ಭವಿಸಿವೆ. ಅವನ್ನೆಲ್ಲ ನ್ಯಾಯನಿಷ್ಠುರತೆಯಿಂದ ನಿರ್ಣಯಿಸಬೇಕಾಗಿದೆ.

ಜಪಾನು ಹಿಂದುಸ್ತಾನದ ಮೇಲೆ ದಾಳಿ ಮಾಡಲು ಹೇಗೆ ಉದ್ಯುಕ್ತವಾಯಿತು? ಜಪಾನಿಗಳಿಗೆ ಇಲ್ಲವೆ ಜರ್ಮನರಿಗೆ ಹಿಂದುಸ್ತಾನದಲ್ಲಿ ಬ್ರಿಟಿಶರ ಹೊರತು ಬೇರೆ ವೈರಿಗಳಾರೂ ಇರಲಿಲ್ಲ. ಅದರಿಂದ ಯುದ್ಧದ ಪ್ರತ್ಯಕ್ಷ ಅಪ್ರತ್ಯಕ್ಷ ಪರಿಣಾಮಗಳನ್ನೆಲ್ಲ ಬ್ರಿಟನ್ನೆ ಸಹಿಸಿಕೊಳ್ಳಬೇಕು. ಪರಿಸ್ಥಿತಿ ಹೀಗಿರುವಾಗ ಬ್ರಿಟಿಶರು ಹಿಂದುಸ್ತಾನವನ್ನು ವಶಪಡಿಸಿಕೊಂಡದ್ದರಿಂದ ಯುದ್ಧಕಾಲದಲ್ಲಿ ಹಿಂದುಸ್ತಾನದಲ್ಲಿಯ ಅವಶ್ಯಕ ವಸ್ತುಗಳನ್ನು ನಿರ್ಬಂಧ ರೀತಿಯಿಂದ ಉಪಯೋಗಿಸಿದ್ದಕ್ಕಾಗಿ ಮತ್ತು ಪರಿಣಾಮವಾಗಿ ಹಿಂದುಸ್ತಾನದಲ್ಲಿ ಪ್ರತಿವರ್ಷ ಬೀಳುತ್ತಿರುವ ಬರದ ಬವಣೆಯನ್ನು ಸಂಬಂಧಿಸಿ ಕೊಡಬೇಕೆಂದು ಕೇಳುವದಕ್ಕೆ ಹಿಂದುಸ್ತಾನಕ್ಕಿದೆ ಯುದ್ಧದ ಮೂಲಕ ದೀರ್ಘದ ಕಾಲುಗಳ ಸಂಗ್ರಹ ಕೂಡ ಹಿಂದುಸ್ತಾನದಿಂದ ಬಳಸು ಹೋಯಿತು. ಇದೀಗ ನಾವು ಶಾಶ್ವತವಾಗಿ ಬರುವ ಬೆಳೆಗಳಿಗೆ ನೀರೆ ಹೋಗಬೇಕಾಗಿದೆ. ಅಲ್ಲದೆ ಹಿಂದುಸ್ತಾನದಲ್ಲಿ ಹಿಂದೆಂದೂ ಇಲ್ಲದಿದ್ದಂಥ ಅತಿ ಪ್ರಕರಣದಿಂದ ದೇಶದ ಆರ್ಥಿಕ ರಚನೆ ಸುಧಾರಿಸದಷ್ಟು ಹದಗೆಟ್ಟು ಹೋಗಿದೆ. ತತ್ಪರಿಣಾಮವಾಗಿ ಅವಶ್ಯಕ ಪದಾರ್ಥಗಳಾಗಿ ಒಳಳ ದುಸ್ಥಿತಿಗೀಡಾಗಿ ಹಿಂದಿನ ಸಂದು ಕಂಗಾಲಾಗಿದ್ದಾರೆ. ಈ ಹಾನಿಯನ್ನು ತುಂಬಿಕೊಡುವುದಕ್ಕಾಗಿ ಹಿಂದುಸ್ತಾನ ಹಕ್ಕಿನಿಂದ ಕೇಳಬೇಕಾಗಿದೆ. ಆ ಅಧಿಕಾರ ಹಿಂದುಸ್ತಾನಕ್ಕಿದೆ ಈ ಬಗೆಯ ಭೌತಿಕ ಹಾನಿಗಳಲ್ಲದೆ ೧೯೪೩ ರಲ್ಲಿಯ ಬಂಗಾಲ ಬರಗಾಲದಲ್ಲಿ ಹಿಂದುಸ್ತಾನ ೩೦ ಲಕ್ಷ ಜನರನ್ನು ಕಳೆದುಕೊಂಡು ಸ್ವಲ್ಪವೂ ರಿಪೇರಿ ಮಾಡಲಿಕ್ಕಾಗದಂಥ ಬಲಿ ಕೊಡಬೇಕಾಯಿತು. ಈ ಹಾನಿಯನ್ನು ಹಣದ ಮೂಲಕ ಯಾರು ತುಂಬಿಕೊಳ್ಳಬಲ್ಲರು? ಇಷ್ಟು ಹಾನಿ ಸಹಿಸಿದ್ದು ಕಡಮೆಯೆಂದು ಎನಿಸಿದೆಯೊ ಏನೊ ಲಂಡನ 'ಟಾಯಿಮ್ಸ' ಇದಲ್ಲೂ ಹೆಚ್ಚು ಹುಚ್ಚುಚ್ಚಾದ ಸೂಚನೆ ಮತ್ತು ಬೇಡಿಕೆಗಳನ್ನು ಹಾಕಿದೆ. ಸ್ಟರ್ಲಿಂಗ ಸಾಲವನ್ನು ಕೇಳುವವರಾದರೆ, ಬ್ರಿಟಿಷ ಅಮೇರಿಕೆಯ ಒಪ್ಪಿಗೆಯಿಂದ ಇಂಥ ಹೇಳಿಕೆಗಳನ್ನೆಲ್ಲ ಏಕಪಕ್ಷೀಯವಾಗಿ ಸ್ವೀಕರಿಸಬಹುದು. ನಮ್ಮ ಮೇಲೆ ನಿರ್ಣಯಿಸಿಕೊಡಲು ಅಮೇರಿಕೆಯನ್ನು ನ್ಯಾಯಾಧೀಶರನ್ನಾಗಿ ಯಾರು ನೇಮಿಸಿದರು? ತನ್ನ ಕರದಾಯಿಗಳಿಂದ ಈ ಹಣವನ್ನು ಕೊಡಲು ಬ್ರಿಟನ್ನು ಅಸಮರ್ಥವಿದೆಂಬುದೆ ಇಂಥ ಧೋರಣ ವಹಿಸುವದಕ್ಕೆ ತಕ್ಕ ಕಾರಣವೆಂದು ಹೇಳಲಾಗುತ್ತದೆ. ಯಾವನೊಬ್ಬ ವ್ಯಕ್ತಿಯು ಅಸ್ತಿ ಮತ್ತು ಸಾಲದ ಲೆಕ್ಕವನ್ನು ನೋಡದೆ ಯಾವುದೊಂದು ಕೋರ್ಟು ದಿವಾಳಿಯ ಇಂಥ ಯೋಜನೆಯನ್ನು ಒಪ್ಪಬಹುದೊ? ಇಂಗ್ಲಂಡು ನೇರವಾಗಿ ಈ ಸಾಲವನ್ನು ಹಾರಿಸಿ ಬಿಡಲು ಬಯಸುತ್ತದೆ ನಾವೇನೊ ಅದರ ಅರ್ಥವನ್ನು ಗ್ರಹಿಸಬಹುದಾಗಿತ್ತು. ಆದರೆ ಈ ರೀತಿ ಅಯೋಗ್ಯ ಪ್ರತಿಪಾದನೆಗಳು ಮತ್ತು ಸೂಚನೆಗಳು ಬ್ರಿಟನದಂಥ ಅತಿ ಆರ್ಥಿಕಸಂಪನ್ನ ಜನಾಂಗಕ್ಕೆ ಎಂದಿಗೂ ಸಲ್ಲದು.

ಇಂಥ ಹೊಣೆಗೆಟ್ಟ ಪ್ರತಿಪಾದನೆಗಳನ್ನು ಮಂಡಿಸುವದೆಲ್ಲ ನಿಲ್ಲಬೇಕಾದರೆ ನಿಷ್ಪಕ್ಷಪಾತ ನ್ಯಾಯಮಂಡಲದಿಂದ ತೀರ್ಮಾನಿಸುವ ವಿಚಾರಣೆ ಅತ್ಯವಶ್ಯವಾಗಿದೆ. ಅಂಗ್ಲೆ ಚರ್ಚಿಲ್ ಮತ್ತು ಟಾಯಿಮ್ಸದಂಥವರಿಗೆ ತಮ್ಮ ಪಕ್ಷವನ್ನು ಮಂಡಿಸಲು ಸಂಧಿ ದೊರೆಯುವದು. ಇಂಥ ನಿಷ್ಪಕ್ಷಪಾತ ನ್ಯಾಯಮಂಡಲದ ವಿಚಾರಣೆ ನಡೆಯುವದು ಕಾಲವಿಲಂಬವಾಗದೆಂದು ನಾವು ನಂಬುತ್ತೇವೆ.

ಜೆ. ಸಿ ಕುಮಾರಪ್ಪಾ

ಆರೋಗ್ಯ ಮಾಪನ

ಆರೋಗ್ಯ ವ್ಯಕ್ತಿಯು ಅತ್ಯವಶ್ಯ ಸೊತ್ತು. ಪ್ರಜೆಗಳು ಆರೋಗ್ಯವನ್ನು ಆಲಕ್ಷಿಸುವದಕ್ಕೆ ವಶ ಕೊಡುವ ರಾಷ್ಟ್ರ ದುಃಸ್ಥಿತಿಗೀಡಾಗುವದು. ಹಿಂದುಸ್ತಾನದಲ್ಲಿ ಸ್ವಾತಂತ್ರ್ಯ ಸೂರ್ಯನು ಉದಯಿಸುವ ಈ ಕಾಲದಲ್ಲಿ ರಾಷ್ಟ್ರ ಮತ್ತು ರಾಷ್ಟ್ರದ ಪ್ರಜೆಗಳು ತಮ್ಮ ಆರೋಗ್ಯದಿಂದ ಮೇಲ್ಮಟ್ಟಕ್ಕೆ ಮುಟ್ಟುವಂತೆ ನೋಡಿಕೊಳ್ಳುವುದು ಹೆಚ್ಚು ಮುಖ್ಯ ಕರ್ತವ್ಯವಾಗಿ ಪರಿಣಮಿಸುತ್ತದೆ.

ಹಿಂದುಸ್ತಾನದ ಆರೋಗ್ಯ ಸಮಸ್ಯೆಯ ಮೂಲಕಾರಣಗಳಾವವುವೆಂಬುದನ್ನು ಕಳೆದ ಯುದ್ಧ ನಿಃಸಂಶಯವಾಗಿ ಸಿದ್ಧಮಾಡಿತೋರಿಸಿದೆ. ಬಡತನ, ಪೌಷ್ಟಿಕ ಆಹಾರ ಸಿಕ್ಕದಿರುವದು ಇವುಗಳಿಂದ ಅದು ಮುಖ್ಯವಾಗಿ ಪ್ರಾದುರ್ಭವಿಸುತ್ತವೆ. ಅಸ್ವಚ್ಛ ಪರಿಸ್ಥಿತಿಯಿಂದ ಉಂಟಾಗುವ ಕಾಲರಾ, ಪ್ಲೇಗು ಮೊದಲಾದವುಗಳಿಂದ ಪಿಡುಗುಗಳು ಮತ್ತು ಸಾಂಕ್ರಾಮಿಕ ರೋಗಗಳು ಹಬ್ಬುತ್ತವೆ. ಈ ಪಿಡುಗುಗಳಿಗೆ ಅನೇಕ ಜನರು ಬಲಿಯಾಗಿ ಮರಣ ಸಂಖ್ಯೆ ಹೆಚ್ಚುತ್ತದೆ. ಇದಲ್ಲದೆ ಅಜ್ಞಾನ ಮತ್ತು ಆಲಸ್ಯದ ಮೂಲಕ ಸಮಸ್ಯೆಗಳು ಮತ್ತಷ್ಟು ಜಟಿಲವಾಗುತ್ತವೆ. ಅಶಕ್ತ ಪ್ರಕೃತಿಯುಳ್ಳವರೆಂದು ಸಾಮಾನ್ಯವಾಗಿ ತಿರಸ್ಕರಿಸಲ್ಪಡುವ 'ರಿಕ್ರೂಟರು' ಹಲವು ದಿನ ಸೈನಿಕ ಶಿಬಿರಗಳಲ್ಲಿದ್ದು ಯೋಗ್ಯ ರೀತಿಯಿಂದ ಆಹಾರ ತೆಗೆದುಕೊಳ್ಳುವುದರಿಂದ ಆದರ್ಶಮಟ್ಟದಲ್ಲಿದ್ದ ಅವಶ್ಯಕ ಶರೀರ ಸ್ವಾಸ್ಥ್ಯವನ್ನು ಮುಟ್ಟಿದುಂಟು. ಮೊದಲನೆ ಮಹಾಯುದ್ಧದಲ್ಲಿ ಸೈನಿಕರು ಶಾರೀರಿಕಸಾಮರ್ಥ್ಯದಸಂಬಂಧದಲ್ಲಿ ಸೂಚಿಸಿದ ಕಿರಿದಾದ ಎತ್ತರ, ಸೈನಿಕ ತೂಕ ಮತ್ತು ಸ್ವಾಭಾವಿಕ ತಿರುಗು ಮೊದಲಾದವುಗಳಿಂದ ಸೈನಿಕ ವರ್ಗದ ಸಂಬಂಧದ ಮೂಢ ಕಲ್ಪನೆಗಳೆಲ್ಲ ಮಾಯವಾಗಿ ಹೋಗಿಬಿಟ್ಟವೆ. ಹಿಂದೀಯರ ಶಾರೀರಿಕ ಸ್ವಾಸ್ಥ್ಯ, ಹಿಂದಿನಶಿಕ್ಷಣ ಮತ್ತು ಅನುಭವಗಳಿಂದ ಅನುಕೂಲ ಪರಿಸ್ಥಿತಿಯುಳ್ಳ ಪಾಶ್ಚಾತ್ಯ ಸೈನಿಕರ ವೀರೋಚಿತ ಕಾರ್ಯಗಳಿಗಿಂತ ಯಾವ ರೀತಿಯಿಂದಲೂ ಕಡಿಮೆ ಇರಲಿಲ್ಲೆಂದು ನಿಃಸಂಶಯವಾಗಿ ಸಿದ್ಧವಾಗಿದೆ. ಸಾಮಾನ್ಯ ನಾಗರಿಕನು ಈ ಬಗೆಯ ಪರಿಣಾಮವನ್ನು ಸಂಪಾದಿಸಬೇಕಾದರೆ ಪ್ರಯತ್ನ ಮತ್ತು ದುಡ್ಡಿನ ಹೊರತು ಬೇರೆ ಯಾವ ಅಡಚಣೆಗಳೂ ಬರಲರಿಯವು.

ಹಿಂದುಸ್ತಾನದಲ್ಲಿ ಮಾನವರ ಆಯುರ್ಮರ್ಯಾದೆ ೨೭ ವರ್ಷ ಇದೆ. ಆದರೆ ಇಂಗ್ಲಂಡದ ಆಯುರ್ಮರ್ಯಾದೆ ೬೦ ಇರುವದು. ಹಿಂದುಸ್ತಾನದ ಬಾಲಮರಣದ ಸಂಖ್ಯೆ ಕೆಲವು ಪ್ರದೇಶಗಳಲ್ಲಿ ೧೦೦೦ ಕ್ಕೆ ೨೬೭ ರ ವರೆಗಿದೆ. ಇಂಗ್ಲಂಡದಲ್ಲಿ ಮಾತ್ರ ಈ ಸಂಖ್ಯೆ ಕೇವಲ ೩೦ ಇದೆ. ನ್ಯೂಝಿಲಂಡಿನಲ್ಲಿ ಕೇವಲ ೩೦ ಮಾತ್ರ. ಸರಾಸರಿ ಎತ್ತರ ತೂಕ ಮತ್ತು ಎದೆಯ ಅಳತೆ ಮೊದಲಾದವು ಬೇರೆ ಯಾವ ದೇಶಗಳಿಗಿಂತಲೂ ಹಿಂದುಸ್ತಾನದಲ್ಲಿ ಬಹಳ ಕಡಿಮೆಯಿರುವವು. ಜಟ್ಟಿಗಳನ್ನು ನಿರ್ಮಿಸಬೇಕೆಂಬ ಮಹತ್ವಾಕಾಂಕ್ಷೆ ನಮಗಿರದಿದ್ದರೂ ಹಿಂದುಸ್ತಾನದಲ್ಲಿಯ ಜನತೆಯ ಸರಾಸರಿ ತೂಕ, ಎತ್ತರ ಮತ್ತು ಎದೆಯಳತೆಗಳು ಉಳಿದ ರಾಷ್ಟ್ರಗಳಲ್ಲಿಯುಕ್ಕಿಂತ ಬಹಳ ಕೆಳಮಟ್ಟಗಿವೆ. ಅದರಿಂದ ಕಾಲಕಾಲಕ್ಕೆ ನಾವು ನಮ್ಮ ಜನತೆಯ ಸರಾಸರಿ ಅಳತೆಯನ್ನು ತೆಗೆದುಕೊಳ್ಳಬೇಕು.

ಇದಕ್ಕಾಗಿ ದೇಶದಲ್ಲೆಲ್ಲ 'ಆಯುರ್ಜ್ಞಾನ' ಪರಿಶೀಲನೆ ಪ್ರಾರಂಭವಾಗಲಿಕ್ಕೆ ಬೇಕು. ಈ ಪರಿಶೀಲನೆ ವಿಶಿಷ್ಟ ತಳಹದಿಯನ್ನಿಟ್ಟುಕೊಂಡು ನಡೆಯಬೇಕು. ಕೇಂದ್ರ ಆಯುರ್ಜ್ಞಾನ ಸಂಸ್ಥೆಯ ನೇತೃತ್ವದಲ್ಲಿ ಈ ಪರಿಶೀಲನೆ ನಡೆಯಬೇಕು. ಈ ಸಂಸ್ಥೆಯವರು ಎತ್ತರ, ತೂಕ, ಎದೆಯ ಹರವು, ರಕ್ತದ ಒತ್ತಡ ಶ್ವಾಸೋಚ್ಛ್ವಾಸ ಶಕ್ತಿಯು, ಹಿಮೊಗ್ಲೊಬಿನ್ ಪ್ರಮಾಣ, ಬಿಳಿರಕ್ತ ಕಣಗಳು, ಕೆಂಪುರಕ್ತ ಕಣಗಳು, ಸ್ನಿಗ್ಧತೆ ಸತ್ವಾಂಶ ಮೊದಲಾದವುಗಳು ಅಳತೆಯ ಪ್ರಮಾಣ ಮಟ್ಟವನ್ನು ಗೊತ್ತುಪಡಿಸಬೇಕು. ಇದಕ್ಕಾಗಿ ಕೆಲಮಟ್ಟಿಗೆ ಪ್ರಯೋಗಶಾಲೆಯ ವ್ಯವಸ್ಥೆ ಬೇಕಾಗುತ್ತದೆ. ಅದಕ್ಕಾಗಿ ದೊಡ್ಡ ಊರುಗಳಲ್ಲಿ ಮಾತ್ರ ಸಾಧ್ಯವಿದೆ. ಶಾರೀರಿಕ ಸ್ವಾಸ್ಥ್ಯವು ಮನಃಸ್ವಾಸ್ಥ್ಯವನ್ನವಲಂಬಿಸುತ್ತದೆ ಪ್ರೇಮ, ಸಹಕಾರ ಪರಹಿತನಿಷ್ಠೆ, ಸಂಯಮ ಮತ್ತು ಛಲ ಮೊದಲಾದವುಗಳ ಬಗೆಬಗೆಯ ಸ್ವರೂಪಗಳನ್ನು ನಿದರ್ಶನಗಳಿಂದ ಅಳೆಯುವದು ಶಕ್ಯವಿದೆ. ಆರೋಗ್ಯವಂತನಾದ ಮನುಷ್ಯನು ತನ್ನನ್ನು ಮತ್ತು ತನ್ನ ಕುಟುಂಬವನ್ನು ಸಂರಕ್ಷಿಸಲು ಶಾರೀರಿಕ ಯೋಗ್ಯತೆ ಮತ್ತು ಚಾರಿತ್ರ್ಯವುಳ್ಳವನಾಗಿರಬೇಕಷ್ಟೆ ಅಲ್ಲ ತನ್ನ ಕಾರ್ಯದಲ್ಲಿಯೂ ಯೋಗ್ಯನಾಗಿರಬೇಕು. ಅಲ್ಲದೆ ತನ್ನ ಸಮಾಜಕ್ಕೆ ಅತ್ಯುಚ್ಚ ಸೇವೆಯನ್ನು ಸಲ್ಲಿಸುವ ಯೋಗ್ಯತೆಯನ್ನು ಪಡೆದವನಾಗಿರಬೇಕು. ಪ್ರತಿಯೊಂದು ಪ್ರಾಂತಿಕ ರಾಜಧಾನಿಯಲ್ಲಿ ಇಂಥ ಆಯುರ್ಜ್ಞಾನ ಪ್ರಯೋಗ ಶಾಲೆಗಳಿರಬೇಕು. ಅಲ್ಲದೆ ಜಿಲ್ಹೆಯ ದೊಡ್ಡ ಸ್ಥಳಗಳಲ್ಲಿಯೂ ಇರಬೇಕು.

ಸಣ್ಣ ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಅವುಗಳ ಸಾಧನಸಂಪತ್ತಿಯ ಮರ್ಯಾದೆಯಲ್ಲಿಯೇ ಆಯುರ್ಜ್ಞಾನ ಉಪಾದೇಯ ಸಾಮಗ್ರಿಗಳನ್ನು ಸಿದ್ಧಮಾಡಬೇಕು. ಮತ್ತು ಸ್ಥಳೀಕ ಆರೋಗ್ಯ ಭಾಗ್ಯ ಪ್ರಗತಿ ಹೊಂದುತ್ತಿದೆಯೊ ಹೇಗೆಂಬುದನ್ನು ನಿರೀಕ್ಷಿಸಬೇಕು. ಇದಕ್ಕಾಗಿ ಹಳ್ಳಿಯ ಶಿಕ್ಷಕರ ಹತ್ತಿರ ಅಳತೆಯ ಹಿಂದುಗಳನ್ನಿಟ್ಟು ಕೊಡಬೇಕು. ತೂಕವನ್ನು ತಿಳಿದುಕೊಳ್ಳಲು ಹಳ್ಳಿಯಲ್ಲಿಯ ಸಾಮಾನ್ಯ ತಕ್ಕಡಿಯನ್ನು ಉಪಯೋಗಿಸಬೇಕು. ಹಳ್ಳಿಗಳಲ್ಲಿ ಆರೋಗ್ಯದ ಜಾಗ್ರತೆನ್ನುಯುಂಟು ಮಾಡುವದಕ್ಕಾಗಿ ಎತ್ತರ, ತೂಕ, ಎದೆಯ ಹರವು ಮೊದಲಾದವುಗಳ ಅಳತೆಯನ್ನು ಪಡೆಯುವದು ಅವಶ್ಯ. ಶಾರೀರಿಕ ಶಿಕ್ಷಣ ಸಂಸ್ಥೆಗಳು ಗರಡಿ ಸಂಸ್ಥೆಗಳು ಮೊದಲಾದವುಗಳ ನೇತೃತ್ವದಲ್ಲಿ ಹಳ್ಳಿಗಳಲ್ಲಿ, ತಾಲೂಕುಗಳಲ್ಲಿ, ಜಿಲ್ಹೆಗಳಲ್ಲಿ ಸ್ಪರ್ಧೆಗಳನ್ನಿಡಬೇಕು. ಈ ಬಗೆಯ ಸ್ಪರ್ಧೆಗಳನ್ನಿಡುವದರಿಂದ ಅಂಕಿಸಂಖ್ಯೆಗಳನ್ನು ತಿಳಿದುಕೊಳ್ಳಲು ಉಪಯುಕ್ತ ಸಾಧನ ಸಾಮಗ್ರಿಗಳು ದೊರೆತಂತಾಗುವದು.

ನಗರಗಳಲ್ಲಿಯ ಕುಟುಂಬಗಳಿಗಾಗಿ ಎಂದು ಸೂಚಿಸಲ್ಪಟ್ಟ ಆರೋಗ್ಯ ಕೇಂದ್ರಗಳ ಸಹಾಯವನ್ನು ಗ್ರಾಮಪ್ರದೇಶಗಳಲ್ಲಿಯೂ ಪಡೆಯಬಹುದು. ಒಂದು ಕುಟುಂಬವನ್ನೇ ಘಟಕವನ್ನಾಗಿಟ್ಟುಕೊಂಡು ಕಾರ್ಯ ನಡೆಸುವ ಕೇಂದ್ರಗಳ ಉದ್ದೇಶ ಶಾಲೆಗಳಲ್ಲಿಯ ವಿದ್ಯಾರ್ಥಿಗಳ ಹಾಗೆ ಆಸ್ಪತ್ರಿಗಳಲ್ಲಿಯ ಚಿಕ್ಕಮಕ್ಕಳ ಮತ್ತು ಬಾಲಶೂಶ್ರೂಷಾಗೃಹಗಳಲ್ಲಿಯ ಮಕ್ಕಳ ವೈದ್ಯಕೀಯ ಪರೀಕ್ಷೆಯನ್ನು ನಡೆಸುವದಾಗಿದೆ. ಅಲ್ಲದೆ ಸಾಮಾನ್ಯ ಕೂಲಿಯವರಿಗೆ ಮತ್ತು ಅವನ ಹೆಂಡತಿಗೆ ಆರೋಗ್ಯ ಸಮಸ್ಯೆಗಳಲ್ಲಿ ಸಹಾಯ ಮಾಡುವದೂ ಅವುಗಳ ಕೆಲಸ. ಆರೋಗ್ಯ ಪರಿಶೀಲನೆಯನ್ನು ನಡೆಸುವದಕ್ಕಾಗಿ ಮತ್ತು ಸುಂದರವಾದ ಆರೋಗ್ಯ ಉಪಾದೇಯ ಸಾಮಗ್ರಿಗಳನ್ನು ಕಲೆ ಹಾಕಲು ಬೇರೆ ಬೇರೆ ಹಳ್ಳಿಗಳಿಗೆ ಸಂಚಾರಕ ಅಧಿಕಾರಿಗಳನ್ನು ಈ ನಗರ ಆರೋಗ್ಯ ಕೇಂದ್ರಗಳು ಕಳಿಸಬಹುದು. ಸರಕಾರಿ ಮತ್ತು ಮ್ಯುನಿಸಿಪಾಲಿಟಿ ಶಾಖೆಗಳ ಸಹಾಯ ಸಹಕಾರಗಳಿಂದ ಮತ್ತು ಕೇಂದ್ರ ಹಾಗು ಪ್ರಾಂತಿಕ ಅಧಿಕಾರೇತರ ಆಯುರ್ಜ್ಞಾನ ಸಂಸ್ಥೆಯ ನೇತೃತ್ವದಲ್ಲಿ ಕೆಲಸ ಮಾಡುವ ಇಂಥ ಆರೋಗ್ಯ ಕೇಂದ್ರಗಳು ಇಲ್ಲವೆ ಆರೋಗ್ಯಧಾಮಗಳು ಆರೋಗ್ಯ ಮಾಪನದ ವಿಶ್ವಾಸಾರ್ಹ ದಾಖಲೆಗಳನ್ನಿಡಬಲ್ಲವು. ಈ ದಾಖಲೆಗಳಿಂದ ಇತರ ದೇಶಗಳೊಡನೆ ಹಿಂದುಸ್ತಾನದ ಪ್ರಮಾಣ ಮತ್ತು ಸರಾಸರಿಯನ್ನು ಹೋಲಿಸಿ ತಿಳಿದುಕೊಳ್ಳಬಹುದು. ಮತ್ತು ಬೇರೆ ಬೇರೆ ಪ್ರದೇಶಗಳಿಗಾಗಿ ಹಾಗು ಇಡೀ ದೇಶಕ್ಕಾಗಿ ಹೊಸ ಪ್ರಮಾಣವನ್ನು ಸೂಚಿಸಬಹುದು. ಮುಂಬಯಿ ನ್ಯೂಕ್ವೀನ್ಸ ರೋಡಿನಲ್ಲಿ ಪರೇಲ ಹೌಸಿನಲ್ಲಿರುವ ಗುಜರಾಥ ಸಂಶೋಧನ ಸಂಸ್ಥೆಯವರು ಮೇಲೆ ವಿವರಿಸಿದ ಉಚ್ಚ ಧ್ಯೇಯಗಳನ್ನಿಟ್ಟುಕೊಂಡು ಆರೋಗ್ಯ ಕೇಂದ್ರವನ್ನು ತೆರೆದಿದ್ದಾರೆ. ಸಂಪೂರ್ಣ ಆರೋಗ್ಯ ಪರಿಶೀಲನೆಯ ಚಿಕಿತ್ಸೆ ಪಡೆಯುವ ಕುಟುಂಬಗಳಿಗೆ ಏನು ವೆಚ್ಚ ತೆಗೆದುಕೊಳ್ಳದೆ ಸದ್ಯಕ್ಕೆ ವೈದ್ಯಕೀಯ ಪರೀಕ್ಷೆ ನಡೆಸಿ ಸಲಹೆ ಕೊಡಲಾಗುತ್ತದೆ. ಈ ಕುಟುಂಬದವರು ಪ್ರಯೋಗಶಾಲೆಯಲ್ಲಿಯ ನಿದಾನವನ್ನು ಮತ್ತು ಪಥ್ಯವನ್ನು ಅನುಸರಿಸಬೇಕಾಗುವದು. ಮಾತೃಭೂಮಿಯಲ್ಲಿಯ ಉಳಿದ ಜಾಗೆಗಳಲ್ಲಿಯೂ ಇಂಥ ಸ್ವಯಂಪ್ರೇರಿತ ಪ್ರಯತ್ನಗಳು ನಡೆಯಲೆಂದು ಆಶಿಸಲಾಗಿದೆ.

ಮುಂಬಯಿ

೨೭-೧-೪೭

ಪಿ. ಜಿ. ಶಹಾ

ಮನಗಾಣಿಕೆಯಾದರೆ ನಿಮ್ಮ ಮಾತನ್ನೆ ಕೇಳುವೆ

"ವಾತ್ಸಲ್ಯಪೂರ್ಣ ಮಾತುಕತೆಗಾಗಿ ಸಂದರ್ಶನ ಕೇಳುವ ಶ್ರೀ ಎ. ಕೆ. ಫಜಲುಲ ಹಕ್ಕರ ತಂತಿಗೆ ಮಹಾತ್ಮಾ ಗಾಂಧಿಯವರು ಕೆಳಗಿನ ತಂತಿಯನ್ನು ಕಳುಹಿದ್ದಾರೆ.

ನಿಮ್ಮ ತಂತಿಗಾಗಿ ನಾನು ಉಪಕೃತ. ಪ್ರಸಿದ್ಧಪಡಿಸಿದ ಸಂಚಾರ ಕಾರ್ಯಕ್ರಮದಲ್ಲಿ ನನಗೆ ಬೇಕಾದಲ್ಲಿ ಭೆಟ್ಟಿಯಾಗಿರಿ. ನಮ್ಮ ಹಿಂದಿನ ಸ್ನೇಹಕ್ಕೆ ಒಪ್ಪುಹಾಕೋಣ ಮನಗಾಣಿಕೆಯಾದರೆ ನಾನು ನಿಮ್ಮ ಮಾತಿನಂತೆ ವರ್ತಿಸುತ್ತೇನೆ.

ನೆಲಗಡಲೆ, ಮಾವಿನಗೊರಟು ಮತ್ತು ರಾಜಕಾರಣ

(೫ ನೇ ಪುಟದಿಂದ ಬಂದುದು)

ಅಸ್ಪೃಶ್ಯರಿಗೂ ಸವರ್ಣ ಹಿಂದುಗಳಿಗೂ ಇವರು ಅಂತರಾಳ ಮುಚ್ಚುತಿದೆ ಸಾವಿರಾರು ವರ್ಷಗಳಿಂದ ಅಸ್ಪೃಶ್ಯರಿಗೆ ಪ್ರವೇಶವಿಲ್ಲದಿದ್ದ ಪವಿತ್ರ ದೇವಸ್ಥಾನಗಳನ್ನು ಅವರಿಗೆ ತೆರೆದಿಕ್ಕುವಂತೆ ಗಾಂಧಿ ಮಾಡಿದ್ದಾರೆ.

"ನಾನೂ ಒಬ್ಬ ಅಸ್ಪೃಶ್ಯ," ಗಾಂಧಿ ನನಗೆ ಹೇಳಿದರು. ಜಾತ್ಯಾ ಅವರು ಅಸ್ಪೃಶ್ಯರಲ್ಲ, ಮೇಲ್ಜಾತಿಯವರು. ಆದರೆ ಇತರ ಹಿಂದುಗಳಿಗೆ ಹಾದಿ ತೋರಿಸಲು ಅವರು ತಾವೂ ಅಸ್ಪೃಶ್ಯರೆನ್ನುವರು. "ನಾನು ಹಿಂದು, ನಾನು ಮುಸಲ್ಮಾನ, ನಾನು ಕ್ರಿಶ್ಚನ್, ಯಹೂದ್ಯ, ಬೌದ್ಧ," ಎಂದರವರು.

ಗಾಂಧಿಯವರ ಸಮ್ಮುಖಕ್ಕೆ ಬಂದೊಡನೆ ಹಿಂದೀಯರು ಬಾಗಿ ನಮಸ್ಕರಿಸುವರು. ಇದಕ್ಕೆ ಅಪವಾದ ವಿರಳ. ಸಾಮಾನ್ಯವಾಗಿ ಅವರು ಇವರ ಪಾದಗಳನ್ನು ಮುಟ್ಟುವರು. ಎಷ್ಟೋ ವೇಳೆ ಗಾಂಧಿಯವರು ಅವರ ಬೆನ್ನ ಮೇಲೊಂದು ಗುದ್ದು ಬೇಡವೆನ್ನುವರು. ಆ ಮೇಲೆ ಅವರ ನೆಲದ ಮೇಲೆ ಕೂಡುವರು ಮತ್ತು ಸಂದರ್ಶನ ಆರಂಭವಾಗುವದು. ಮನೆಯಲ್ಲಿರುವರಾರ ಏನಾದರೂ ಬಂದು ಕೇಳಬಹುದು. ಗಾಂಧಿಯವರು ಹೊರಗೆ ಬಂದಾಗ (ಅವಕ್ಕೆ ಬಾಗಿಲುಗಳೇ ಇಲ್ಲ.) ಹತ್ತಾರು ಜೋಡು ಕಣ್ಣುಗಳು ಕಾಯುವದನ್ನು ನಾನು ಬಹಳ ಸಲ ಕಂಡಿದ್ದೇನೆ. ನಾನೂ ಕಾಲ್ಮರಿ ಕಳಚಿ ಅವರನ್ನು ಕೂಡಿಕೊಳ್ಳುತ್ತಿದ್ದುದುಂಟು. ಆದರೆ ಸಾಮಾನ್ಯವಾಗಿ ಮಾತುಕತೆ ಮಾತ್ರ ಗಾಂಧಿಗೂ ಅವರನ್ನು ಕಾಣಬಂದ ವ್ಯಕ್ತಿಗೂ ಮಾತ್ರವೇ ಸೀಮಿತವಾಗಿರುತ್ತದೆ.

ಹಿಂದೀ ಪ್ರಾಂತಗಳ ಕಾಂಗ್ರೆಸ ಮುಖ್ಯ ಮಂತ್ರಿಗಳು ಅವರೆಡೆಗೆ ಸಲಹೆ ನಿರ್ದೇಶಗಳಿಗಾಗಿ ಬರುತ್ತಾರೆ; ಶಿಕ್ಷಣಜ್ಞರು ತಮ್ಮ ವಿಚಾರಗಳ ಪರೀಕ್ಷೆಗಾಗಿ ಅವರಲ್ಲಿಗೆ ಬರುತ್ತಾರೆ; ಏನಾದರೂ ಹೊಸ ಯೋಜನೆಯಿದ್ದವರೆಲ್ಲ— ಹಿಂದುಸ್ತಾನದಲ್ಲಿ ಯಾರಿಗಿಲ್ಲ? —ಅವರ ಆಶೀರ್ವಾದಗಳನ್ನು ಕೋರುತ್ತಾರೆ; ಜನರು ತಮ್ಮ ಆಪ್ತ ಸಮಸ್ಯೆಗಳನ್ನು ಬಿಡಿಸುವಲ್ಲಿಯೂ ಅವರ ಸಹಾಯ ಕೇಳುವದುಂಟು. ನಾನು ಅಲ್ಲಿದ್ದಾಗ, ಮದುವೆಯಲ್ಲಿ ಸುಖ ಕಾಣದ ಅಸ್ಪೃಶ್ಯ ದಂಪತಿಯೊಂದು ತಮ್ಮ ವಿಷಾದ ಕಥೆಗಳನ್ನು ತೆಗೆದುಕೊಂಡು ಅವರೆಡೆ ಬಂದು ಅವರ ಸಮಯ ಕಳೆದರು. ರೈತರೂ ಕೂಲಿಕಾರರೂ ಅವಶ್ಯ ಆರ್ಥಿಕ ಸಾಮಾಜಿಕ ಸುಧಾರಣೆಗಳಿಗೆ ಸಹಾಯ ಕೇಳಲಿಕ್ಕೂ ಬರುತ್ತಾರೆ.

ಅವರ ಚೈತನ್ಯ ಕಂಡು ನಾನು ಬೆರಗಾದೆ. ಅವರು ಹನ್ನೆರಡಕ್ಕಿಂತ ಮೊದಲು ಮಲಗುವದೇ ಇಲ್ಲ; ಆದರೂ ಅವರು ಮಾಳಿಗೆಯ ಮೇಲೆ ನಿದ್ದೆಗೆ ಸಿದ್ಧರಾಗಿ ಮಲಗಿದ್ದಾಗ ನಾನೆಲ್ಲಾದರೂ ಹತ್ತಿರ ಹಾದುಹೋದರೆ ಅವರು ನನ್ನೊಡನೆ ಏನಾದರೆ ಚಾಟೂಕ್ತಿಗಳನ್ನು ಆಡುತಿದ್ದರು. ಇಲ್ಲವೆ ಹೆಚ್ಚು ಪ್ರಾರ್ಥಿಸಿದರೆ ಒಳ್ಳೆ ನಿದ್ದೆ ಹತ್ತದೆಂದು ಉಪದೇಶಿಸುತಿದ್ದರು. ಮುಂಜಾನೆ ಪ್ರಾರ್ಥನೆಗೆ ಸಿದ್ಧನಾಗೇಳುವದು ನನ್ನಿಂದಾಗುತಿರಲಿಲ್ಲ; ಒಮ್ಮೊಮ್ಮೆ ಸಾಯಂ ಪ್ರಾರ್ಥನೆಗಳಿಂದಲೂ ತಪ್ಪಿಸಿಕೊಳ್ಳುತಿದ್ದೆ. ಅದಕ್ಕೆ ನೂರಾರು ಏಕೆ ಸಾವಿರಾರು ಜನ ನೆರೆಯುತಿದ್ದರು. ಮಳೆ ಜುಳುಜುಳು ಸುರಿಯುತಿದ್ದರೂ ನಿಂತು ಪ್ರಾರ್ಥನೆ ಮುಗಿಸುತಿದ್ದರು. ಗಾಂಧಿಯೂ ಹಾಗೆಯೆ.

೩

ಗಾಂಧಿ ಪರಮ ಧಾರ್ಮಿಕರು. ಅವರ ಧರ್ಮದ ತಿರುಳೆಂದರೆ ದೇವರಲ್ಲಿ ವಿಶ್ವಾಸ, ತಾವು ದೇವರ ನಿಮಿತ್ತರಾದುದರಿಂದ ಆತ್ಮವಿಶ್ವಾಸ ಮತ್ತು ಪರದಲ್ಲಿ ಸಾಕ್ಷಾತ್ಕಾರಕ್ಕೂ ಇಹದಲ್ಲಿ ಸುಖ ಶಾಂತಿಗೂ ಅಹಿಂಸೆಯ ಸಾಧನದಲ್ಲಿ ವಿಶ್ವಾಸ. ಅಹಿಂಸೆಯ ವಿಶ್ವಾಸವೇ ಅವರ ಎಲ್ಲ ರಾಜಕೀಯ ಆಚಾರವಿಚಾರ ಉಚ್ಚಾರಗಳನ್ನು ರೂಪಿಸುತ್ತದೆ.

ಕ್ರಿಸ್ತ ಧರ್ಮದ ಅಧಃಪಾತ

ಅನೇಕ ಸಲ ಗಾಂಧಿ ಎರಡು ಮಹಾಯುದ್ಧಗಳ ಮಾತೆತ್ತಿದರು. ಅಹಿಂಸೆಯನ್ನೇಕೆ ನೀವು ಪಶ್ಚಿಮ ದೇಶಗಳಿಗೆ ಬೋಧಿಸುವದಿಲ್ಲೆಂದು ಕೇಳಿದೆ. "ನಾನೊಬ್ಬ ಬಡ ಪೌರ್ವಾತ್ಯ ಜನ," ಎಂದು ಗಾಂಧಿಯ ಉತ್ತರ "ಆದರೆ ಏಸುವೂ ಪೌರ್ವಾತ್ಯನೆ. ನಾನು ಯೇಸುವಿನ ಶಿಷ್ಯ ಯೇಸುವಿನ ಸತ್ವ ಅಪಾರವಾಗಿತ್ತು; ಅದು ಪ್ರೇಮಸತ್ವ. ಅವನಿಗೆ ಅಹಿಂಸೆಯಲ್ಲಿ ವಿಶ್ವಾಸವಿತ್ತು. ಕಾನ್‌ಸ್ಟಂಟಾಯಿನನ ಕಾಲದಲ್ಲಿ ಅದು ರಾಜರ ಧರ್ಮವಾದಾಗ ಕ್ರಿಸ್ತಧರ್ಮ ವಿಕೃತವಾಯಿತು. ಮಧ್ಯಯುಗದಲ್ಲೆಲ್ಲ ಅದು ಬರ್ಬರತೆಯಾಗಿತ್ತು.

"ಅಹಿಂಸೆಯನ್ನು ಪಾಶ್ಚಾತ್ಯರಿಗೆ ನಾನೆಂತು ಕಲಿಸಲಿ?" ಗಾಂಧಿ ಮುಂದುವರಿಸಿದರು. "ನಾನಿನ್ನೂ ಹಿಂದುಸ್ತಾನವನ್ನು ಕೂಡ ಮನಗಾಣಿಸಲು ಸಮರ್ಥನಾಗಿಲ್ಲ. ನಾನೊಂದು ಅರಿದ ಕೆಂಡ." ತಮ್ಮ ದೇಶದ ತರುಣರ ರಕ್ತ ಉಗ್ರ, ಸಹನಾಶೂನ್ಯ, ಕ್ರಾಂತಿಕಾರಕವೆಂದು ಅವರಿಗೆ ಗೊತ್ತಾಗಿದೆ. ಶಾಂತಿಯಿಂದ ಅಧಿಕಾರತ್ಯಾಗ ಮಾಡಲು ಬ್ರಿಟಿಶರು ಒಪ್ಪದೆ ಹೋಗಿದ್ದರೆ ಹಿಂದೀ ಉಪಖಂಡವನ್ನೆಲ್ಲ ವ್ಯಾಪಿಸಿ ಜ್ವಾಲೆಯೊಂದು ವಿದೇಶಿ ಪ್ರಭಾವದ ಕೋಟೆ ಕೊತ್ತಲಗಳನ್ನು ಸುಟ್ಟು ಬೂದಿ ಮಾಡುತಿತ್ತು. ಬಿಳಿ ಮನುಷ್ಯನ ಭಾರಹೊತ್ತು ಏಶಿಯಾಕ್ಕೆ ಸಾಕಾಗಿ ಹೋಗಿದೆ.

ಗಾಂಧಿಯ ಜೀವನ ದೇಶದ ಸ್ವಾತಂತ್ರ್ಯಕ್ಕೆ ಮೀಸಲಾಗಿದೆ. ಆದರೆ ಹಿಂಸೆಯಿಂದ ಅದನ್ನು ಸಾಧಿಸಲು ಅವರಿಗೆ ಮನಸ್ಸಿಲ್ಲ. ಇದೀಗ ಅವರಿಗೂ ಕಾಂಗ್ರೆಸ್ಸಿನ ಸಾಮ್ಯವಾದಿ ಗುಂಪಿಗೂ ಇರುವ ಭಿನ್ನಾಭಿಪ್ರಾಯ. "ಆತ ಹುಟ್ಟಿದ ಮೊದಲೇ ನಾನು ಸಾಮ್ಯವಾದಿಯಾಗಿದ್ದೆ," ಎಂದು ನಲುವತ್ತೈದರ ವಯಸ್ಸಿನ ಸಾಮ್ಯವಾದಿ ನಾಯಕ ಜಯಪ್ರಕಾಶ ನಾರಾಯಣರನ್ನು ಕುರಿತು ಗಾಂಧಿ ಹೇಳಿದರು. ಜಯಪ್ರಕಾಶರ ವ್ಯಕ್ತಿತ್ವ ಬೆರಗುಗೊಳಿಸುವಂಥದು ಗಾಂಧಿಗೆ ಅವರ ಮೇಲೆ ಬಹಳ ಪ್ರೀತಿ; ಅವರೂ ಗಾಂಧಿಯನ್ನು ಭಕ್ತಿಯಿಂದ ಕಾಣುತ್ತಾರೆ. ಆದರೆ ಗಾಂಧಿ ಪ್ರಾರಂಭಿಸಿದ ೧೯೪೨ ರ ಅವಿನಯ ಶಾಸನ ಭಂಗದಲ್ಲಿ ಜಯಪ್ರಕಾಶರ ಮುಂದಾಳ್ತನದಲ್ಲಿ ಹಿಂದೀ ಸಾಮ್ಯವಾದಿಗಳು ಹಿಂಸಾತ್ಮಕ ರೀತಿಗಳನ್ನು ಪ್ರಯೋಗಿಸಿದರು. ಇದೆಲ್ಲ ಗಾಂಧಿಯ ಅಹಿಂಸಾಶಾಸ್ತ್ರದಲ್ಲಿ ನಿಷಿದ್ಧ.

ಘಟನಾತ್ಮಕ ರೀತಿಗಳಿಂದಲೇ ಸ್ವಾತಂತ್ರ್ಯ ಗಳಿಸಲು ಸರ್ವಪ್ರಯತ್ನ ಮಾಡಬೇಕೆನ್ನುವರು ಗಾಂಧಿಯವರು. ಅವರು ಬ್ರಿಟಿಶರ ಉದ್ದೇಶವನ್ನು ಪೂರ್ತಿ ನಂಬುವರೆಂದಲ್ಲ; ಆದರೂ ಬ್ರಿಟಿಶರ ಅಭಿಪ್ರಾಯ ದುಷ್ಟವಲ್ಲೆಂದು ಅವರೆಣಿಕೆ. ಸಾಮ್ಯವಾದಿಗಳಿಗೆ ಬ್ರಿಟಿಶರ ಮೇಲೆ ಸಂದೇಹ. ಅವರು ಕೊನೆಯ ಹಿಂಸಾತ್ಮಕ ಶಕ್ತಿಪರೀಕ್ಷೆಗೆ ಸಿದ್ಧರಾಗಿದ್ದಾರೆ.

ಹೀಗೆ ಸಾಮ್ಯವಾದಿಗಳ ರಾಷ್ಟ್ರೀಯ ಸ್ವಾತಂತ್ರ್ಯಾಪೇಕ್ಷೆಯು ಜನಕರೂ ಸಾಮ್ಯವಾದಿ ಧ್ಯೇಯದಲ್ಲಿ ವಿಶ್ವಾಸವುಳ್ಳವರೂ ಆದ ಗಾಂಧಿಯವರಿಗೂ ಅವರಿಗೂ ಬಡಿದಾಟ.

ವಿಷಣ್ಣ ಗಾಂಧಿ

ಅವರ ದೇಶ ಸ್ವಾತಂತ್ರ್ಯಕ್ಕೆ ಸಮೀಪಿಸತೊಡಗಿದ್ದರೂ ೧೯೪೨ ರಲ್ಲಿ ನಾನು ಅವರನ್ನು ಕಂಡಾಗಿದ್ದುದಕ್ಕಿಂತ ಗಾಂಧಿ ವಿಷಣ್ಣರಾಗಿದ್ದರೆಂದು ಈ ಬಾರಿ ನನಗೆನಿಸಿತು. ಹಿಂದುಸ್ತಾನ ಬಲದಿಂದ ಸ್ವಾತಂತ್ರ್ಯ ಗಳಿಸಿಕೊಂಡರೆ ಅದೇ ಬಲವು ಹಿಂದೀಯರಿಂದ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಿಕ್ಕೂ ವಿನಿಯೋಗಿಸಲ್ಪಡಬಹುದೆಂದು ಅವರಿಗೆ ಚಿಂತೆ ಹತ್ತಿದೆ.

ಗಾಂಧಿಯವರು ಜಪಾನಿ ವಿರೋಧಿ, ನಾಜಿ ವಿರೋಧಿಯಾಗಿದ್ದರು. ಆದರೆ ವಿಜಯಿ ರಾಷ್ಟ್ರಗಳಿಗೆ ಆಯುಧ ಶಕ್ತಿಯನ್ನೆ ಅವಲಂಬಿಸಿ ಶಾಂತಿಯನ್ನು ಸ್ಥಾಪಿಸುವದು ಸಾಧ್ಯವಿಲ್ಲೆಂದರಿತು ಅವರು ಯುದ್ಧಕ್ಕೇ ವಿರೋಧಿಗಳಾದರು. ಸದ್ಯ ಧ್ಯೇಯಕ್ಕಿಂತ ಅವರ ದೃಷ್ಟಿ ದೂರದರ್ಶಿಯಾಯಿತು. ಜಗತ್ತನ್ನು ಸರ್ವಾಧಿಕಾರಿತ್ವದ ಗಂಡಾಂತರ ಆವರಿಸಿರುವಂತೆ ಅವರಿಗೆ ಕಾಣುತ್ತದೆ.



ಕಲ್ಲಿದ್ದಲಿ ಬಿಕ್ಕಟ್ಟು

ಗುಣಕ್ಕೆ ಮತ್ಸರವಿಲ್ಲ. ಶೂನ್ಯಾಂಶಕ್ಕಿಂತಲೂ ಕೆಳಗಿನ ಅತ್ಯುಗ್ರ ಚಳಿಯಲ್ಲಿ, ಮುಚ್ಚಿ ಮುಸುಕಿದ ಮಂಜಿನಲ್ಲಿ ಒದಗಿದ ಅತಿಭೀಕರವಾದ ಕಲ್ಲಿದ್ದಲಿ ಬಿಕ್ಕಟ್ಟನ್ನು ಬ್ರಿಟಿಶ ಜನರಂತೆ ತಾಳಿಕೊಂಡು ಜಯಶೀಲವಾಗಬಲ್ಲ ರಾಷ್ಟ್ರಗಳು ಜಗತ್ತಿನಲ್ಲಿ ಬಹಳವಿರಲಿಕ್ಕಿಲ್ಲ. ಇಡಿ ರಾಷ್ಟ್ರವೇ ಒಬ್ಬನಂತೆ ಎದ್ದು ನಿಂತು ಸರಕಾರದ ಬೆಂಬಲಕ್ಕೆ ನಿಂತಿತು. ಗೃಹಿಣಿಯರು, ಕಾರಖಾನೆದಾರರು ಒಂದೇ ವಾರದಲ್ಲಿ ಸಾವಿರಗಟ್ಟಲೆ ಟನ್ ಕಲ್ಲಿದ್ದಲಿ ಉಳಿಸಿದರು. ಕೆಲಸವಿಲ್ಲದ ಕೂಲಿಕಾರರು ಮಂಜಿನ ರಾಶಿಯನ್ನು ಬಳಿದರು. ಗಣಿ ಕೂಲಿಕಾರರು ಇಮ್ಮಡಿ ಹುಮ್ಮಸಿನಿಂದ ಕಲ್ಲಿದ್ದಲಿ ಅಗೆಯಲು ಸಿದ್ಧರಾಗಿದ್ದಾರೆ. ಇಡಿ ಇಂಗ್ಲಂಡೇ ಯುದ್ಧಕಾಲದ ಸ್ಥಿತಿಗೆ ಸಿದ್ಧವಾಯಿತು. ಹೀಗೆ ಕಲ್ಲಿದ್ದಲಿ ಬರಗಾಲ ಈಗ ತುಸು ತುಸು ಸುಧಾರಿಸಿದೆ. ಟೋರಿ ರಾಜಕಾರಣಿಗಳು ಎಷ್ಟು ಪ್ರಚಾರ ಮಾಡಿದರೂ ಕೂಲಿಕಾರ ಸರಕಾರ ದಿಕ್ಕೆಡಲಿಲ್ಲ. ಸರಕಾರವನ್ನೆ ಹೊಕ್ಕ ಸಾಮ್ಯವಾದಿ ಯೋಜನೆಗಳನ್ನು ತಲೆಕೆಳಗು ಮಾಡಲು ಆಶಿಸಿದವರ ಆಸೆಗೆ ಮಣ್ಣು ಬಿತ್ತು. ಹೇಳಿದರು ಮುಖ್ಯಮಂತ್ರಿ ಅಟ್ಲಿ: "ಸಂಯುಕ್ತ ಮಂತ್ರಿಮಂಡಲದ ಸ್ಥಾಪನೆಯ ಸುದ್ದಿಗೆ ಹೋಲೇ ಇಲ್ಲ. ಜನತೆ ಸಾಮ್ಯವಾದಿ ಕಾರ್ಯಕ್ರಮದ ಆದೇಶವನ್ನು ಮತಪೆಟ್ಟಿಗೆಗಳಲ್ಲಿ ಕೊಟ್ಟಿದೆ. ಯಾರಿಗಾದರೂ ಮಂತ್ರಿಮಂಡಲದಲ್ಲಿ ಸೇರುವ ಆಸೆಯಿದ್ದರೆ ಅವರು ಸಾಮ್ಯವಾದಿಯೋಜನೆಗಳನ್ನು ಅಂಗೀಕರಿಸಬೇಕಾಗುವದು"!

ಫ್ರೆಂಚರ ನಿಜರೂಪ

ವ್ಹಿಟನಾಮ ರಾಷ್ಟ್ರೀಯರೊಡನೆ ಹೋರಾಟ ಪ್ರಾರಂಭವಾದಾಗ ಫ್ರೆಂಚ ಮಂತ್ರಿಗಳು ಹೇಳುತಿದ್ದರು, "ಶಾಂತಿಯನ್ನು ಸ್ಥಾಪಿಸುವದೇ ನಮ್ಮ ಉದ್ದೇಶ, ಸಂಧಾನಕ್ಕೆ ನಾವು ಸಿದ್ಧರೇ" ಎಂದು. ಫ್ರೆಂಚ ವಿಮಾನ ಮತ್ತು ಯುದ್ಧೋಪಕರಣಗಳ ಭಾರದಿಂದ ಇಂಡೋಚೈನಿ ರಾಷ್ಟ್ರೀಯರು ಜರ್ಜರಿತರಾಗಿ ಹಿಂತೆಗೆಯಬೇಕಾಗಿ ಬಂದ ಮೇಲೆ ಫ್ರೆಂಚರ ದನಿ ಹೆಚ್ಚು ಉದ್ಧತವಾಯಿತು: "ಮೊದಲು ಮಿಲಿಟರಿ ನಿರ್ಣಯ ಆ ಮೇಲೆ ಸಂಧಾನ ಪ್ರಯತ್ನ." ಈಗ ಮಿಲಿಟರಿ ವಿಜಯ ನಿಶ್ಚಿತವೆಂದಾದ ಮೇಲೆ, "ವ್ಹಿಟನಾಮಿಗೆ ಫ್ರೆಂಚ ಒಕ್ಕೂಟದೊಳಗೆ ಸ್ವಾತಂತ್ರ್ಯ ಕೊಡುವ ನಮ್ಮ ಧ್ಯೇಯ ಹಾಗೆಯೆ ಇದೆ. ಆದರೆ ಡಾ. ಹೋಚಿ ಮಿನ್ಹರ ಸರಕಾರದೊಡನೆ ನಾವು ಏನೂ ಸಂಬಂಧ ಇಟ್ಟುಕೊಳ್ಳಲಿಕ್ಕಿಲ್ಲ. ಅವರಲ್ಲಿ ಕೊಟ್ಟ ಮಾತನ್ನು ನಡೆಸುವ ಸಾಮರ್ಥ್ಯವಿಲ್ಲ!" ಎಂದು ಫ್ರೆಂಚ ಸಾಮ್ಯವಾದಿ ಮುಖ್ಯಮಂತ್ರಿ ರಾಮಡೀರರು ಸಾರಿದ್ದಾರೆ. ರಾಷ್ಟ್ರೀಯರನ್ನು ಹಣಿದು

(೧೧ ನೇ ಪುಟ ನೋಡಿರಿ)

ಗಾಂಧಿಯವರಿಗೆ ಸಾಧನವೇ ಮುಖ್ಯ. ಪ್ರಜಾತಂತ್ರ ಸಾಧನದ ನ್ಯಾಯ್ಯತೆಯನ್ನೆ ಅವಲಂಬಿಸಿದೆ. ಗಾಂಧಿ ಶುದ್ಧ ಪ್ರಜಾತಂತ್ರವಾದಿ. ಸಾಧನಗಳು ಪಾಪಮಯವಾಗಿದ್ದರೆ ಸಾಧ್ಯವನ್ನೇ ತ್ಯಜಿಸಲು ಅವರು ಸಿದ್ಧ.

ಆದರೆ ಸಾಧನಗಳ ಪರಿಶುದ್ಧತೆಯನ್ನು ಬೋಧಿಸಲು ಅವರು ಜೀವಮಾನವನ್ನೆ ಮುಡಿಪಾಗಿಟ್ಟದ್ದರೂ ಮಾನವ ಕುಲ, ಏಕೆ ತಮ್ಮ ಹಿಂದುಸ್ತಾನ ಕೂಡ, ಇನ್ನೊಂದು ಮಾರ್ಗವನ್ನೆ ಹಿಡಿಯುತಿದೆಯೆಂದು ಗಾಂಧಿ ಕಂಡುಕೊಂಡಿದ್ದಾರೆ. ಆದರಿಂದ ಪ್ರಭುತ್ವಲಾಲಸೆ ಬೆಳೆದು ವ್ಯಕ್ತಿ ರಾಜ್ಯದ ದಾಸನಾಗಿ ಬಿಡಬಹುದೆಂದು ಅವರು ಭಾವಿಸುತ್ತಾರೆ.

ಅನೇಕ ಹಿಂದೀಯರಂತೆ ಗಾಂಧಿಯೂ "ಹಿಂದೀ—ಮುಸಲ್ಮಾನರೆಂದು ನಾನೆನ್ನುವೆ ಹಿಂದುಸ್ತಾನಕ್ಕೆ ಜಡ್ಡಾಗಿದೆ; ಅದರ ಹೃದಯವೂ ಅಸ್ವಸ್ಥವಾಗಿದೆ. ಇನ್ನು ನೀವು ಮರೆಯಕೂಡದು ಹಿಂದೀಯರು ಮುಖ್ಯವಾಗಿ ತಮ್ಮ ಸ್ವಂತ ಸಮಸ್ಯೆಗಳನ್ನೆ ಚಿಂತಿಸುತ್ತಾರೆ. ಆದರೆ ಗಾಂಧಿಯೊಡನೆ ಮಾತಾಡುವಾಗ ನೀವು ಹಿಂದೀಕನ ದಿಯಲ್ಲಿ ಇಡಿ ಜಗತ್ತನ್ನೆ ಕಾಣುವಿರಿ. ಸ್ಥಿತಿಗತಿಗಳನ್ನು ಕುರಿತ ಯಾವ ಚರ್ಚೆಯೂ ಗಾಂಧಿಯ ಮುಂದೆ ನೆಲದ ಮೇಲೆ ನಿಲ್ಲುವದಿಲ್ಲ ಅವರು ಅದನ್ನು ಒಂದೇ ಮಾತಿನಲ್ಲಿ ಉನ್ನತ ಮಟ್ಟಕ್ಕೆ ಏರಿಸುತ್ತಾರೆ ಆಗ ಚರ್ಚೆಯ ವಿಷಯ ಈ ಭೂಮಿಯ ಮೇಲೆ ಮಾನವನನ್ನೆ ದುರಿಸುವ ಚಿರಂತನ ಸಮಸ್ಯೆಗಳ ತಾತ್ವಿಕ ಸ್ವರೂಪವನ್ನು ತಳೆಯುವದು.

ಗಾಂಧಿಯ ಪಾಲಿಗೆ ಸರ್ ಸ್ಟ್ಯಾಫೋರ್ಡ ಕ್ರಿಪ್ಸರೊಡನೆ ಆಲೋಚನೆಯೂ ನೆಲಗಡಲೆಯ ವ್ಯವಸಾಯವೂ ಒಂದೇ ಧ್ಯೇಯ ರಾಶಿಗೆ ಸೇರುತ್ತದೆ—ಅದು ನಲುವತ್ತು ಕೋಟಿ ಹಿಂದೀಯರ ಹಿತ. ಗಾಂಧಿ ತಾವೇ ಅದರಲ್ಲಿ ಲೀನವಾಗಿ ಬಿಟ್ಟಿದ್ದಾರೆ. ಆದುದರಿಂದಲೇ ಅವರು ಹಿಂದುಸ್ತಾನದಲ್ಲೆಲ್ಲ ಅತ್ಯಂತ ಪ್ರೀತ್ಯಾಸ್ಪದರು. ಅದೇ ಕಾರಣದಿಂದ ಅತ್ಯಂತ ಪ್ರಭಾವಶಾಲಿಗಳು. ಹಿಂದುಗಳು ಒಂದೇ ಪರವೈತತ್ವವನ್ನು ಆರಾಧಿಸುವರು; ಆದರೆ ಅವರು ಹಲವು ದೇವತೆಗಳನ್ನೂ ಮೂರ್ತಿಗಳನ್ನೂ ಪೂಜಿಸುವದುಂಟು. ಕೆಲ ಹಿಂದೀ ದೇವಸ್ಥಾನಗಳಲ್ಲಿ ಈಗಾಗಲೆ ಗಾಂಧೀ ವಿಗ್ರಹಗಳಿವೆ.

ಭೂತಲ ಸ್ವರ್ಗ

"ಸ್ವರ್ಗದ ಬಾಗಿಲು ಗಾಂಧಿಗಾಗಿ ತೆರೆದು ನಿಂತಿವೆ," ಎಂದು ಮುಂಬಯಿಯ ಗಟ್ಟಿಗ ಕೋಟ್ಯಾಧೀಶನೊಬ್ಬ ನನಗೆ ಹೇಳಿದ. ಆದರೆ ಗಾಂಧಿ ಅವುಗಳನ್ನು ಹಾಗೇ ಬಿಟ್ಟವರು ಅವರು ಭೂಮಿಯನ್ನೇ ಸ್ವರ್ಗಪ್ರಾಯವಾಗಿ ಮಾಡಲು ಹೆಣಗುತ್ತಿದ್ದಾರೆ.

ಪೌರ್ವಾತ್ಯ ಹಸಿವೆ, ದಾರಿದ್ರ್ಯ, ದುಃಖಗಳಿಂದ ಬಳಲುತಿದೆ ಅದು ಹೊಟ್ಟೆಯಿಂದ ಚಿಂತಿಸುವದು. ಬತ್ತಲೆಯಿಂದ ನೋಡುವದು, ಕ್ಲೇಶದಿಂದ ಭಾವಿಸುವದು ನೂರಾರು ಕೋಟಿ ಜನರು ಬಲಿಷ್ಠರಿಗೆ ತತ್ತರಿಸಿ ನಿಲ್ಲುವರು; ಆದರೆ ತಮ್ಮ ಹೃದಯವನ್ನು ಲೋಕಹಿತಕ್ಕಾಗಿ ಜೀವನೋತ್ಸರ್ಗ ಮಾಡಿದವರಿಗೆ ಮಾರುಗೊಡುವರು. ಗಾಂಧಿಯು ಆ ಜೀವನ ತ್ಯಾಗಧರ್ಮದ ಮೂರ್ತಿ. ಅವರು ಹಿಂದೀಯರಂತೆ ಹಿಂದೀಯರಿಗಾಗಿ ಬಾಳುತಿದ್ದಾರೆ. ಅವರ ವಿಚಾರಗಳನ್ನು ಒಪ್ಪದವರು ಹಲವರಿದ್ದಾರೆ. ಆದರೆ ಎಲ್ಲರೂ ಅವರ ಪ್ರಾಮಾಣಿಕತೆ, ಜ್ಞಾನ, ಸತ್ಯಸಂಧತೆಗಳನ್ನು ಗೌರವಿಸುತ್ತಾರೆ. ಗಾಂಧಿ ತನ್ನ ಮಾತಿಗೆ ವಿರುದ್ಧವಾಗಿ ನಡೆವಾಗ ಪಾಶ್ಚಿಮಾತ್ಯರನೇಕರು ಅವರ ವಿಚಾರ ಚಂಚಲವೆಂದು; ಪೌರ್ವಾತ್ಯರು ಹೇಳುವರು, ಅವರು ಸತ್ಯಸಂಧರಾಗಿ ನಡೆದುಕೊಂಡಿದ್ದಾರೆಂದು.

ಬ್ರಿಟಿಶರು ಗಾಂಧಿಯವರಿಗೆ ಹಿಂದೀಯರ ಮೇಲಿರುವ ಪ್ರಭಾವವನ್ನು ಅರಿತಿದ್ದಾರೆ. ಅದಕ್ಕಾಗಿ ಅವರು ತಮ್ಮ ಯೋಜನೆಗಳಿಗೆ ಅವರನ್ನು ಒಲಿಸಿಕೊಳ್ಳಲು ಹೆಣಗುತ್ತಾರೆ. ಆದರೆ ಸ್ವತಃ ಗಾಂಧಿಯವರು ತಮ್ಮ ಪ್ರಭಾವವನ್ನು ಅಲ್ಲಗಳೆಯುವರು. ಅವರೆನ್ನುವರು: "ನಾನು ಪರಮಾತ್ಮನ ದಾಸ."

ನೆಲಗಡಲೆ, ಮಾವಿನ ಗೊರಟು ಮತ್ತು ರಾಜಕಾರಣ



ಮಹಾತ್ಮರಾದ ಮೋಹನದಾಸ ಕ. ಗಾಂಧಿಯುವರು ಇಂಗ್ಲೀಷಿನಲ್ಲಿ "ಹರಿಜನ" ಎಂಬ ಒಂದು ಕೆಳ್ಳನ್ನ ವಾರಪತ್ರಿಕೆಯನ್ನು ನಡೆಸುತ್ತಾರೆ. ಅದರಲ್ಲಿ ಅವರು ಅಂಕಿತವಿಕ್ಕಿ ಲೇಖಗಳನ್ನು ಬರೆಯುತ್ತಾರೆ. ಒಂದು ಪ್ರಶ್ನೋತ್ತರ ವಿಭಾಗವನ್ನೂ ನಡೆಸುತಿದ್ದಾರೆ.

ತಿಳಲು ಮತ್ತು ರಾಜಕಾರಣ

ಕಳೆದ ಮಾರ್ಚ ತಿಂಗಳಲ್ಲಿ ಬ್ರಿಟಿಶ ಮಂತ್ರಿಗಳ ಒಂದು ಶಿಷ್ಟಮಂಡಲ ಹಿಂದುಸ್ತಾನಕ್ಕೆ ಬಂತು. ಅದರಲ್ಲಿ ಬ್ರಿಟಿಶ ಕಾಲಿಕಾರ ಸರಕಾರದ ಮೇಲ್ತರಗತಿಯ ಮೂವರು ಮಂತ್ರಿಗಳಿದ್ದರು. ಮೇ ೧೬ನೇ ದಿನ ಆ ಶಿಷ್ಟಮಂಡಲ ಹಿಂದುಸ್ತಾನಕ್ಕೊಂದು ರಾಷ್ಟ್ರೀಯ ರಾಜ್ಯಘಟನೆಯನ್ನೂ ರಾಷ್ಟ್ರೀಯ ಸರಕಾರವನ್ನೂ ಕೊಡುವ ಯೋಜನೆಯನ್ನು ಪ್ರಕಟಿಸಿತು. ಹಿಂದೀಯರು ಆ ಬ್ರಿಟಿಶ ಯೋಜನೆಯನ್ನು ಒಪ್ಪುವರೆ, ಎಂಬುದಾಗ ಪ್ರಶ್ನೆಯಾಗಿತ್ತು. ಆದರೆ ನಿಜವಾದ ಪ್ರಶ್ನೆ, ಗಾಂಧೀಯವರು ಅದನ್ನೊಪ್ಪುವರೆ, ಎಂಬುದಿತ್ತು. ಏಕೆಂದರೆ ಹಿಂದುಸ್ತಾನದಲ್ಲಿ ಗಾಂಧಿಗಿಂತ ದೊಡ್ಡವರು ಯಾರೂ ಇಲ್ಲ.

"ನಾಲ್ಕು ದಿನದ ಸಮಗ್ರ ಪರೀಕ್ಷೆಯಲ್ಲಿ" ನಿರತರಾದ ನಂತರ ಶಿಷ್ಟಮಂಡಲದ ಯೋಜನೆಯನ್ನು ಪ್ರಶಂಸಿಸಿ, ಅದು "ಈಗಿರುವ ಸ್ಥಿತಿಗತಿಯಲ್ಲಿ ಬ್ರಿಟಿಶ ಸರಕಾರ ನಿರ್ಮಿಸಬಹುದಾದ ಅತ್ಯುತ್ತಮ ಕಾಗದ" ಎಂದು ಹೇಳಿ ಗಾಂಧೀಯವರು ಒಂದೂಕಾಲು ಪುಟದ ಲೇಖ ಬರೆದರು. "ಬ್ರಿಟಿಶ ಆಳಿಕೆಯನ್ನು ಆದಷ್ಟು ಸುಲಭವಾಗಿ, ತ್ವರಿತವಾಗಿ ಕೊನೆಗೊಳಿಸಲು" ಮಂತ್ರಿಶಿಷ್ಟರು ಬಂದಿದ್ದರೆಂದು ಅವರು ಸಾರಿದರು.

ಈ ಗಾಂಧೀಲೇಖವನ್ನು "ಹರಿಜನ"ದಿಂದ ಹಿಂದುಸ್ತಾನದ ಪ್ರತಿಯೊಂದು ಪತ್ರಿಕೆಯೂ ಪುನರ್ಮುದ್ರಿಸಿತು. ಉಚ್ಚಾಧಿಕಾರಿಗಳ ಮತ್ತು ರಾಯಭಾರಚತುರರ ಅವಗಾಹನೆಗಾಗಿ ಅದರ ಪೂರ್ಣ ಪಾಠವನ್ನು ವಾಂಶಿಂಗ್‌ಟನ್ನಿಗೆ ತಂತಿ ಮೂಲಕ ಕಳಿಸಲಾಯಿತು. ಬ್ರಿಟಿಶ ಪತ್ರಿಕೆಗಳಲ್ಲಿಯೂ ಜೇರಿಡೆಗಳಲ್ಲಿಯೂ ಅದರ ಪೂರ್ಣ ಅವತರಣಿಕೆಗಳು ಪ್ರಸಿದ್ಧವಾದವು.

ಹಿಂದುಸ್ತಾನದ ಬಿಡುಗಡೆಯ ಸಲುವಾಗಿ ಬ್ರಿಟಿಶರು ಮುಂದೊಡ್ಡಿದ ಇತಿಹಾಸಕಾರಕ ಕೊಡುಗೆಯನ್ನು ಪೃಥಕ್ಕರಿಸುವ ಈ ಗಾಂಧೀಲೇಖದ ಕೆಳಗೆನೇ ಮಹಾತ್ಮರ ಅಂಕಿತ ಹೊತ್ತ ಇನ್ನೊಂದು ಲೇಖವನ್ನು "ಹರಿಜನ" ಪ್ರಕಟಿಸಿತ್ತು. "ಮಾವಿನ ಗೊರಟಿನ ತಿಳಲು" ಎಂದು ಅದರ ತಲೆಬರಹ. "ಧಾನ್ಯದ ಮತ್ತು ಮೇವಿನ ಬದಲು ಉತ್ಕೃಷ್ಟ ಆಹಾರ ಪ್ರಭೇದ" ಈ ತಿಳಲು ಎಂದು ಅದರಲ್ಲಿ ಗಾಂಧಿ ಪ್ರತಿಪಾದಿಸಿದ್ದರು.

"ಹರಿಜನ"ದಲ್ಲಿ ಆ ಮುಂದಿನ ಲೇಖ ಮೋಹನದಾಸ ಕ. ಗಾಂಧಿಯವರ "ನಿಸರ್ಗ ಚಿಕಿತ್ಸೆ." ಅವರೀಗ ನಿಸರ್ಗ ಚಿಕಿತ್ಸೆಯಲ್ಲಿ ತಮ್ಮ ಬಹಳ ಸಮಯವನ್ನು ವೆಚ್ಚ ಮಾಡುತ್ತಾರೆ.

"ಹರಿಜನ"ದ ಈ ಸಂಚಿಕೆ ಅದರ ಇತರ ಸಂಚಿಕೆಗಳ ಮಾದರಿಯಲ್ಲೆ ಇದೆ. ಅದು ಗಾಂಧಿಯವರ ಪ್ರತೀಕವೂ ಹೌದು. ಅವರು ಬಹುಮುಖರು; ಏಕೆಂದರೆ ಅವರಿಗೆ ವ್ಯಕ್ತಿಯ ಜೀವನದಲ್ಲಿ ಆಸಕ್ತಿ ಬಹಳ ಮತ್ತು ಆ ಜೀವನ ಬಹುಮುಖವಾಗಿಯೆ ಇರುತ್ತದೆ. ಹರಿಜನದ ಸಾಪ್ತಾಹಿಕ ಸಂಚಿಕೆಗಳಲ್ಲಿ ಬಾರಿಬಾರಿಗೂ ಗಾಂಧಿಯವರು ನೆಲಗಡಲೆ (ಸೇಂಗಾ) ಯನ್ನು ತಮ್ಮ ದೇಶಬಾಂಧವರು ಹೇಗೆ ಹೇಗೆ ಉಪಯೋಗಿಸಬಹುದೆಂದು ಸೂಚಿಸುತ್ತಾರೆ. ಒಂದು ಲೇಖದಲ್ಲಿ ಗಾಂಧಿಯವರು ಹಿಂದುಸ್ತಾನದಸ್ವಾತಂತ್ರ್ಯದವ್ಯಾಖ್ಯೆಯನ್ನು ಕೊಡುತ್ತಾರೆ; ಇನ್ನೊಂದರಲ್ಲಿ ಸಕ್ಕರೆಯ ಸೀದಾವನ್ನು ಇಳಿಸಿ ಕಲ್ಲು ಸಕ್ಕರೆ ಮಾಡಲು ಅವಕಾಶಕೊಡಬೇಕೆನ್ನುತ್ತಾರೆ; ಮೂರನೆಯದರಲ್ಲಿ ದುಷ್ಕರ್ಮ ಮತ್ತು ದುಷ್ಕರ್ಮಿಗಳ ಸಮಸ್ಯೆಯನ್ನು ಹಿಂಜುತ್ತಾರೆ; ನಾಲ್ಕನೆಯದರಲ್ಲಿ ಸ್ವತಂತ್ರ ಹಿಂದುಸ್ತಾನ ಸೈನ್ಯವನ್ನಿಟ್ಟುಕೊಳ್ಳಲಿಕ್ಕಿಲ್ಲೆಂದು ಆಶಿಸುತ್ತಾರೆ; ಐದನೆಯದರಲ್ಲಿ ಸುಳ್ಳು ಹೇಳುವದು ಸರ್ವಥಾ ಯೋಗ್ಯವಲ್ಲ ಎಂಬ ನಿಯಮವನ್ನು ಹಾಕಿಕೊಡುತ್ತಾರೆ. "ದಿಟ ನುಡಿಯುವ ನಿಯಮಕ್ಕೆ ಅಪವಾದವೇ ಇಲ್ಲ."

ಮಹಾತ್ಮ, ಸಾಧು ಗಾಂಧಿಗೆ ರಾಜಕಾರಣವೆಂದರೇನು ದೊಡ್ಡದಲ್ಲ; ನೆಲಗಡಲೆಯೇನು ಚಿಕ್ಕದಲ್ಲ.

ಅತ್ಯದ್ಭುತ ಮನುಷ್ಯ

ನಾನು ಲೆನಿನ್, ಚರ್ಚಿಲ್, ಫ್ರಾಂಕ್ಲಿನ್ ರೂಜವೆಲ್ಟ, ವಿಲ್ಕಿ, ಸ್ಟಾಲಿನ್, ಲಿಟ್ವಿನಾಫ್, ಅಟ್ಲಿ, ಈನ್‌ಸ್ಟೀನ್, ಲಾಯ್ಡ ಜಾರ್ಜ, ಇಲೀನರ ರೂಜವೆಲ್ಟ ಮೊದಲಾದ ಹತ್ತುಹಲವು ಹೆಸರಾದ ಜನರನ್ನು ಕಂಡಿದ್ದೇನೆ. ಗಾಂಧಿಗಿಂತ ಅದ್ಭುತ ಮನುಷ್ಯನನ್ನು ನಾನಿನ್ನೂ ಕಂಡಿಲ್ಲ.

೧೨೫ ವರ್ಷದ ವೃದ್ಧರಾಗುವ ವರೆಗೆ ಬದುಕುವ ಆಶೆ ತಮಗೆಂದು ಗಾಂಧಿ ಹೇಳುತ್ತಾರೆ. ನಾನು ಅವರೊಡನೆ ಹಿಂದುಸ್ತಾನದ ಉರಿಬಿಸಿಲ ಹಳ್ಳಿಯೊಂದರಲ್ಲಿ ೧೯೪೨ರಲ್ಲಿ ಒಂದು ವಾರ ಉಳಿದುಕೊಂಡಿದ್ದೆ. ಈ ಬಾರಿ ಅವರೊಡನೆ ಆರು ದಿನ ಕಳೆದೆ. ಮುಂಜಾನೆ ಐದೂವರೆ ಗಂಟೆಗೆ ಅವರೊಡನೆ ಗಾಳಿಸವಾರಿ ಹೋಗುತಿದ್ದೆ. ಮೊದಲನೆ ಮುಂಜಾನೆ ಅವರು ನಿದ್ದೆ ಸರಿಯಾಯಿತೇ ಎಂದು ಕೇಳಿದರು. ಇಲ್ಲವೆಂದು ಉತ್ತರವಿತ್ತೆ; ಒಂದು ಸೊಳ್ಳೆ ನನ್ನನ್ನು ಕಡಿದಿತ್ತು. "ನೀವು ಚನ್ನಾಗಿ ನಿದ್ದೆ ಮಾಡಿದಿರಾ?" ಎಂದು ನಾನು ಪ್ರಶ್ನಿಸಿದೆ.

"ನಾನು ಯಾವಾಗಲೂ ಚನ್ನಾಗಿಯೆ ನಿದ್ದೆ ಮಾಡುವೆ," ಎಂದು ಉತ್ತರ ಬಂತು.

ಮರುದಿನ ಮುಂಜಾನೆಯೂ ಅವರು ನನ್ನ ನಿದ್ದೆ ಸರಿಯಾಯಿತೆ ಎಂದು ಕೇಳಿದರು. "ಓಹೋ; ನಿಮಗೆ?" ಎಂದೆ ನಾನು.

"ಕೇಳಲೇ ಬೇಡ," ಅವರೆಂದರು. "ನಾನು ಯಾವಾಗಲೂ ಚನ್ನಾಗಿಯೆ ನಿದ್ದೆ ಮಾಡುವೆ."

ಮೂರನೆ ಮುಂಜಾನೆಯೂ ನಾನು ನಿದ್ದೆ ಹೇಗಾಯಿತೆಂದು ಅವರನ್ನು ಕೇಳಿದೆ. "ಕೇಳಬೇಡೆಂದು ಹೇಳಿರಲಿಲ್ಲವೆ?" ಅವರು ಉದ್ಗರಿಸಿದರು.

"ನಿಮಗೆ ಮರೆತು ಹೋಗಿರಬಹುದೆಂದು ನಾನು ಭಾವಿಸಿದ್ದೆ," ನಾನು ಚೇಷ್ಟೆಮಾಡಿದೆ.

"ಹೀಗೋ? ನಾನು ಕೆಡುತಿದ್ದೇನೆಂದು ತಿಳಿದಿ, ಅಲ್ಲವೆ?" ಅವರು ನುಡಿದರು. "ನಿನ್ನ ನಿದ್ದೆ ಹೇಗಾಯಿತು?"

ಮಹಾತ್ಮಾ ಗಾಂಧಿಯೊಡನೊಂದು ಸಂದರ್ಶನ

ಲೇಖಕರು : ಲುಯಿಫಿಶರ್ ('ಅಟ್ಲಾಂಟಿಕ್'ದಿಂದ ಉದ್ಧೃತ)

"ಕೇಳಬೇಡಿರಿ," ನಾನೆಂದೆ.

"ಒಂದೆರಡು ಕೋಗಿಲೆಗಳಿಂದ ಚೈತ್ರಮಾಸ ಬಂದೀತೆ?" ಗಾಂಧಿ ನಕ್ಕರು.

ಅವರಿಗೆ ನಗುವದು, ಹಾಸ್ಯ ಮಾಡುವದು ಎಂದರೆ ಪ್ರಾಣ. ತಮ್ಮನ್ನೇ ತಾವು ಹಾಸ್ಯ ಮಾಡಿಕೊಳ್ಳಬಲ್ಲವರು ಅವರು.

ಕೋಡುಳ್ಳ ಮನುಷ್ಯ !

ಪುಣೆಯಿಂದ ಮುಂಬಯಿ ವರೆಗೆ ನಾನು ಅವರೊಡನೆ ಪಯಣ ಮಾಡಿದೆ. ಮೂರುವರೆ ತಾಸಿನ ಪ್ರವಾಸ. ಅವರೂ ಅವರ ಬಳಗವೂ— ಅದರಲ್ಲಿ ಕಾರ್ಯದರ್ಶಿಗಳು, ಭಕ್ತರು, ವೈದ್ಯ ಸೇರಿ ಹತ್ತು ಜನರಿದ್ದಾರೆ— ಸ್ಪೆಶಲ್ ತೃತೀಯ ವರ್ಗದ, ಅಂದರೆ ಬರಿ ಕಟ್ಟಿಗೆಯ ಬೆಂಚುಗಳುಳ್ಳ ಡಬ್ಬಿಯಲ್ಲಿ ಪ್ರವಾಸ ಮಾಡಿದರು. ಮುಸಲಧಾರೆಯಲ್ಲಿ ಮಳೆ ಸುರಿಯುತಿತ್ತು. ಸ್ವಲ್ಪ ಹೊತ್ತಿನಲ್ಲೆ ಮಾಡಿನಿಂದ ನೀರು ಸೋರಹತ್ತಿತು. ಗಾಂಧಿಜಿ "ಹರಿಜನ"ಕ್ಕಾಗಿ ಒಂದು ಲೇಖ ಬರೆದರು. ಆ ಮೇಲೆ ಇನ್ನೊಂದು ಲೇಖದ ಮುದ್ರಕನ ಕರಡು ತಿದ್ದಿದರು. ಬಳಿಕ ಅವರೊಡನೆ ಮಾತಾಡಲು ಗಾಡಿ ಹತ್ತಿ ಬಂದ ರಾಜಕೀಯ ಧುರೀಣರೊಡನೆ ಚರ್ಚಿಸಿದರು. ಪ್ರತಿಯೊಂದು ನಿಲ್ದಾಣದಲ್ಲಿಯೂ ಮಳೆ ಗಾಳಿಯನ್ನು ಲೆಕ್ಕಿಸದೆ ಅವರನ್ನು ನೋಡಲು ಜನಸಂದಣಿ ಕಿಕ್ಕಿರಿದಿತ್ತು. ಒಂದು ನಿಲ್ದಾಣದಲ್ಲಿ ಒದ್ದೆಮುದ್ದೆಯಾದ ಅನೇಕ ಹುಡುಗರು ಕಿಡಕಿಯ ಮುಂದೆ ಕೂಡಿ 'ಗಾಂಧೀಜಿ! ಗಾಂಧೀಜಿ!' ("ಜಿ" ಎಂಬುದು ಗೌರವಾರ್ಥಕ) ಎಂದು ಒದರುತಿದ್ದರು. ಅವರು ಹೆಚ್ಚು ಕಡಿಮೆ ಹದಿನಾಲ್ಕು ವಯಸ್ಸಿನವರಾಗಿದ್ದರು.

ನಾನು ಗಾಂಧಿಯನ್ನು ಕೇಳಿದೆ: "ಅವರಿಗೆ ನೀವೇನಾಗಬೇಕು?"

ತಮ್ಮ ಎರಡು ಬೆರಳುಗಳನ್ನು ಬಿಡಿಸಿ ಬೋಳು ತಲೆಯ ಪಕ್ಕದಲ್ಲಿ ಮೇಲೇರಿಸಿ ಹೇಳಿದರು ಗಾಂಧಿ: "ಕೋಡು. ನನಗೆ ಕೋಡುಗಳಿವೆ. ಅದಕ್ಕೇ ನನ್ನನ್ನು ನೋಡಲು ಆತುರ."

ಕೆಲಸ ಮುಗಿಸಿ, ಒಂದು ಬಾಕಿನ ಮೇಲೆ ಗಾಂಧಿ ಕಾಲು ಬಿಡಿಸಿ ಮಲಗಿದ್ದರು. ಅವರು ಒಂದು ತಾಸು ನಿದ್ದೆ ಮಾಡಿರಬೇಕು. ಮುಂಬಯಿಯಲ್ಲಿ ಅವರನ್ನು ಎಬ್ಬಿಸಬೇಕಾಯಿತು.

೨

ಗಾಂಧಿಯ ವಿಷಯಕ್ಕೆ ಆಶ್ಚರ್ಯಕರವಾದ ಮಾತೆಂದರೆ, ಅವರು ಇಪ್ಪತ್ತನಾಲ್ಕು ತಾಸೂ ಬಹಿರಂಗವಾಗಿಯೆ ಬಾಳುತಿರುವರೆನ್ನಬಹುದು. ಅದರಿಂದ ಅವರಿಗೆ ಹಿತವೇ ಆಗಿದೆಯೆಂದು ತೋರುತ್ತದೆ. ಅವರ ಹಾಸಿಗೆಯೆಂಬುದು ಡಾ. ಮೆಹತಾರ ಬೋಳು ಮಾಳಿಗೆಯಲ್ಲಿ ಒಂದು ಹಲಿಗೆಯ ಮೇಲೆ ಹಾಸಿದ ಚಾಪೆ. ಅವರ ಅನೇಕ ಶಿಷ್ಯರೂ ಗುರುವಿನ ಬಳಿಯಲ್ಲೆ ಮಲಗುತ್ತಾರೆ. ನನ್ನ ಮಟ್ಟಿಗೆ ಒಳ್ಳೆ ಹಾಸಿಗೆಯುಳ್ಳ ಕೋಣೆ ಕೊಟ್ಟಿದ್ದರು.

ಮುಂಜಾನೆ ನಾಲ್ಕು ಗಂಟೆಗೆ ಮಹಾತ್ಮರೂ ಅವರ ಶಿಷ್ಯರೂ ಸ್ತೋತ್ರಪಾಠ ಹೇಳುತಿದ್ದುದು ನನಗೆ ಕೇಳಿಸುತಿತ್ತು. ಆ ಮೇಲೆ ಅವರು ಮಾವಿನ ಇಲ್ಲವೆ ಕಿತ್ತಳೆ ಹಣ್ಣಿನ ರಸ ಕುಡಿದು ಪತ್ರಗಳಿಗೆ ಕೈಯಿಂದಲೆ ಉತ್ತರ ಬರೆಯುವರು. ಅವರ ವಯಸ್ಸು ಎಪ್ಪತ್ತೇಳು. ಅವರ ಕೈಬರಹ ಸ್ಪಷ್ಟವೂ ದೃಢವೂ ಆಗಿದೆ. ಅವರ ಕಣ್ಣು ಕಿವಿ ಸೂಕ್ಷ್ಮವಾಗಿಯೆ ಇವೆ. ಗಾಂಧಿಯ ಮುಖ್ಯ ಇಂಗ್ಲೀಷ ಕಾರ್ಯದರ್ಶಿಯಾಗುವಗೋಸುಗ ಎಲ್ಲ ಸುಖ ಸೌಖ್ಯಗಳನ್ನು ತೊರೆದು ಬಂದಿರುವ ಹಿಂದೀ ರಾಜ ಕುಟುಂಬವೊಂದಕ್ಕೆ ಸೇರಿದ ಕ್ರಿಶ್ಚನ್ ಮಹಿಳೆ ರಾಜಕುಮಾರಿ ಅಮೃತಕುವರ ಅವರು ಬ್ರಿಟಿಶ ಸುದ್ದಿ ಸಂಸ್ಥೆಯಿಂದ ದೊರಕಿದ ಸುದ್ದಿಗಳನ್ನು ಅವರ ಮುಂದೆ ಓದುತ್ತಾರೆ. ಇದು ಹೊರತು ಗಾಂಧಿ, ಪತ್ರಿಕೆಗಳನ್ನು ಓದುವದೂ ಇಲ್ಲ, ಆಕಾಶವಾಣಿ ಕೇಳುವದೂ ಇಲ್ಲ.

ಹೊತ್ತು ಗೊತ್ತಿನ ಮನುಷ್ಯ!

ಆದರೆ ಹಿಂದುಸ್ತಾನವೇ ಸಾವಿರಾರು ಕಾಗದಪತ್ರ, ನೂರಾರು ಸಂದರ್ಶಕರ ಸ್ವರೂಪದಲ್ಲಿ ಗಾಂಧಿಯ ಬಳಿ ಬರುತ್ತದೆ. ಮಹಾತ್ಮರ ಪ್ರತಿಯೊಂದು ನಡೆ, ನುಡಿ, ಕೆಲಸವೂ ಅವರ ಕೈ ನೂಲಿನ ದೋತರದಿಂದ ಕೆಳಗೆ ಸಾಗುತಿರುವ ನಿಕೆಲ್ ಒಪ್ಪವುಳ್ಳ ಡಾಲರ ಗಡಿಯಾರದ ಸಮಯಕ್ಕೆ ಬಾತೂ ತಪ್ಪದೆ ಜರಗುತ್ತದೆ. ಅವರು ಅತಿಶಯ ಸಮಯಾನುವರ್ತಿಗಳು. ಒಬ್ಬ ಸಂದರ್ಶಕನೊಡನೆ ನಡೆದಿದ್ದ ಸಂಭಾಷಣೆಯನ್ನು ಒಂದು ತಾಸು ಕೇಳುತ್ತ ಕುಳಿತ ನನಗೆ ಗಾಂಧಿ ಹೇಳಿದರು, "ಈಗ ಹೋಗಿ ಹತ್ತು ನಿಮಿಷ ಬಿಟ್ಟು ಬಾ." ಹತ್ತು ನಿಮಿಷ ಬಿಟ್ಟು ನಾನು ಮರಳಿದೆ. ಒಂದು ತಾಸು ಹೊತ್ತು ನನ್ನನ್ನು ಅವರು ಕಂಡರು. ಯಾವಾಗಲೂ ನನಗೆ ಗೊತ್ತಿದ್ದುದಂತೂ ಗೊತ್ತಿದೆ; ಇನ್ನೊಬ್ಬನೇನೆನ್ನುವನೋ ಕೇಳೋಣ ಎಂಬವನು ನಾನು. ಆದುದರಿಂದ ಸಂದರ್ಶನ ಕಾಲದಲ್ಲಿ ನಾನು ಸಾಧ್ಯವಿದ್ದಷ್ಟು ಮೌನದಿಂದಿರುವೆ. ಮಾತಾಡುವದನ್ನೆಲ್ಲ ಗಾಂಧಿಯೇ ಮಾಡಿದರು. ಮಾತಾಡುವದೆಂದರೆ ಅವರಿಗೊಳ್ಳೆ ಸಂತಸ. ಹಾಗೆ ಕೇಳಿದರೆ ತಾವು ಮಾಡುವದೆಲ್ಲವನ್ನೂ ಒಳ್ಳೆ ಸಂತಸದಿಂದಲೇ ಮಾಡುವರವರು—ಮುಖ್ಯವಾಗಿ, ಮಾತು, ನಡೆ, ಊಟ ಮತ್ತು ನಿದ್ದೆ.

ಎಷ್ಟೋ ವೇಳೆ ಮುಂಜಾನೆ ಮಳೆ ಜಿನುಗುತ್ತಿತ್ತು. "ಈ ಮಳೆಯಲ್ಲೆಲ್ಲಿ ಗಾಳಿ ಸವಾರಿ ಮಾಡುತ್ತೀರಿ, ಬಿಡಿರಿ," ನಾನೆಂದೆ.

"ಯಾಕೆ ಬೇಡ?" ಅವರು ಎದುರಾಡಿದರು. "ಬಾರಯ್ಯಾ, ಮುದುಕನಂತೆ ಮಾಡಬೇಡ."

ಗಾಂಧಿಯವರು ಹಗಲನ್ನು ಕಳೆಯುವದು— ಮತ್ತು ಹಗಲಲ್ಲಿ ನಿದ್ರಿಸುವದು — ತಮ್ಮ ಕೋಣೆಯ ಕಲ್ಲಿನ ನೆಲದ ಮೇಲೆ ಹಾಸಿದ ಗಾದಿಯ ಮೇಲೆ. ಅವರ ಆಹಾರ ಸ್ವಚ್ಛ ಹೊಳೆಯುವ ಚೀನಿ ಮಣ್ಣಿನ ತಾಟುಗಳಲ್ಲಾಗಲಿ ಒಪ್ಪವಡೆದ ಲೋಹದ ಪಾತ್ರೆಗಳಲ್ಲಾಗಲಿ ಬರುತ್ತದೆ. ಹಸಿ ಮತ್ತು ಬೇಯಿಸಿದ ಕಾಯಿಪಲ್ಲೆ, ಹಣ್ಣುಹಂಪಲು, ಹಾಲಲ್ಲಿ ಬೇಸಿದ ಉತ್ತತ್ತಿ, ಫೇಡೆ, ಕಾಗದದಷ್ಟು ತೆಳ್ಳನ್ನ ಹಿಂದೀ ಹಪ್ಪಳ ಇವುಗಳ ಮೇಲೆಯೆ ಇವರ ಜೀವನ—ರೊಟ್ಟಿ, ಮೊಟ್ಟೆ, ಮಾಂಸ, ಮೀನು ಇವಾವುದನ್ನೂ ಅವರು ತಿನ್ನುವದಿಲ್ಲ; ಕಾಫಿ, ಚಹಾ, ಮದ್ಯಗಳನ್ನು ಸೇವಿಸುವದೂ ಇಲ್ಲ. ಮೂರು ವರ್ಷ ಹಿಂದೆ ಸೆರೆಮನೆಯಲ್ಲಿ ಉಪವಾಸ ಮಾಡಿದ ನಂತರ ಇದ್ದದ್ದಕ್ಕಿಂತ ಕಳೆದ ವರ್ಷ ಅವರ ಆರೋಗ್ಯ ಚನ್ನಾಗಿತ್ತಾದರೂ ಈಗ ಅಷ್ಟು ಚನ್ನಾಗಿಲ್ಲವೆಂದು ಅವರ ಡಾಕ್ಟರರು ಹೇಳುತ್ತಾರೆ. ಅದಕ್ಕೆ ದಿಲ್ಲಿಯ ಪ್ರಾಣಘಾತಕ ಸೆಕೆಯಲ್ಲಿ ಬ್ರಿಟಿಶ ಮಂತ್ರಿ ಶಿಷ್ಟರೊಡನೆ ನಡೆಸಿದ ಮೂರತಿಂಗಳು ಕಠಿಣವಾದ ಮಾತುಕತೆಗಳೇ ಕಾರಣವಾಗಿರಬಹುದು. ಹಿಂದುಸ್ತಾನದ ಭವಿತವ್ಯ ವೇಶಣಕ್ಕೆ ಬಿದ್ದಿತ್ತು. ಗಾಂಧಿಯವರೇ ಎಲ್ಲ ಮಂತ್ರಣಗಳಲ್ಲಿ ಪ್ರಮುಖ ಪುರುಷರಾಗಿದ್ದರು. ಕಾಂಗ್ರೆಸ್ ಪಕ್ಷದ ಕಾರ್ಯಸಮಿತಿಯೇನೋ ಯಾವ ಕ್ರಮಕ್ಕೆಕೊಳ್ಳಬೇಕೆಂದು ಚಿಂತಿಸುತಿತ್ತು. ಆದರೆ ಕೊನೆಯ ನಿರ್ಣಯ ಗಾಂಧಿಯ ಬುದ್ಧಿಯಲ್ಲಾಗಲಿ ಭಂಗಿ ವಸತಿಯಲ್ಲಿದ್ದ ಅವರ ಗುಡಿಸಲಲ್ಲಾಗಲಿ ರೂಪುಗೊಳ್ಳಬೇಕಾಗಿತ್ತು!

"ನಾನೂ ಅಸ್ಪೃಶ್ಯ!"

ಭಂಗಿ ವಸತಿಯೆಂದರೆ ಅಸ್ಪೃಶ್ಯರ ಹೊಲೆಗೇರಿ. ಅಸ್ಪೃಶ್ಯರಿಗೆ ಕೊಡುತಿದ್ದ ಪೀಡೆಯಿಂದ ಸವರ್ಣ ಹಿಂದುಗಳನ್ನು ಪರಾಙ್ಮುಖರಾಗಿ ಮಾಡಲು ಗಾಂಧಿಯವರ ಪ್ರಯತ್ನ. ಪರಿಣಾಮವಾಗಿ

—೬ನೇ ಪುಟಕ್ಕೆ

ಲಾರ್ಡ ವೇವಲ್ಲರು ಹೊರಬೀಳುವರೆ?

ಕಾಂಗ್ರೆಸ್ ಪತ್ರದ ಬಗ್ಗೆ ಬ್ರಿಟಿಶ ಪ್ರತಿಕ್ರಿಯೆಯೇನು?

ಲೀಗು ಮನಸು ಬದಲಿಸುವದೆ?

ಕಳೆದ ಹಲವು ದಿನಗಳಿಂದ ಪರದೆಯ ಹಿಂದೆ ಹಲವಾರು ಎಳೆದ್ದಾಟಗಳು ನಡೆಯುತ್ತ ಬಂದಿವೆ. ವಾಯಿಸರಾಯರಿಗೆ ಲೀಗೇತರ ನಡುಗಾಲ ಮಂತ್ರಿಗಳು ಕಳಿಸಿದ ಪತ್ರಕ್ಕೆ ಉತ್ತರ ಬಾರದ್ದ ದ ಪಂ. ಜವಾಹರಲಾಲರು ಪುನಃ ಒಂದು ಮೂರ್ನೆಪು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಆಜರಿಂದ ಬ್ರಿಟಿಶ ಸರಕಾರ ಈ ವಿಚಾರವನ್ನು ಬೇಗನೆ ವಿಚಾರಿಸಬೇಕಾಯಿತು. ಅದು ನಿಜವಾಗಿ ಒಳ್ಳೆ ಕಠಿನ ಕೆಲಸವಾಗಿತ್ತು. ಕಾಂಗ್ರೆಸ್ಸಿಗೆ ಒಡನೆ ನಿರ್ಣಯ ಮಾಡುವದು ಬೇಕಾಗಿತ್ತು. ಸರದಾರ ಪಟೇಲರು ತಮ್ಮ ಸಾಮಾನ್ಯವಾದ ಮೌನವನ್ನು ಒಡೆದು, ಲೀಗು ಘಟನಾ ಸಮಿತಿಯಲ್ಲಿ ಸೇರಲೊಪ್ಪಬೇಕು, ಇಲ್ಲವೆ ನಡುಗಾಲ ಸರಕಾರದಿಂದ ಗಂಟುಮೂಟೆ ಕಟ್ಟಬೇಕೆಂದು ಗರ್ಜಿಸಿದ್ದರು. ಕೇಂದ್ರ ಶಾಸನ ಸಭೆಯ ದೃಶ್ಯ ದಿನಹೋದಂತೆ ವಿಕಾರವಾಗ ತೊಡಗಿತ್ತು. ಹೀಗಿರುವಾಗ ಲೀಗಿನ ಅಕ್ಕಿಯಿಲ್ಲದೆ ಅಕ್ಕನಿಗೆ ಔತಣ ಮಾಡಿಸಬೇಕೆಂಬ ಧೋರಣೆಯನ್ನು ಎಷ್ಟು ಕಾಲ ಸಹಿಸುತ್ತ ಹೋಗಬೇಕು? ಆದರೆ ಲೀಗನ್ನು ಹೊರಗಟ್ಟುವ ... ವೂ ಬ್ರಿಟಿಶ ಸರಕಾರಕ್ಕೆ ಇಲ್ಲವೆಂದು ...ಲಾಗಿದೆ. ಈ ಕ್ರಮಕ್ಕೆ ವಾಯಿಸರಾಯರ ಪ್ರಬಲ ವಿರೋಧವಿದೆಯಂತೆ. ಅವರು ರಾಜೀನಾಮೆ ಕೊಡುವ ಬೆದರಿಕೆ ಕೂಡ ಹಾಕಿದ್ದರಂತೆ. ಹೀಗಾಗಿ ಬ್ರಿಟಿಶ ಸರಕಾರದವರು ಕಾಂಗ್ರೆಸ್—ಲೀಗ್ ಸಂಯುಕ್ತ ಸರಕಾರವೊಂದೇ ಇಂದಿನ ಸ್ಥಿತಿಯಲ್ಲಿ ಹಿಂದುಸ್ತಾನದ ರಥವನ್ನು ಸಾಗಿಸಿ...ಂಡು ಹೋಗಬಲ್ಲದೆಂದು ಅವರಿಗೆ ಅಚಲ ವಿಶ್ವಾಸವಾಗಿದೆ. ಆದರೆ ಮುಸ್ಲಿಂ ಲೀಗಿನ ಅನುಪಸ್ಥಿತಿಯಲ್ಲಿ ಘಟನಾ ಸಮಿತಿಯ ಕಾರ್ಯ ಸರಿಯಾಗಿ ಸಾಗಲೊಲ್ಲದೆಂಬ ಅವರಿಗೆ ಮನವರಿಕೆಯಾಗದೆ ಇಲ್ಲ. ಆದರಿಂದ ಅವರು ಎರಡೂ ಪಕ್ಷಗಳನ್ನು ತೆಗಳಿ ತಾವು ಇದರಲ್ಲಿ ಕೈಹಾಕಬಾರದು, ಹಿಂದೀಯರೇ ತಮ್ಮೊಳಗೆ ಇದನ್ನು ಸುಧಾರಿಸಿಕೊಳ್ಳಬೇಕೆಂದು ಸಾರಬಹುದೆಂದು ನಂಬಲಾಗಿದೆ. ಕಾಂಗ್ರೆಸ್ಸು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಡಿಸೆಂಬರ ೬ ರ ಹೇಳಿಕೆಯನ್ನು ...ದುರಾಡದೆ ಒಪ್ಪಿಕೊಳ್ಳಬೇಕೆಂದು ಅವರು ಸೂಚಿಸಬಹುದಂತೆ. ಆದರೆ ಬ್ರಿಟಿಶ ಸರಕಾರದ ...ರ ನಿರ್ಣಯ ಹೀಗೇ ಇದೆಯೆಂದು ಯಾರೂ ...ಎದೆ ತಟ್ಟಿ ಹೇಳುವ ಧೈರ್ಯ ತೋರಿಸಿಲ್ಲ. ಅದೇ ಪ್ರಕಾರ ಕಾಂಗ್ರೆಸ್ಸಿನ ಮುಂದಿನ ಹೆಜ್ಜೆಯೇನೆಂಬುದೂ ದುರೂಹ್ಯವಾಗಿದೆ. ಬ್ರಿಟಿಶ ಸರಕಾರ ಸರಿಯಾದ ಕ್ರಮ ಕೈಕೊಳ್ಳದಿದ್ದರೆ ಇನ್ನೊಂದು ಪ್ರಚಂಡ ಹೋರಾಟಕ್ಕೆ ಸಿದ್ಧರಾಗಿ ಕಾಂಗ್ರೆಸ್ ಮಂತ್ರಿಗಳು ನಡುಗಾಲ ಸರಕಾರದಿಂದ ಹೊರಬಿದ್ದು ಹೋಗಬಹುದೆಂದು ಬೆದರಿಕೆ ಹಾಕಲಾಗಿದೆಯೆಂದು ತಿಳಿಯುತ್ತದೆ. ಇಂಥ ಪ್ರಸಂಗ ಬಂದರೆ ಅದು ಲೀಗ್ ಹೋರಾಟಕ್ಕಿಂತಲೂ ಭಯಾನಕವಾಗಬಹುದೆಂದು ಬ್ರಿಟಿಶ ಸರಕಾರಕ್ಕೆ ಗೊತ್ತೇ ಇದೆ. ಆದರೆ ಗಾಂಧೀಜಿಯವರು ನೌಖಾಲಿಯಿಂದ ನಡುಗಾಲ ಸರಕಾರದ ಮಂತ್ರಿಗಳಿಗೆ ಗುಪ್ತ ಪತ್ರ ಬರೆದಿರುವರೆಂದು ಗೊತ್ತಾಗಿದೆ. ಅದರ ಒಕ್ಕಣೆಯೇನೆಂದೂ ಯಾರಿಗೂ ಗೊತ್ತಿರದಿದ್ದರೂ ಅದು ಕಾಂಗ್ರೆಸ್ ಧೋರಣೆಯನ್ನು ರೂಪಿಸುವಲ್ಲಿ ಮಹತ್ವದ ಸಾಧನವಾಗದಿರದು.

ಲೀಗು ಮೆತ್ತಗಾಗುತಿದೆಯೆ?

...ಇತ್ತ ಲೀಗ್ ವರ್ಗಗಳಲ್ಲಿ ಒಂದಂಗದ ಮನಸಾದರೂ ಬದಲಿಸುತಿದೆಯೆಂಬ ಸಂಜ್ಞೆ ಕಾಣ ತೊಡಗಿದೆ. ಕರಾಚಿ ಗೊತ್ತುವಳಿ ಲೀಗಿನ ನಿಜವಾದ ಚಿತ್ತವೃತ್ತಿಯನ್ನು ಕಸಿದುಕೊಳ್ಳುವ ಹೂಟ ಮಾತ್ರವೆಂದು ಸಂಶಯಪಡಲು ಕಾರಣಗಳಿವೆ. ನಡುಗಾಲ ಸರಕಾರದ ಮಂತ್ರಿಗಳೂ ಜಿನ್ನಾ ಸಾಹೇಬರ ಆಪ್ತ ಶಿಷ್ಯರೂ ಆದ ಇಸ್ಮಾಯಿಲ ಚುಂದ್ರಿಗಾರರು ಪಂಜಾಬಿನಲ್ಲಿ ಒಂದೆಡೆ "ಕಾಂಗ್ರೆಸ್ಸೂ ಲೀಗೂ ತಮ್ಮ ಅತಿರೇಕವಾದವನ್ನು ಬಿಟ್ಟ ಹೊರತು ಒಪ್ಪಂದದ ಆಸೆಯೆ ಇಲ್ಲ," ಎಂದು ಹೇಳಿದಂತೆ ವರದಿಯಾಗಿದೆ. ಅಲ್ಲದೆ "ಕಾಂಗ್ರೆಸ್ಸು ಗುಂಪೀಕರಣ ಮತ್ತು ದುರ್ಬಲ ಕೇಂದ್ರಕ್ಕೆ ಕೂಡ ಒಪ್ಪದಿರುವದರಿಂದ" ಪರಿಸ್ಥಿತಿ ಹದಗೆಟ್ಟಿದೆಯೆಂದು ಅವರ ಅಭಿಪ್ರಾಯವಾಗಿತ್ತು. ಇದರ ಅರ್ಥವೇನು? ಪೂರ್ಣ ಪಾಕಿಸ್ತಾನದ ಬೇಡಿಕೆಗೆ ಲೀಗು ಮರಳಿದೆಯೆಂದು ಕರಾಚಿ ಗೊತ್ತುವಳಿಯಿಂದ ಅನಿಸುತಿತ್ತು. ಚುಂದ್ರಿಗಾರರಂಥ ಲೀಗ್ ಕಾರ್ಯಸಮಿತಿಯ ಹೊಣೆಗಾರ ಸದಸ್ಯರು ಲೀಗನ್ನೂ ಅತಿರೇಕವಾದಿಗಳ ಗುಂಪಿಗೆ ಸೇರಿಸಿ, ಗುಂಪೀಕರಣ ದುರ್ಬಲ ಕೇಂದ್ರಗಳ ಪಕ್ಷದಲ್ಲಿ ಮಾತಾಡಿದ್ದರಿಂದ ಲೀಗು ಒಕ್ಕೂಟದ ಯೋಜನೆಯಾದ ಬ್ರಿಟಿಶ ಮಂತ್ರಿ ಯೋಜನೆಯನ್ನು ತಿರಸ್ಕರಿಸಿದ್ದು ಅನುಪಸುಕ್ತಾರ್ಯವಾಗಿದ್ದಿಲ್ಲವೆಂದು ಅನಿಸುವದಿಲ್ಲವೆ?

ಮುಂಬಯಿ "ಟೈಮ್ಸ್" ರಾಜಕೀಯ ಲೇಖಕನ ಹೇಳಿಕೆಯಂತೆ, ಲೀಗು ಕರಾಚಿ ಗೊತ್ತುವಳಿ ಮಾಡಿದಾಗ ಅದು ಮನಸಾ ಹಾಗೆ ಭಾವಿಸಿದ್ದರೂ ಈಗ ಮೆತ್ತಗಾಗಲು ಸಾಕಷ್ಟು ಕಾರಣವಿದೆ. ಬ್ರಿಟಿಶ ಯೋಜನೆಯನ್ನು ಸರ್ವಥಾ ತಿರಸ್ಕರಿಸಿ ಬಿಡಬಾರದೆಂಬ ಅಭಿಪ್ರಾಯ ಹಲವು ಇತರ ಲೀಗ್ ಮುಂದಾಳುಗಳಲ್ಲಿಯೂ ಉಂಟಾಗಿದೆಯೆಂದು ಅವನಿಗೆ ಖಚಿತತವಾಗಿ ತಿಳಿದುಬಂದಿದೆಯಂತೆ. ಕಾಂಗ್ರೆಸ್ಸು ನಿರೀಕ್ಷೆಯನ್ನು ಸುಳ್ಳುಮಾಡಿ, ನರೇಂದ್ರರ ಸಹಕಾರವನ್ನು ಘಟನಾ ಸಮಿತಿಗಾಗಿ ಸಂಪಾದಿಸಿ ಲೀಗಿನ ಸ್ಥಿತಿಯನ್ನು ದುರ್ಬಲಗೊಳಿಸಿ ಬಿಟ್ಟಿದೆ. ಲೀಗ್ ನರೇಂದ್ರರಲ್ಲಿ ಪರಸ್ಪರ ಒಡಂಬಡಿಕೆಯಿತ್ತೆಂದು ಭಾವಿಸುವದು ಅನ್ಯಾಯವೆಂದು ಭಾವಿಸುವವರು ಕೂಡ ನರೇಂದ್ರರು ಆಚೆಯವಾರ ಬಿಗಿಯಾದ ಹೇಳಿಕೆ ಹೊರಡಿಸಿದ್ದರಿಂದಲೇ ಲೀಗು ಉದ್ಧತವಾದ ಗೊತ್ತುವಳಿ ಮಾಡಿತೆಂದು ಒಪ್ಪಲೇಬೇಕು. ಇದರಿಂದ ನರೇಂದ್ರರ ಬಿಗುಮಾನ ಇನ್ನಷ್ಟು ಹೆಚ್ಚಿ ಅವರು ಘಟನಾ ಸಮಿತಿಯನ್ನು ಹಾರಿಸಿ ಒಗೆಯುವ ತನ್ನ ಸಾಹಸದಲ್ಲಿ ಸಹಕಾರ ನೀಡಲೆಂದು ಲೀಗು ಅಪೇಕ್ಷಿಸಿತ್ತು. ಆದರೆ ಅಂತಃಕಲಹದಿಂದ ನರೇಂದ್ರ ಶಿಬಿರ ದುರ್ಬಲವಾದುದರ ಫಲವಾಗಿ ಅದು ಕಾಂಗ್ರೆಸ್ಸಿನೊಡನೆ ಒಪ್ಪಂದಮಾಡಿಕೊಂಡದ್ದರಿಂದ ಲೀಗೊಂದೇ ಏಕಾಕಿಯಾಗಿ ನಿಲ್ಲಬೇಕಾಗಿದೆ. ಬ್ರಿಟಿಶರು ಅಷ್ಟು ವಿಶ್ವಾಸಾರ್ಹ ಊರುಗೋಲಲ್ಲವೆಂದು ಅದಕ್ಕೆ ಗೊತ್ತು. ಪರಿಣಾಮವಾಗಿ, ಇನ್ನೊಂದು ಮುಖ ಉಳಿಸುವ ಸಾಧನ ಸಿಕ್ಕಿದರೆ ನಿರ್ಣಯವನ್ನು ಬದಲಿಸಲೂ ಬಹುದು ಕಾಂಗ್ರೆಸ್ಸು ಅದನ್ನೊದಗಿಸುವದೆ? ಲಿಯಾಕತ ಅಲ್ಲಿಯವರು ಜವಾಹರಲಾಲರಲ್ಲಿಗೆ ಮೊನ್ನೆ ಭೋಜನಸಮಾರಂಭಕ್ಕೆ ಹೋಗಿದ್ದಕ್ಕೆ ಏನಾದರೂ ಗುರುತರ ಅರ್ಥವಿದ್ದೀತೆ?

ವೆವೆಲ್ಲರಿಗೆ ತಿಕೀಟು?

ಅದು ಹೇಗೇ ಇದ್ದರೂ ಈ ವಾರದ ಅತಿ ಅನಿರೀಕ್ಷಿತ ಸುದ್ದಿಯೆಂದರೆ ವಾಯಿಸರಾಯರಾದ ವೇವೆಲ್ಲರು ಬೇಗವೆ ಪದತ್ಯಾಗ ಮಾಡುವರೆಂಬುದು. ಅವರ ಸ್ಥಾನದಲ್ಲಿ ಅಗ್ನೇಯ ಏಶಿಯಾ ಯುದ್ಧರಂಗದ ಅಧಿಪತಿಯಾಗಿದ್ದ ಅಡ್ಮಿರಲ್ ಲಾರ್ಡ ಲುಯಿ ಮೌಂಟಬ್ಯಾಟನ್ನರು ನೇಮಿಸಲ್ಪಡುವರೆಂಬ ದಟ್ಟವಾದ ಸುದ್ದಿ ಹಬ್ಬಿದೆ. ಇದರಲ್ಲಿ ಆಶ್ಚರ್ಯಕರವಾದುದೇನೂ ಇಲ್ಲ. ಲಾರ್ಡ ವೇವೆಲ್ಲರು ತಮ್ಮ ಅಧಿಕಾರಾವಧಿಯ ಮೊದಲ ವರ್ಷದಲ್ಲಿ ಗಳಿಸಿದ ಹಿಂದೀಯರ— ಎಲ್ಲ ಪಕ್ಷ ಪಂಗಡಗಳ— ಸೌಹಾರ್ದವನ್ನು ಕಳೆದ ಕೆಲ ತಿಂಗಳುಗಳಲ್ಲಿ ಕಳೆದುಕೊಂಡಿದ್ದಾರಲ್ಲ. ಕಾಂಗ್ರೆಸ್ಸು ಒಂದು ಕಾಲದಲ್ಲಿ ಅವರ "ಮುಂದಾಳ್ತನ" ದಲ್ಲಿ ನಡೆಯಲು ಸಿದ್ಧವಾಗಿತ್ತು. ಎಲೆಸ್ಟಿಯ ಶಿಷ್ಯನಲ್ಲಿ ಅದಿಟ್ಟ ಭರವಸೆ ಮಣ್ಣಾಯಿತು. ಲೀಗು ಎಂದೂ ಈ "ಉದಾರ" ಸಂಪ್ರದಾಯವಾದಿಯನ್ನು ನಂಬಿದ್ದಿಲ್ಲ. ಬ್ರಿಟಿಶ ಸರಕಾರ ಕೂಡ ವೇವೆಲ್ಲರಿಗೆ ಋಣಿಯಾಗಿರಲಿಕ್ಕಿಲ್ಲ. ವೇವೆಲ್ಲರು ಲೀಗನ್ನು ನಡುಗಾಲ ಸರಕಾರದೊಳಗೆ ಹೊಗಿಸಿ ಘಟನಾ ಸಮಿತಿಯಲ್ಲಿ ಸೇರಿಸಲಾರದೆ ಹೋದುದರಿಂದ ಉಂಟಾದ ಪರಿಸ್ಥಿತಿಯಿಂದ ಹೊರಬರಲು ಬ್ರಿಟಿಶ ಸರಕಾರಕ್ಕೆ ತನ್ನ ಮಾತು ಮುರಿದು ಅಪಕೀರ್ತಿಗೀಡಾದರೂ ಸಾಧ್ಯವಾಗಿಲ್ಲ. ಆದರೆ ಈ ಸಂಧಿಯಲ್ಲಿ ಅವರನ್ನು ಹೊರಗಟ್ಟಲು ಬ್ರಿಟಿಶ ಸರಕಾರ ನಿರ್ಣಯಿಸಿದೆಯೋ ಎಂಬದು ಇಂದು ನಾಳೆಗೇ ತಿಳಿದು ಹೋಗುವದು. ಅದರ ಜತೆಗೇ ನಡುಗಾಲ ಸರಕಾರದ ಬಗ್ಗೆ ಬ್ರಿಟಿಶ ಹೇಳಿಕೆಯೂ ಹೊರ ಬರುವದು.

ರೇಲ್ವೆ ದರಗಳಲ್ಲಿ ರೂಪಾಯಿಗೆ ೧ ಆಣೆ ಹೆಚ್ಚಳ

ಎಂಜಿನ್ ಕಾರಖಾನೆ ಮೊದಲಾದ್ದಕ್ಕೆ ೫೦ ಕೋಟಿ

೧೯೪೭—೪೮ ರ ರೇಲ್ವೆ ಮುಂಗಡ ಪತ್ರದ ರೂಪರೇಷೆ

ಸಾರಿಗೆ ಮಂತ್ರಿಗಳಾದ ಡಾ. ಜಾನ ಮಥಾಯಿಯವರು ತಾ. ೧೭ ಕ್ಕೆ ಕೇಂದ್ರ ಶಾಸನ ಸಭೆಯ ಮುಂದೆ ಮಂಡಿಸಿದ ರೇಲ್ವೆ ಮುಂಗಡ ಪತ್ರಿಕೆಯ ಪ್ರಾಮುಖ್ಯ ಅಂಶವೆಂದರೆ ಎಲ್ಲ ಕಳೆದು ಸುಮಾರು ೧೦॥ ಕೋಟಿ ಕೊರತೆ ೧೯೪೭—೪೮ ರಲ್ಲಿ ಉಂಟಾಗಬಹುದೆಂಬುದು. ಇದನ್ನು ತುಂಬಿಕೊಳ್ಳಲು ಪ್ರವಾಸಿಕರ ದರಗಳನ್ನು ರೂಪಾಯಿಗೆ ಒಂದಾಣೆಯಷ್ಟು ಮತ್ತು ಮಾಲು ಸಾರಿಗೆ ದರಗಳನ್ನೂ ಅಲ್ಪಸ್ವಲ್ಪ ಏರಿಸಬೇಕೆಂದು ಅವರು ಸೂಚಿಸಿದ್ದಾರೆ.

ಮುಂಗಡ ಪತ್ರಿಕೆಯ ಅಂದಾಜಿನಂತೆ ೧೯೪೭ ೧೯೪೮ರ ರೇಲ್ವೇ ಆಯುವ್ಯಯಗಳು ಇಂತಿವೆ:—

ಸದ್ಯದ ದರಗಳಲ್ಲಿ ಉತ್ಪನ್ನ	೧೮೩ ಕೋಟಿ	
ಸಾಮಾನ್ಯ ನಿರ್ವಾಹ ವೆಚ್ಚಗಳು	೧೩೫.೫೦	,,
ಸವಕಳಿ ನಿಧಿಗೆ ವರ್ಗಾಯಿಸಬೇಕಾದ್ದು	೧೫.೩೪	,,
ರೇಲ್ವೇ ನಿಧಿಗೆ	೫.೦೦	,,
ಸುಧಾರಣೆಯ ನಿಧಿಗೆ	೫.೦೦	,,
ಸಾಮಾನ್ಯ ಇಡುಗಂಟು ನಿಧಿಗೆ	೭.೫೦	,,
ಬಡ್ಡಿ ಇತ್ಯಾದಿ ವೆಚ್ಚ	೨೬.೫೮	,,

ಪ್ರವಾಸಿಕರ ದರದ ಹೆಚ್ಚಳ ಮಾರ್ಚ ೧ ರಿಂದಲೂ ಮಾಲು ಸಾರಿಗೆಯದು ಎಪ್ರಿಲ ೧ ರಿಂದಲೂ ಜಾರಿಗೆ ಬರಬೇಕೆಂದು ಸೂಚಿಸಲಾಗಿದೆ.

ಪ್ರವಾಸಿಕರ ದರ ಹೆಚ್ಚಿಸಿದ್ದರಿಂದ ೪॥ ಕೋಟಿ ಮತ್ತು ಮಾಲು ದರಗಳ ಹೆಚ್ಚಳದಿಂದ ೫॥ ಕೋಟಿ ಉತ್ಪನ್ನ ಹೆಚ್ಚಬಹುದೆಂದೂಹಿಸಲಾಗಿದೆ.

೧೯೪೬—೪೭ ರ ಲಾಭ—ಹಾನಿ

೧೯೪೬—೪೭ ರ ಉತ್ಪನ್ನ ವೆಚ್ಚಗಳ ವರದಿಯನ್ವಯ ಒಟ್ಟು ಉತ್ಪನ್ನ ೨೦೬ ಕೋಟಿಯಾಗಬಹುದೆಂದು ಹೊಸತಾಗಿ ಲೆಕ್ಕ ಹಾಕಲಾಗಿದೆ. ಇದು ೧೯೪೫-೪೬ ರ ಉತ್ಪನ್ನಕ್ಕಿಂತ ೧೯.೭೫ ಕೋಟಿ ಕಡಿಮೆಯಾಗಿದ್ದರೂ ಮುಂಗಡ ಪತ್ರಿಕೆಯ ಅಂದಾಜಿಗಿಂತ ೨೯ ಕೋಟಿ ಹೆಚ್ಚಾಗಿದೆ.

ಸಾಮಾನ್ಯ ನಿರ್ವಾಹ ವೆಚ್ಚ ಕಳೆದ ವರ್ಷಕ್ಕಿಂತ ೧೪ ಕೋಟಿ ಹೆಚ್ಚಾಗಿ ೧೫೯ ಕೋಟಿಗೇರಿದೆ. ಇದು ಮುಂಗಡ ಪತ್ರಿಕೆಯ ಅಂದಾಜಿಗಿಂತ ೩೩.೨೫ ಕೋಟಿ ಹೆಚ್ಚಾಗಿದೆ. ಹೀಗೆ ಒಟ್ಟಿನ ಮೇಲೆ ಮುಂಗಡ ಪತ್ರಿಕೆಯಲ್ಲಿ ಊಹಿಸಿದಂತೆ ೧೨.೨೫ ಕೋಟಿ ಉಳಿತಾಯವಾಗುವ ಬದಲು ೮.೬೬ ಕೋಟಿ ಮಾತ್ರ ಉಳಿತಾಯವಾಗುವದು. ಇದರಿಂದ ಸರಕಾರದ ಸಾಮಾನ್ಯ ಉತ್ಪನ್ನಕ್ಕೆ ೫.೬೧ ಕೋಟಿ, ಸುಧಾರಣಾ ನಿಧಿಗೆ ಮೂರು ಕೋಟಿ ಕೊಟ್ಟ ನಂತರ ರೇಲ್ವೆ ನಿಧಿಗೆ ಬರಿ ೩.೨೫ ಕೋಟಿ ಉಳಿಯುವದೆಂದು ಜಾನ್ ಮಥಾಯಿಯವರು ಹೇಳಿದರು. ಅಂತೂ ೧೯೪೫-೪೬ ಕ್ಕೆ ೧೯೪೬-೪೭ ರಲ್ಲಿ ಒಟ್ಟು ಉಳಿತಾಯ ೧೧.೬೯ ಕೋಟಿ ಕಡಿಮೆಯಾದಂತಾಯಿತು.

೧೯೪೬—೪೭ ರ ವರದಿ

ಸಾರ್ವಜನಿಕ ಪ್ರವಾಸಿಗಳ ಒತ್ತಡ ಎಂದಿಗಿಂತ ಅಧಿಕವಾಗಿವೆ. ಈಗಾಗಲೆ ಅನೇಕ ಯುದ್ಧಪೂರ್ವ ರೇಲ್ವೆ ಸರ್ವೀಸುಗಳು ಆರಂಭವಾಗಿದ್ದರೂ ಡಬ್ಬಿಗಳ ನಿರ್ಮಾಣದ ಸಾಮುಗ್ರಿಗಳ ಕೊರತೆಯಿಂದ ಉಳಿದವುಗಳನ್ನು ಪ್ರಾರಂಭಿಸಲಾಗಿಲ್ಲ. ಅಲ್ಲಲ್ಲಿ ಸಂಪು, ಆಲಸ್ಯದಿಂದ ಕೆಲಸಮಾಡುವದೇ ಮೊದಲಾದ ಕಾರಣಗಳಿಂದ ಉತ್ಪಾದನೆ ಅರ್ಧಮರ್ಧ ಇಳಿದು ಹೋಗಿದ್ದರಿಂದ ಸಾಮುಗ್ರಿಗಳ ನಿರ್ಮಾಣವೂ ರೇಲ್ವೆ ವರ್ಕಶಾಪುಗಳಲ್ಲಿ ಹಿಂದೆಬಿದ್ದಿವೆ. ಆದರೂ ೧೯೪೭—೪೮ರ ಅಂತ್ಯಕ್ಕೆ ಬ್ರಾಡಗೇಜ ಸಾಮುಗ್ರಿಗಳ ಸಂಗ್ರಹ ಸಾಕಷ್ಟಾದೀತೆಂದು ನಿರೀಕ್ಷಿಸಲಾಗಿದೆ. ಯುದ್ಧಕಾಲದಲ್ಲಿ ಆರ್ಡರು ಕೊಟ್ಟ ಬ್ರಾಡಗೇಜ ಯಂತ್ರಗಳೆಲ್ಲ ಈ ವರ್ಷದ ಅಂತ್ಯದಲ್ಲಿಯೂ ಮತ್ತೆ ೪೦೦ ಪ್ರವಾಸಿ ಗಾಡಿ ಯಂತ್ರಗಳು ೧೯೫೦ರೊಳಗೂ ಸಿದ್ಧವಾದಾವೆಂದು ಅವರು ಆಶಿಸಿದರು.

ಕೂಲಿಕಾರರ ಸಂಪಿನ ಬೆದರಿಕೆ ಮತ್ತು ರಾಜಿಯ ವಿಷಯವನ್ನೆತ್ತಿ ಅವರು, ಸಂಬಳ ವಿಷಯದಲ್ಲಿಬೇಗನೆ ಯೋಗ್ಯ ನಿರ್ಣಯಗಳನ್ನು ಸರಕಾರ ಕೈಕೊಳ್ಳುವದೆಂದು ಆಶ್ವಾಸನೆ ಕೊಟ್ಟರು. ಮಾತ್ರ ಸಾರಿಗೆ ಮಂತ್ರಿಗಳು ಸಂಬಳ ಹೆಚ್ಚಳದಿಂದ ಕೂಲಿಕಾರರ ಸ್ಥಿತಿಯೇನು ಸುಧಾರಿಸದೆಂದು ಅಭಿಪ್ರಾಯ ಪಟ್ಟರು. ಏಕೆಂದರೆ ಸಂಬಳ ಹೆಚ್ಚಿದರೆ ಸಾರಿಗೆ ದರ ಹೆಚ್ಚುವದು, ಅದರ ಜತೆಗೆ ವಸ್ತುಗಳ ಬೆಲೆಯೂ ಹೆಚ್ಚುವದೆಂದು ಅವರು ತೋರಿಸಿ ಕೊಟ್ಟರು. ಕೂಲಿಕಾರರು ಸಂಪು, ಆಲಸ್ಯಗಳಿಂದ ಸ್ವಹಿತಕ್ಕೂ ರಾಷ್ಟ್ರೀಯ ಹಿತಕ್ಕೂ ಘಾತ ತರಬಾರದೆಂದು ವಿನಂತಿಸಿಕೊಂಡರು.

ಕಲ್ಲಿದ್ದಲಿ ಸ್ಥಿತಿ ಚಿಂತೆಗೆ ಕಾರಣವಾಗಿದೆ. ಅದಕಾಗಿ ಕಲ್ಲಿದ್ದಲಿ ಉಳಿತಾಯ ಸತ್ರ, ವಿದ್ಯುತ್ ರೇಲ್ವೆ ಮೊದಲಾದ ಪ್ರಯೋಗಗಳು ನಡೆದಿವೆ.

ಹೊಸ ಯೋಜನೆಗಳು

ಹೊಸ ವರ್ಷಕ್ಕಾಗಿ ರೇಲ್ವೆ ಖಾತೆಯವರು ಮಾಡಬೇಕೆಂದಿರುವ ಕಾಮಗಾರಿಗಳಲ್ಲಿ ಎಲ್ಲಕ್ಕಿಂತ ಮಹತ್ವದ್ದೆಂದರೆ ಕಾಂಚನಪಾರಾ (ಬಂಗಾಲ) ದಲ್ಲಿ ಸ್ಥಾಪಿಸಬೇಕೆಂದಿರುವ ರೇಲ್ವೆ ಯಂತ್ರ ನಿರ್ಮಾಣ ಕಾರಖಾನೆಯದು. ೫೦ ಕೋಟಿ ರೂಪಾಯಿ ವೆಚ್ಚ ಹಿಡಿಯುವ ಈ ಕಾರಖಾನೆ ಈ ವರೆಗಿನ ಯೋಜನೆಗಳಲ್ಲೆಲ್ಲ ಅತಿ ದೊಡ್ಡದು. ಅದರಲ್ಲಿ ವರ್ಷಕ್ಕೆ ೧೨೦ ರಿಂದ ೧೫೦ ಎಂಜಿನ್ನುಗಳೂ ೫೦ ಬಾಯ್ಲರುಗಳೂ ಸಿದ್ಧವಾಗಬಹುದು. ಇದಕ್ಕೆ ಸದ್ಯದ ಮುಂಗಡ ಪತ್ರಿಕೆಯಲ್ಲಿಯೆ ೧೧.೫ ಕೋಟಿ ರೂಪಾಯಿ ಗಂಟು ಕಟ್ಟಲಾಗಿದೆ. ಯಂತ್ರಗಳು ೧೯೫೦ರೊಳಗೆ ಸಿದ್ಧವಾಗತೊಡಗಬೇಕೆಂದು ವ್ಯವಸ್ಥೆಗೊಳಿಸಲಾಗಿದೆ. ಇದಲ್ಲದೆ ಕಿತ್ತುಹಾಕಿದ ಮಾರ್ಗಗಳ ಪುನರ್ರಚನೆ ವಿಶಾಖಪಟ್ಟಣದ ಬಂದರ, ಮುಂಡ್ರಭುವಾನ ರೇಲ್ವೆಯನ್ನು ಕೊಳ್ಳುವದು, ಮತ್ತು ಬೇರೆ ಹಲವು ಯೋಜನೆಗಳನ್ನೂ ೧೯೪೭—೪೮ಕ್ಕಾಗಿ ಇಟ್ಟುಕೊಳ್ಳಲಾಗಿದೆ. ಒಟ್ಟು ೫೪.೮೨ ಕೋಟಿ ರೂಪಾಯಿ ಇದಕ್ಕೆ ವೆಚ್ಚವಾಗಬಹುದೆಂದು ಮುಂಗಡ ಪತ್ರದಲ್ಲಿ ವ್ಯವಸ್ಥೆಯುಂಟು.

"ಬೇಕು"ಗಳು

ರೇಲ್ವೆ ಪ್ರವಾಸಿಕರ ಸೌಕರ್ಯಗಳ ಸುಧಾರಣೆಗೆಂದು ಕಳೆದ ವರ್ಷ ಪ್ರಾರಂಭವಾದ ಸುಧಾರಣೆಯ ನಿಧಿಗೆ ಪ್ರತಿವರ್ಷ ಕಡಿಮೆಯೆಂದರೆ ೫ ಕೋಟಿ ರೂಪಾಯಿಗಳನ್ನಾದರೂ ಒದಗಿಸದೆ ನಿರ್ವಾಹವಿಲ್ಲವೆಂದು ಸಾರಿಗೆ ಮಂತ್ರಿಗಳು ಅಭಿಪ್ರಾಯಪಟ್ಟರು. ಅದೇ ಪ್ರಕಾರ ೮೦೦ ಕೋಟಿ ರೂಪಾಯಿ ಮೂಲಧನ ವಿನಿಯೋಗವುಳ್ಳ ಹಿಂದುಸ್ತಾನದಲ್ಲೆಲ್ಲ ಅತಿ ದೊಡ್ಡ ಔದ್ಯೋಗಿಕ ಸಂಸ್ಥೆಯಾದ ರೇಲ್ವೆಗೆ ಈಗಿರುವ ರೇಲ್ವೆ ಇಡುಗಂಟಿನ

(೧೮ ನೇ ಪುಟ ನೋಡಿರಿ)

ಸಂಪಾದಕೀಯ ಟೀಕೆಟಿಪ್ಪಣಿಗಳು

ಹಿಂದುಸ್ಥಾನದ ಸಮಸ್ಯೆ

ಹಿಂದುಸ್ಥಾನದ ಸಮಸ್ಯೆ ಮತ್ತೆ ಬಿಕ್ಕಟ್ಟಿನದಾಗಿದೆ. ಮುಸ್ಲಿಂ ಲೀಗು ಹಿಂದಕ್ಕೊಂದಂತೆ ಕಾಂಗ್ರೆಸ್ಸು ಬ್ರಿಟಿಶ ಸರಕಾರದ ಸ್ಪಷ್ಟೀಕರಣವನ್ನು ಒಪ್ಪಿಕೊಂಡಿತ್ತಾದರೂ ಅದು ಒಪ್ಪಿಗೆಯುಳ್ಳ ಎಂಬುದಾಗಿ ಅದಕ್ಕೆ ಅಪಾರ್ಥ ಮಾಡಿ ಘಟನಾಸಮಿತಿಗೆ ಹಾಕಿದ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳಲು ಅದು ಸಿದ್ಧವಿಲ್ಲ. ಘಟನಾಸಮಿತಿಯನ್ನು ಸೇರಬಯಸದವರಿಗೆ ಸ್ವಾಭಾವಿಕವಾಗಿ ಮತ್ತೆ ಮಂತ್ರಿತ್ರಯ ಯೋಜನೆಯನ್ವಯ ನಡುಗಾಲ ಸರಕಾರದಲ್ಲಿ ಸ್ಥಾನವಿಲ್ಲ; ಇದರಿಂದ ಕಾಂಗ್ರೆಸ ಧುರೀಣರು ಈ ಮಾತನ್ನು ಬ್ರಿಟಿಶ ಸರಕಾರದ ಗಮನಕ್ಕೆ ತಂದುಕೊಟ್ಟಿದ್ದಾರೆ. ಪತ್ರವನ್ನು ಬರೆದಿದ್ದಾರೆ. ಮುಸ್ಲಿಂ ಲೀಗು ಇದಕ್ಕೆ ಕಾಂಗ್ರೆಸ್ಸು ಮಂತ್ರಿತ್ರಯ ಘೋಷಣೆಯನ್ನೊಪ್ಪಿಲ್ಲ, ತಾವು ಒಪ್ಪುವದಿಲ್ಲ. ಬೇರೆ ಯಾವದಕ್ಕೂ ಒಪ್ಪಿಲ್ಲ. ಅಂದಬಳಿಕ ಬೇರೆ ಪಕ್ಷದವರಿಗೆ ನಡುಗಾಲ ಸರಕಾರದವರಲ್ಲಿ ಎಷ್ಟು ಅಧಿಕಾರವಿದೆಯೋ ಅಷ್ಟೇ ಅಧಿಕಾರ ತಮಗೂ ಇದೆಂದು ಮುಸ್ಲಿಂ ಲೀಗಿನವರು ಪ್ರತಿಪಾದಿಸುತ್ತಿರುವರು. ಇದು ಎಷ್ಟರಮಟ್ಟಿಗೆ ಸಮಂಜಸವಾದುದೆಂಬುದನ್ನು ಬ್ರಿಟಿಶ ಸರಕಾರದವರು ವಿಚಾರಿಸಬೇಕು. ಬ್ರಿಟಿಶ ಸರಕಾರದ ಪರರಾಷ್ಟ್ರ ಮಂತ್ರಿಗಳಾದ ಬೆವಿನ್‌ರು ಲಂಡನದಲ್ಲಿ ಅವೇಳೆಯಲ್ಲಿ ಹಿಂದುಸ್ಥಾನ ರಾಜ್ಯಭಾರಿಗಳಾಗಿ ನೇಮಕಹೊಂದಿದ ಅಸಫ ಅಲ್ಲಿಯವರ ಸ್ವಾಗತ ಸಭೆಯಲ್ಲಿ ಮಾತಾಡುತ್ತ ಸ್ವತಂತ್ರ ಹಿಂದುಸ್ಥಾನವನ್ನು ಹಿಂದೀಯರಿಗೊಪ್ಪಿಸಬೇಕೆಂದು ಮಾಡಿದ್ದು ಹಿಂದೀಯರು ಯಾದವೀ ಯುದ್ಧವನ್ನು ನಿಲ್ಲಿಸಿ ಹಿಂದುಸ್ಥಾನವನ್ನು ತಮ್ಮ ಕಡೆಯಿಂದ ತೆಗೆದುಕೊಳ್ಳಬೇಕೆಂದು ಉಸರಿದ್ದಾರೆ. ಅದರೆ ಈ ಯಾದವಿಗೆ ಕಾಲಕಾಲಕ್ಕೆ ಪ್ರೋತ್ಸಾಹನೆ ಕೊಟ್ಟವರು, ಅದು ಬೆಳೆಯಲಿಕ್ಕೆ ನೀರೆರೆಚಿದವರು ಬ್ರಿಟಿಶರೆ ಎಂಬುದನ್ನು ಮಾತ್ರ ಬೆವಿನ್ ಸಾಹೇಬರು ಮರೆತಂತೆ ತೋರುತ್ತದೆ. ಇರಲಿ.

ಪರಿಹಾರಮಾರ್ಗಗಳು

ಬ್ರಿಟಿಶರು ಹಿಂದೀ ಯಾದವಿಯನ್ನು ಬೆಳೆಸಲು ಹಿಂದೆ ಯಾವದೇ ಸ್ವಾರ್ಥಮಯ ಧೋರಣಮಾರ್ಗ ಸ್ವೀಕರಿಸಿರಲಿ ಈಗ ಅಂಥ ವಾಮ ಮಾರ್ಗವನ್ನು ಬಿಟ್ಟುಕೊಟ್ಟು ಹಿಂದುಸ್ಥಾನದ ಮತ್ತು ಬ್ರಿಟನದ ಅಷ್ಟೇ ಏಕೆ ಇಡೀ ಜಗತ್ತಿನ ಶಾಂತಿ ಸೌಖ್ಯವನ್ನನುಲಕ್ಷಿಸಿ ಹಿಂದೀ ಸಮಸ್ಯೆಯ ಪರಿಹಾರ ಮಾರ್ಗವನ್ನನುಸರಿಸಬೇಕು. ಈ ಸಂಬಂಧದಲ್ಲಿ ಹಲವು ಸೂಚನೆಗಳನ್ನು ಮಾಡಬಯಸುತ್ತೇವೆ. ಮೊದಲನೆಯದಾಗಿ ಕಾಂಗ್ರೆಸು ಮಂತ್ರಿತ್ರಯ ಘೋಷಣೆಯನ್ನು, ಸ್ಪಷ್ಟೀಕರಣವನ್ನು ಸ್ವೀಕರಿಸಿದ್ದರಿಂದ ನಡುಗಾಲ ಸರಕಾರದಲ್ಲಿ ಉಳಿಯಲು ಅದಕ್ಕೆ ಅಧಿಕಾರವಿದೆ. ಮುಸ್ಲಿಂ ಲೀಗಿನವರೂ ಅದನ್ನೊಪ್ಪಿ ಘಟನಾಸಮಿತಿಯನ್ನು ಸೇರುವ ನಿರ್ಧಾರ ಮಾಡಿದರೆ ಮಾತ್ರ ನಡುಗಾಲ ಸರಕಾರದಲ್ಲಿ ಉಳಿಯಲು ಅವರಿಗೆ ಅಧಿಕಾರವಿದೆ. ಇಲ್ಲದಿದ್ದರೆ ಅವರು ನಡುಗಾಲ ಸರಕಾರದಿಂದ ಹೊರ ಹೊರಡಬೇಕು, ಎಂದು ಸ್ಪಷ್ಟವಾಗಿ ಹೇಳಬೇಕು. ಎರಡನೆಯದಾಗಿ ಘಟನಾ ಸಮಿತಿಯ ಕಾರ್ಯವನ್ನು ಹಾಗೆಯೇ ಮುಂದಕ್ಕೆ ಸಾಗಿಸಬೇಕು. ಈ ಕಾರ್ಯಕ್ಕೆ ಯಾರೂ ವ್ಯತ್ಯಯವನ್ನುಂಟುಮಾಡದಂತೆ ನೋಡಿಕೊಳ್ಳಬೇಕು. ಆ ಘಟನಾ ಸಮಿತಿಯ ನಿರ್ಣಯಗಳು ಇಡಿ ಹಿಂದುಸ್ಥಾನಕ್ಕೆ ಬಂಧನಕಾರಕವೆಂದು ಸಾರಬೇಕು. ಈ ಮೊದಲು ಹೀಗೆ ಹೇಳಿಬಿಟ್ಟಿದ್ದರೆ ಇಷ್ಟೊಂದು ತೊಡಕು ಉದ್ಭವವಾಗುತ್ತಿದ್ದಿಲ್ಲ ಈಗಲಾದರೂ ಹಾಗೆ ಸಾರಿಬಿಡಬೇಕು. ಇಷ್ಟೊಂದು ಧೈರ್ಯದಿಂದ ವರ್ತಿಸುವದು ಬ್ರಿಟಿಶರಿಗೆ ಶಕ್ಯವಿಲ್ಲದಿದ್ದರೆ ಈ ಪ್ರಶ್ನೆಯನ್ನು ಯುಕ್ತರಾಷ್ಟ್ರ ಸಂಘಕ್ಕೊಪ್ಪಿಸಲು ಸಿದ್ಧರಾಗಬೇಕು. ಕಾಂಗ್ರೆಸ್ಸು ಇದಕ್ಕೆ ಸಿದ್ಧವಿದೆ ಲೀಗೂ ಸಿದ್ಧವಾಗಲು ಹೇಳಬೇಕು. ಕೊನೆಯ ಮಾರ್ಗವೆಂದರೆ ಕ್ರಿಪ್ಸ್ ಮಹಾಶಯರು ಹೇಳಿದಂತೆ ಇಂಥದೊಂದು ತಾರೀಖನ್ನು ಗೊತ್ತುಪಡಿಸಿ ಬ್ರಿಟಿಶರು ಹಿಂದುಸ್ಥಾನವನ್ನು ಬಿಟ್ಟುಕೊಟ್ಟು ಹೊರಟುಹೋಗಬೇಕು. ಅಂದರೆ ಇಲ್ಲಿನ ಜನರು ಪರಸ್ಪರ ಒಡಂಬಡಿಕೆಯಿಂದಾಗಲಿ ಇಲ್ಲವೆ ಪ್ರಸಂಗಬಂದರೆ ಯಾದವಿಯುದ್ಧದಿಂದಾಗಲಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಲ್ಲರು. ಹೀಗಾದರೆ ಸುಸ್ಥಿರ ಸುಭದ್ರವಾದ ಸಮಸ್ಯೆ ಪರಿಹಾರವಾದಂತಾಗುವದು. ಶಾಶ್ವತವಾದ ಶಾಂತಿ ಹಿಂದುಸ್ಥಾನದಲ್ಲಿ ನೆಲೆಗೊಳ್ಳುವದು.

ಇಲ್ಲದಿದ್ದರೆ ?

ಬ್ರಿಟಿಶ ಸರಕಾರದವರು ಈ ಮಾರ್ಗವನ್ನು ಅನುಸರಿಸದೆ ಈ ಪ್ರಶ್ನೆಯನ್ನು ಹೀಗೆಯೆ ಕೊಳೆಯಬಿಟ್ಟರೆ ಭೀಕರ ಪರಿಸ್ಥಿತಿಯುಂಟಾಗುವದೆಂದು ಪ್ರತ್ಯೇಕ ಹೇಳಬೇಕಿಲ್ಲ. ಏಕೆಂದರೆ ಹಿಂದುಸ್ಥಾನವಿಂದು ಅಸ್ವತಂತ್ರವುಳಿಯುವದು ಸಾಧ್ಯವಿಲ್ಲ. ಡಾ. ಅಸಫ ಅಲ್ಲಿಯವರು ಹೇಳಿದಂತೆ ಅದು ಈಗ ಚಿತ್ತವೃತ್ತಿ ನಿರ್ಧಾರಗಳಿಂದ ಸ್ವತಂತ್ರವಾಗಿದೆ. ಅದರಿಗೆ ಸ್ವಾತಂತ್ರ್ಯ ಈಗ ಸಿಕ್ಕದಿದ್ದರೆ ಭಯಂಕರ ಕ್ರಾಂತಿ, ಅದು ರಕ್ತಮಯವಿರಬಹುದು — ರಕ್ತರಹಿತವಿರಬಹುದು. ಹಿಂದುಸ್ಥಾನದಲ್ಲಿ ಏಳದೆ ಇರದು. ಹಿಂದುಸ್ಥಾನ ಮತ್ತು ಬ್ರಿಟನ್‌ಗಳ ನಡುವೆ ಸ್ಥಿರವಾದ ದ್ವೇಷ ಬೆಳೆಯಲು ಇದು ಅವಕಾಶ ಕಲ್ಪಿಸಿಕೊಡುವುದು ಇದು ತಮಗೆ ಎಷ್ಟರ ಮಟ್ಟಿಗೆ ಹಿತಕಾರಕವೆಂಬುದನ್ನು ಬ್ರಿಟಿಶರು ವಿಚಾರಿಸಬೇಕು. ಇನ್ನು ಬ್ರಿಟಿಶರು ಯಾವದೇ ಕಾರಣದಿಂದ ಮುಸ್ಲಿಂ ಲೀಗಿನ ಪಾಕಿಸ್ಥಾನ ಬೇಡಿಕೆ ಗೊಪ್ಪಿದರೆ ಹಿಂದುಸ್ಥಾನವನ್ನು ಗಂಡಾಂತರಕ್ಕೀಡು ಮಾಡಿದಂತಾಗುವುದು. ಇದರಿಂದ ರಶಿಯದ ಹೊಸ ಬಗೆಯ ಸಾಮ್ರಾಜ್ಯ ಪ್ರಸಾರ ಕಾರ್ಯಕ್ಕೂ ಅವಕಾಶ ಕಲ್ಪಿಸಿಕೊಟ್ಟಂತಾಗುವದು. ಈಗ ಬ್ರಿಟಿಶರಿಗೆ ಬೇರೆ ಅನೇಕ ಸಮಸ್ಯೆಗಳು ತಲೆತಿನ್ನುತ್ತಿವೆಂಬುದು ನಮಗೆ ಗೊತ್ತು. ವಿಶೇಷತಃ ಬ್ರಿಟನದಲ್ಲಿಯೆ ಉಂಟಾದ ಕಲ್ಲಿದ್ದಲಿ ಬಿಕ್ಕಟ್ಟು ಹೆಚ್ಚಾಗಿ ಬಾಧಿಸಹತ್ತಿದೆ. ಸದ್ಯದ ಬ್ರಿಟಿಶ ಕೂಲಿಕಾರ ಸರಕಾರದಲ್ಲಿಯೆ ಬದಲಾವಣೆಯಾಗಬಹುದೇನೊ ಎಂದೂ ಎನಿಸುತ್ತದೆ. ಇತ್ತ ಪಾಲಿಸ್ಥಾನ ಪ್ರಶ್ನೆಯೂ ಅವರ ತಲೆತಿನ್ನುತ್ತಿತ್ತು. ಅದರೀಗ ಅದನ್ನೀಗ ಯುಕ್ತ ರಾಷ್ಟ್ರಸಂಘಕ್ಕೊಪ್ಪಿಸಿರುವರು. ಇಜಿಪ್ತ, ಬ್ರಹ್ಮದೇಶಗಳ ಪ್ರಶ್ನೆಯೂ ಇನ್ನೂ ಪೂರ್ಣ ಬಗೆಹರಿದಿಲ್ಲ ಈ ಎಲ್ಲ ಸಮಸ್ಯೆಗಳಲ್ಲಿ ಬ್ರಿಟಿಶರು ಸ್ವಾರ್ಥವನ್ನು ಬಿಟ್ಟುಕೊಡಲು ಸಿದ್ಧರಾಗಿ ಸಮಸ್ಯೆ ಪರಿಹಾರ ಮಾರ್ಗವನ್ನು ಹುಡುಕಿದರೆ ಅದು ಸಕ್ಕೀ ಸಿಕ್ಕುವುದೆಂದು ಹೇಳಬಲ್ಲೆವು. ಬ್ರಿಟಿಶರ ಮುತ್ಸದ್ದಿತನದ ಪರೀಕ್ಷಾ ಕಾಲವೀಗ ಇದ್ದು ಇದರಲ್ಲಿ ಅವರು ಉತ್ತೀರ್ಣರಾಗಿ ಜಾಗತಿಕ ಶಾಂತಿಯ ಮಾರ್ಗವನ್ನು ನಿಷ್ಕಂಟಕ ಮಾಡುವರೆಂದು ನಂಬುತ್ತೇವೆ.

ರೇಲ್ವೆ ಮುಂಗಡ ಪತ್ರಿಕೆ

ಹಿಂದುಸ್ಥಾನ ನಡುಗಾಲ ಸರಕಾರದ ಸಾರಿಗೆ ಮಂತ್ರಿಗಳಾದ ಜಾನ ಮಥಾಯಿಯವರು ರಾಷ್ಟ್ರೀಯ ಸರಕಾರದ ಮೊದಲನೆ ರೇಲ್ವೆ ಮುಂಗಡ ಪತ್ರವನ್ನು ಶಾಸನ ಸಭೆಯಲ್ಲಿ ಮಂಡಿಸಿದವರು. ಹಿಂದುಸ್ಥಾನದ ರೇಲ್ವೆಗಳ ಆಗು ಹೋಗುಗಳನ್ನು ನಿರ್ಧರಿಸುವ ಅಧಿಕಾರ ಈಗ ಹಿಂದೀ ಮಂತ್ರಿಗಳ ಕೈಯಲ್ಲಿ ಬಂದುದು ಸಂತೋಷಕರವಾಗಿದೆ. ಇದರಿಂದ ಹಿಂದುಸ್ಥಾನದ ರೇಲ್ವೆ ಆಡಳಿತದಲ್ಲಿ ಸುಧಾರಣೆಗಳು ಆಗಿ ಜನತೆಯ ಸಂಕಷ್ಟಗಳೂ ನಿವಾರಿಸಲ್ಪಡುವುವೆಂದು ಆಶಿಸಲಾಗಿದೆ. ಹೊಸವರ್ಷದಲ್ಲಿ ಅಂದರೆ ೧೯೪೭-೪೮ರಲ್ಲಿ ಈಗಿನ ಪ್ರಮಾಣದಂತೆ ೧೮೩ ಕೋಟಿ ರೂಪಾಯಿ ಉತ್ಪನ್ನವಾಗಿ ಎಲ್ಲ ವೆಚ್ಚ ಹೋಗಿ ಕೇವಲ ೭ ಕೋಟಿ ನಿಕ್ಕಿ ಉಳಿತಾಯವಾಗುತ್ತದೆ. ಕಳೆದ ವರ್ಷಕ್ಕಿಂತ ಹೊಸ ವರ್ಷದ ಉತ್ಪನ್ನ ೨೩ ಕೋಟಿ ಕಡಮೆ ಯಾಗುವುದು. ಆದರೆ ಯುದ್ಧೋತ್ತರ ಕಾಲದಲ್ಲಿ ಹೀಗೆ ಆಗುವದು ಸ್ವಾಭಾವಿಕವಾದುದೆಂಬುದನ್ನರಿತವರು ಇದರಿಂದ ಯಾವ ಬಗೆಯಿಂದಲೂ ಖತಿಗೊಳ್ಳರು. ಯುದ್ಧಪೂರ್ವದಲ್ಲಿ ರೇಲ್ವೆಯ ಉತ್ಪನ್ನ ೧೦೦ ಕೋಟಿ ರೂಪಾಯಿ ಇತ್ತು. ಯುದ್ಧ ನಡೆದ ಆ ೫-೬ ವರುಷಗಳಲ್ಲಿ ಉತ್ಪನ್ನ ಏರಿ ೨೨೫ ಕೋಟಿ ರೂ. ಯಾಗಿತ್ತು. ಅದು ಹೇಗೆ ಏರುತ್ತ ಯುದ್ಧಕಾಲದಲ್ಲಿ ಹೋಗಿತ್ತೊ ಹಾಗೆ ಯುದ್ಧಾನಂತರ ಕಾಲದಲ್ಲಿ ಇಳಿಯುತ್ತ ಹೋಗುವದೆಂಬುದು ಸಿದ್ಧವಾದುದು. ಈ ಪರಿಸ್ಥಿತಿಯಲ್ಲಿ ರೇಲ್ವೆ ಮಂತ್ರಿಗಳು ಮತ್ತು ಇತರರು ವಿವಂಚನೆಗೊಳಗಾಗುವದು ಸ್ವಾಭಾವಿಕ. ಏಕೆಂದರೆ ಉತ್ಪನ್ನ ಕಡಮೆಯಾದ ಪ್ರಮಾಣದಲ್ಲಿ ವೆಚ್ಚ ಕಡಮೆಯಾಗಲಾರದು. ರೇಲ್ವೆ ಮಂತ್ರಿಗಳು ಸರಕಾರದ ಬೊಕ್ಕಸಕ್ಕೆ ೭॥ ಕೋಟಿ, ಸುಧಾರಣೆ ನಿಧಿಗೆ ೫ ಕೋಟಿ, ಮತ್ತು ರೇಲ್ವೆ ಕಾದಿಟ್ಟ ನಿಧಿಗೆ ೫ ಕೋಟಿ ಹೀಗೆ ಲಾಭದಲ್ಲಿ ಕೊಡಬೇಕಾಗುವದರಿಂದ ಕಡಮೆ ಬೀಳುವ ೧೦ ಕೋಟಿ ರೂಪಾಯಿಗಳನ್ನು ತುಂಬಿಕೊಳ್ಳಲು ಮೂರನೆ ವರ್ಗದ ಪ್ರವಾಸಿಗರ ದರಗಳಲ್ಲಿ ೧೦೦ಕ್ಕೆ ೬। ದಂತೆ ಏರಿಸಿ ೪॥ ಕೋಟಿ ರೂಪಾಯಿಗಳನ್ನು ಮತ್ತು ಕೆಲ ಸ್ಟೇಶನಗಳ ನಡುವೆ ಇದ್ದ ಸಾರಿಗೆ ಸೌಕರ್ಯ ದರಗಳನ್ನು ನಿಲ್ಲಿಸಿ ೫॥ ಕೋಟಿ ರೂಪಾಯಿಗಳನ್ನು ಪಡೆಯಬೇಕೆಂದು ಬಗೆಯಲಾಗಿದೆ. ಹೀಗೆ ಸರಕಾರ ಸಾಮಾನ್ಯ ಬೊಕ್ಕಸಕ್ಕೆ ಹಣದ ಕೊರತೆಯಾಗುವದೆಂದು ದರಗಳನ್ನೇರಿಸುವದು ಅರ್ಥಶಾಸ್ತ್ರಕ್ಕೆ ವಿರೋಧಕವಾದುದು ಅದುದರಿಂದ ಮಾನ್ಯ ಮಂತ್ರಿಗಳು ಹಾಗೆ ದರಗಳನ್ನೇರಿಸುವಾಗ ಮತ್ತು ಸರಕಾರದ ಬೊಕ್ಕಸವನ್ನು ತುಂಬುವಾಗ ಹೆಚ್ಚು ವಿಚಾರ ಮಾಡಬೇಕಾದದು ಅವಶ್ಯವಾಗಿದೆ. ರೇಲ್ವೆ ಆಡಳಿತವೀಗ ಹಿಂದೀಯರ ಕೈಯಲ್ಲಿ ಬಂದದ್ದರಿಂದ ಮೂರನೇ ವರ್ಗದ ಪ್ರವಾಸಿಕರಗೋಳು ಬಹುಮಟ್ಟಿಗೆ ಸುಧಾರಿಸುವದೆಂದು ನಂಬಲಾಗಿದೆ. ಅಲ್ಲದೆ ಭಾರತದಲ್ಲಿಯ ಕಾರಖಾನೆಗಳಲ್ಲಿಯೆ ಎಂಜಿನ್ ಮತ್ತು ಅವುಗಳ ಉಪಕರಣಗಳು ಸಿದ್ಧವಾಗುವಂತೆಯೆ ನೋಡಿಕೊಳ್ಳಬೇಕು. ಒಟ್ಟಾರೆ ಹಿಂದುಸ್ಥಾನದ ಜನತೆಯ ಹಿತವನ್ನೆ ಮುಖ್ಯ ಧ್ಯೇಯವನ್ನಾಗಿಟ್ಟುಕೊಂಡು ರೇಲ್ವೆ ಖಾತೆಯ ಆಡಳಿತ ಸಾಗಲೆಂದು ಹಾರಯಿಸುತ್ತೇವೆ.

ಬೇಗನೆ ಜಾರಿಯಲ್ಲಿ ಬರಲಿ

ಆಹಾರ ಪದಾರ್ಥಗಳ ಸಾಕಷ್ಟು ಪೂರೈಕೆ ಜನರಿಗೆ ಆಗುವಂತೆ ನೋಡಿಕೊಳ್ಳಲು ಮುಂಬಯಿ ಸರಕಾರದವರು ದೃಢವಾಗಿ ನಿರ್ಧರಿಸಿದ್ದಾರೆಂದು ಪೂರೈಕೆ ಮಂತ್ರಿಗಳಾದ ಶ್ರೀ ದಿನಕರರಾವ ದೇಸಾಯಿಯವರು ಗುಜರಾಥ ಕಾಂಗ್ರೆಸ ಕಾರ್ಯಕರ್ತರ ಸಭೆಯಲ್ಲಿ ಕಳೆದ ಶುಕ್ರವಾರ ಘೋಷಿಸಿದರು. ಸರಕಾರದವರು ಇನ್ನು ಮುಂದೆ ಎಲ್ಲ ಅವಶ್ಯಕ ಸಾಮಾನುಗಳನ್ನು ಗುತ್ತಿಗೆ ಪದ್ಧತಿಯಿಂದ ಪಡೆದು ಸಹಕಾರ ಸಂಘಗಳ ಮತ್ತು ಗ್ರಾಮಪಂಚಾಯತಿಗಳಂಥ ಕ್ರಮಬದ್ಧ ಸಂಸ್ಥೆಗಳ ಮೂಲಕ ಹಂಚಬೇಕೆಂದು ನಿರ್ಧರಿಸಿದ್ದೇವೆಂದೂ ಮಂತ್ರಿವರ್ಯರು ಆಶ್ವಾಸಿಸಿದರು. ಮಂತ್ರಿಗಳ ಈ ಘೋಷಣೆಯಿಂದ ಜನರು ಸ್ವಲ್ಪ ಮಟ್ಟಿಗೆ ಸಮಾಧಾನದ ಉಸಿರುಗರೆಯಬಹುದು. ಹಿಂದುಸ್ಥಾನ ಹಲವಾರು ವರ್ಷಗಳಿಂದ ಆಹಾರ ಪದಾರ್ಥಗಳಲ್ಲಿ ಕೊರತೆಯ ದೇಶವಾಗಿದ್ದು ೩೦ ಲಕ್ಷ ಟನ್‌ಗಳ ಧಾನ್ಯವನ್ನು ಹೊರಗಿನಿಂದ ತರಿಸಬೇಕಾಗುವದೆಂದೂ ಹೇಳಿದರು. ಸಂಪನ್ನ ಹಿಂದುಸ್ಥಾನ ಈರೀತಿ ಕೊರತೆಯ ನಾಡಾಗಿ ಪರಿಣಮಿಸಿದ್ದಕ್ಕೆ ಹಿಂದಿನ ಪರಕೀಯ ಸರಕಾರದ ಧೋರಣವೆ ಕಾರಣವೆಂಬುದನು ಪ್ರತ್ಯೇಕ ಹೇಳಬೇಕಿಲ್ಲ. ಹಿಂದುಸ್ಥಾನ ಆಹಾರ ಪದಾರ್ಥಗಳಲ್ಲಿ ಉಳಿತಾಯದ ರಾಷ್ಟ್ರವಾಗುವಂತೆ ನೋಡಿಕೊಳ್ಳುವದು ರಾಷ್ಟ್ರೀಯ ಸರಕಾರದ ಕರ್ತವ್ಯವಾಗಿದೆ. ಇರಲಿ. ಈಗ ಮಂತ್ರಿವರ್ಯರು ಆಶ್ವಾಸಿಸಿದಂತೆ ಜೀವನಾವಶ್ಯಕ ವಸ್ತುಗಳು ಜನತೆಗೆಲ್ಲ ಸಾಕಷ್ಟು ಪ್ರಮಾಣದಲ್ಲಿ ಸಿಗುವಂತೆ ಬೇಗನೆ ಉಪಾಯಗಳನ್ನು ಕೈಕೊಳ್ಳಬೇಕು. ಬೆಲ್ಲ, ಶೇಂಗಾದೆಣ್ಣೆ, ಕೊಬ್ಬರಿ ಎಣ್ಣೆಗಳಂಥ ಅವಶ್ಯಕ ಪದಾರ್ಥಗಳ ಸಂಬಂಧದಲ್ಲಿ ಇಂದು ಜನ ಪಡುತ್ತಿರುವ ಸಂಕಷ್ಟಗಳನ್ನು ನೋಡಿದರೆ ನಮ್ಮ ರಾಜ್ಯ ಬಂದರೂ ನಮಗೆ ಸುಖ ದೊರೆಯಲೊಲ್ಲದೆಂದು ದುಃಖದ ನಿಟ್ಟುಸಿರು ಬಿಡಬೇಕಾಗುತ್ತದೆ. ಹುಬ್ಬಳ್ಳಿಯಂಥ ಕರ್ನಾಟಕದ ರಾಜಧಾನಿಯಾಗಲಿರುವ ನಗರದಲ್ಲಿ ಕಳೆದ ಎರಡು ತಿಂಗಳುಗಳಿಂದ ಬೆಲ್ಲ ಸಿಕ್ಕುವದಿಲ್ಲ, ಇದಕ್ಕೆ ಹೊಣೆಗಾರರಾರೆಂಬುದೆ ತಿಳಿಯದಾಗಿದೆ! ಈ ಬಗ್ಗೆ ಬರೆದು ಬರೆದು ನಮ್ಮ ಲೆಕ್ಕಣಿಕೆಯೆ ಮೊಂಡವಾಯಿತಲ್ಲದೆ ಪರಿಸ್ಥಿತಿಯೇನು ಸುಧಾರಿಸಲಿಲ್ಲ!! ಕೊಬ್ಬರಿ ಎಣ್ಣೆಯ ಧಾರಣೆಗೆ ಮಿತಿಯೇ ಇಲ್ಲ. ಅಲ್ಲದೆ ಶುದ್ಧ ಕೊಬ್ಬರಿ ಎಣ್ಣೆ ಸಿಕ್ಕದಂತೆಯೆ ಆಗಿದೆ. ಹೇಳಿದಷ್ಟು ಹಣ ಕೊಟ್ಟು ಶೇಂಗಾದೆಣ್ಣೆ, ರಿಫಾಯಿನ್ ಎಣ್ಣೆ ಮಿಶ್ರಿತ ಕೊಬ್ಬರಿ ಎಣ್ಣೆ ಕೊಳ್ಳಬೇಕಾದ ಪ್ರಸಂಗ ಬಂದಿದೆ. ಇದೆಲ್ಲ ಪರಿಸ್ಥಿತಿ ಹೋಗಬೇಕಾದರೆ ಸರಕಾರದ ಯಂತ್ರ ವೇಗದಿಂದ ಚಲಿಸಬೇಕು. ಮೀನಮೇಷ ಮಾಡುತ್ತ ಕೂತರೆ ಪರಿಸ್ಥಿತಿ ಬಿಕ್ಕಟ್ಟಿನದಾಗುವದು. ಜೀವನಾವಶ್ಯಕ ಪದಾರ್ಥಗಳನ್ನೆಲ್ಲ ಬೇಗ ವಶಪಡಿಸಿಕೊಂಡು ಜನತೆಯಲ್ಲಿ ಹಂಚುವ ಏರ್ಪಾಡು ನಡೆಯಬೇಕು. ವ್ಯಾಪಾರಸ್ಥರ, ನಡುವಿನ ದಲ್ಲಾಳರ ಲಾಭಬಡುಕತನಕ್ಕೆ ಅವಕಾಶವಿರಕೂಡದು. ಸರಕಾರಿ ಅಧಿಕಾರಿಗಳ ಅಲಕ್ಷ್ಯ, ಪಕ್ಷಪಾತ, ಲಂಚಗುಳಿತನಕ್ಕೂ ಎಡೆಯಿರಬಾರದು. ಹೀಗೆ ಎಲ್ಲ ಬಗೆಯ ನಿರ್ದುಷ್ಟ ಉಪಾಯ ಜಾರಿಯಲ್ಲಿ ಬಂದರೆ ಮಾತ್ರ ಸರಕಾರದ ಉದ್ದಿಷ್ಟ ಸಫಲವಾಗಿ ಜನತೆಯ ಬವಣೆ ದೂರಾಗಬಲ್ಲುದು.

ಪ್ರಾಥಮಿಕ ಶಿಕ್ಷಕರ ಸಂಪು

ಮುಂಬಯಿ ಪ್ರಾಂತದಲ್ಲಿಯ ಪ್ರಾಥಮಿಕ ಶಿಕ್ಷಕರು ಬರುವ ಮಾರ್ಚ ೧೩ ರಿಂದ ಸಂಪು ಹೂಡುವುದಾಗಿ ನಿರ್ಧರಿಸಿದ್ದು ವಿಷಾದಕರವಾಗಿದೆ. ಶಿಕ್ಷಕರ ಪರಿಸ್ಥಿತಿಯನ್ನು ಸುಧಾರಿಸಲು ಮುಂಬಯಿ ಸರಕಾರದವರು ಶಿಕ್ಷಣ, ಮುಖ್ಯ ಮಂತ್ರಿಗಳಾದ ಶ್ರೀ ಬಾಳಾಸಾಹೇಬ ಖೇರರು ಅತ್ಯಂತ ಸಹಾನುಭೂತಿಯಿಂದ ವರ್ತಿಸುತ್ತಿರುವರೆಂಬುದು ಅರಿತ ಮಾತು. ಆದರೆ ಸದ್ಯಕ್ಕೆ ಸ್ಥಾನಿಕ ಸಂಸ್ಥೆಗಳ ಕೈಯಲ್ಲಿ ಪ್ರಾಥಮಿಕ ಶಿಕ್ಷಣ ಸೂತ್ರಗಳಿದ್ದುದರಿಂದ ಶಿಕ್ಷಕರಿಗೆ ಪರಿಹಾರ ಸಿಕ್ಕಲು ತಡವಾಗಿದೆ. ವಿಳಂಬವಾಗಿದೆ, ಅಂತೆಯೆ ಶಿಕ್ಷಣ ಮಂತ್ರಿಗಳು ಬರುವ ಮಾರ್ಚ ೧ ರೊಳಗಾಗಿ ತಾವು ಕೊಡಮಾಡಿದ ಭತ್ತೆಯಲ್ಲ ಶಿಕ್ಷಕರಿಗೆ ಸಿಕ್ಕುವಂತೆ ನೋಡಿಕೊಳ್ಳುವುದಾಗಿ ಸಾರಿದ್ದಾರೆ. ಇದರಿಂದ ಸಮಾಧಾನ ಹೊಂದಿ ಶಿಕ್ಷಕರು ತಮ್ಮ ಸಂಪಿನ ನಿರ್ಧಾರದ ಪುನರ್ವಿಚಾರ ಮಾಡುವದವಶ್ಯವಾಗಿದೆ. ಸಂಬಳ ಪ್ರಮಾಣದ ವಿಷಯದ ನಿರ್ಣಯ ಎಲ್ಲ ಸರಕಾರಿ ನವಕರರ ಸಂಬಳ ನಿರ್ಣಯಿಸುವಾಗಲೆ ಆಗತಕ್ಕದ್ದು. ಇದಕ್ಕಾಗಿ ಸರಕಾರದವರು ಸಂಬಳ ಸಮಿತಿಯನ್ನು ನೇಮಿಸಿರುವರು ಆ ಸಮಿತಿಯ ಶಿಫಾರಸುಗಳು ಹೊರಗೆ ಬರುವ ವರೆಗೆ ಶಿಕ್ಷಕರು ಆ ಬಗ್ಗೆ ಹಟಹಿಡಿಯದಿರುವುದು ಒಳಿತೆಂದು ಹೇಳಬೇಕಾಗುತ್ತದೆ. ಮಾರ್ಚ ೧ ರೊಳಗಾಗಿ ಎಲ್ಲ ಶಿಕ್ಷಕರಿಗೂ ಸಲ್ಲಬೇಕಾದ ಹಣ ಕೊಡಿಸಿಬಿಡುತ್ತೇವೆಂದು ಮಾನ್ಯ ಮಂತ್ರಿಗಳು ಸಾರಿರುವಾಗ ಶಿಕ್ಷಕರು ತಮ್ಮ ನಿರ್ಣಯಗಳಿಂದ ಹೇಳಿಕೆಗಳಿಂದ ಇಲ್ಲವೆ ಮತ ಪ್ರದರ್ಶನಗಳಿಂದ ಪರಿಸ್ಥಿತಿಯನ್ನು ಹದಗೆಡಿಸಬಾರದು. ಈಗ ಪ್ರಾಂತದಲ್ಲಿ ಜನತಾ ರಾಜ್ಯವಿದೆ ಅದನ್ನು ಅಪ್ರಿಯ ಮಾಡಲು ಪ್ರಯತ್ನಿಸುವುದರಿಂದ ಹಿತಕ್ಕಿಂತ ಅಹಿತವೆ ಹೆಚ್ಚಾಗುವುದು. ಆದುದರಿಂದ ಶಿಕ್ಷಕರು ತಮ್ಮ ಕೃತಿಯಿಂದ ಪರಿಸ್ಥಿತಿಯನ್ನು ಕೆಡಿಸಬಾರದು. ಇನ್ನು ಸರಕಾರದವರಾದರೂ ತಮ್ಮ ಆಶ್ವಾಸನದಂತೆ ಶಿಕ್ಷಕರಿಗೆ ಸಿಗತಕ್ಕ ಹಣವನ್ನು ಕೊಡಿಸಬೇಕು. ಪ್ರಾಥಮಿಕ ಶಿಕ್ಷಣ ಸೂತ್ರಗಳನ್ನು ಸರಕಾರದವರು ತಮ್ಮ ಕೈಯಲ್ಲಿಯೆ ತೆಗೆದುಕೊಳ್ಳುವುದು ಅವಶ್ಯವೆಂದು ಈ ವರೆಗಿನ ಅನುಭವದಿಂದ ಸಿದ್ಧವಾಗುವುದು ಶಿಕ್ಷಣ ಕೇಂದ್ರ ಸಲಹೆ ಸಮಿತಿಯವರೂ ಹಾಗೆಯೆ ಸಲಹೆ ಕೊಟ್ಟವರು. ಆದುದರಿಂದ ಮುಂಬಯಿ ಸರಕಾರದವರು ಈ ಬಗ್ಗೆಯೂ ವಿಚಾರ ಮಾಡಿ ಶಿಕ್ಷಣ ಸೂತ್ರಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಶಾ[illegible]ವಾಗಿ ಶಿಕ್ಷಕರ ಅಂಜಿಕೆಯನ್ನು ಹೋ[illegible] ಬೇಕೆಂದು ಸೂಚಿಸದಿರಲಾರೆವು.